ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಕೆ.ಸಿ.ಉದಯಕುಮಾರ

ಮಾರ್ಗದರ್ಶಕರು
ಡಾ. ಸಿ. ಮಹಾದೇವ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ

ಸಮಾಜವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮

ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ ಎಂ.ಫಿಲ್.
ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಕೆ.ಸಿ.ಉದಯಕುಮಾರ

ಮಾರ್ಗದರ್ಶಕರು
ಡಾ. ಸಿ. ಮಹಾದೇವ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ

ಸಮಾಜವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೦೮

ಪ್ರಮಾಣ ಪತ್ರ

"ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ" ಎಂಬ ನಿಬಂಧವನ್ನು **ಡಾ.ಸಿ.ಮಹದೇವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

(ಕೆ.ಸಿ.ಉದಯಕುಮಾರ)
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

"ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಕೆ.ಸಿ. ಉದಯಕುಮಾರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೧೪-೧೦-೨೦೦೮

(ಡಾ. ಸಿ.ಮಹದೇವ)

ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬


ಮೈಸೂರು ಜಿಲ್ಲೆ
ಕೃಷ್ಣರಾಜನಗರ
ಪಿರಿಯಾಪಟ್ಟಣ
ಹುಣಸೂರು
ಮೈಸೂರು
ತಿ.ನರಸೀಪುರ
ನಂಜನಗೂಡು
ಹೆಗ್ಗಡದೇವನಕೋಟೆ

ಪಿರಿಯಾಪಟ್ಟಣ ತಾಲ್ಲೂಕಿನ ನಕ್ಷೆ.



ಅಧ್ಯಾಯ : ಒಂದು

ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ

ಅಧ್ಯಾಯ : ಒಂದು

ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ

ಚರಿತ್ರೆ ಎಂಬುವುದು ಕೇವಲ ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಯಾಗಿರದೆ ಅಥವಾ ಘತಕಾಲದ ಘಟನೆಯಾಗಿರದೆ, ಜನತೆಯ ಕಲ್ಯಾಣದ ಪ್ರಗತಿಯ ಗುರಿಯನ್ನು ಒಳಗೊಂಡಿರುವ ಅಂಶವಾಗಿರುವುದಾಗಿದೆ. ಮಾನವ ಸಮೂಹಗಳಿಗೆ ಬೇಕಾದ ಆದರ್ಶ ರಾಜ್ಯಭಾರ, ಆಡಳಿತ ಕ್ರಮ, ನೈತಿಕ ಮತ್ತು ನ್ಯಾಯಯುತ ಮಾನವೀಯ ಮೌಲ್ಯಗಳನ್ನು ಮತ್ತು ಧಾರ್ಮಿಕತೆಯನ್ನು ಒಳಗೊಂಡ ಆದರ್ಶವಾದ ಅಂಶಗಳಾಗಿರುವುದಾಗಿದೆ. ಆದರೆ ಹಲವು ಸಮಯಗಳಲ್ಲಿ ಅರಸರ ಅಥವಾ ಪ್ರಬಲ ವ್ಯಕ್ತಿಗಳ ಆಶ್ರಯದಲ್ಲಿ ಆಶ್ರಯವನ್ನು ಪಡೆದ ಅಧಿಕಾರಿಗಳು, ವಿದ್ವಾಂಸರು ಮತ್ತು ಇತರೆ ವ್ಯಕ್ತಿಗಳು ಅವರ ಪ್ರಾಬಲ್ಯಕ್ಕೆ ಒಳಗಾಗಿ ಕೇವಲ ಒಳಿತಾಗಿರುವ ಅಂಶವನ್ನೇ ದಾಖಲಿಸಿರುವುದಾಗಿದೆ. ಇಂಥ ಸಮಯದಲ್ಲಿ ಅವರ ಅಪ್ರಯೋಜಕ ಅಂಶಗಳನ್ನು ದಾಖಲಿಸ ಇರುವುದು, ವ್ಯಕ್ತಿನಿಷ್ಟ ಮತ್ತು ವಸ್ತುನಿಷ್ಟ ವಿಚಾರಗಳಿಗೆ ಅಪಮಾನ ಮಾಡಿದಂತೆ ಆಗುವುದಾಗಿದೆ. ಇಂಥ ಸಂದರ್ಭದಲ್ಲಿ ಗತಿಸಿಹೋದ ಮಾನವನ ಚರಿತ್ರೆ ಅಥವಾ ಮನವ ಸಮುದಾಯ ಹಾಗೂ ಜೀವ ಸಮುದಯದ ಅಂದಿನ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಪದ್ಧತಿ, ಅಂತರಾಷ್ಟ್ರೀಯ ಸಂಬಂಧವಾದ, ವ್ಯಾಪಾರ, ವಾಣಿಜ್ಯ, ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ಅಧ್ಯಯನ ಮಾಡುವುದರ ಮೂಲಕ ಸಹಾಯಕವಾಗಬಲ್ಲದು.

ಇತಿಹಾಸ ಪೂರ್ವಕಾಲದಲ್ಲಿ ಮಾನವನ ಜೀವನ ಚರಿತ್ರೆಯನ್ನು ತಿಳಿಯಲು ನಮಗೆ ಆಧಾರಗಳ ಕೊರತೆ ಕಂಡುಬರುತ್ತದೆ. ಅಂಥ ಸಮಯದಲ್ಲಿ ಮಾನವನು ತನಗೆ ಬೇಕಾದ ವಸ್ತುಗಳನ್ನು ತಯಾರಿಸಿಕೊಂಡು ಉಪಯೋಗಿಸಿ ಬಿಟ್ಟುಹೋದ ಪ್ರತಿಯೊಂದು ವಸ್ತುಗಳ ಅವಶೇಷಗಳನ್ನು ಸಂಶೋಧನೆ ಕಾರ್ಯ ಕೈಗೊಂಡು ನಂತರ ಉತ್ಖನನ ಮಾಡಿ, ಉತ್ಖನನ ಕಾರ್ಯದಲ್ಲಿ ಕಂಡುಬಂದ ಅವಶೇಷಗಳನ್ನು ವೈಜ್ಞಾನಿಕ ಪದ್ಧತಿಗೆ ಒಳಪಡಿಸುವುದರ ಮೂಲಕ ಇತಿಹಾಸ ಪುನರ್ ನಿರ್ಮಾಣ ಮಾಡಬಹುದಾಗಿದೆ.

ಇತಿಹಾಸದಲ್ಲಿ ಮಾನವನೇ ಕೇಂದ್ರಬಿಂದು. ಹಾಗಾಗಿ ಮಾನವನ ಚಟುವಟಿಕೆಗಳನ್ನು ಮತ್ತು ಪ್ರಮುಖ ಘಟನೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ನಿರೂಪಿಸುವುದೇ ಇದರ ಪ್ರಮುಖ ಗುರಿಯಾಗಿರುವುದಾಗಿದೆ. ಆದರೆ ಮಾನವನಿಗೆ ಅಕ್ಷರಜ್ಞಾನ ಪರಿಚಯವಿಲ್ಲದ ಪೂರ್ವ ಕಾಲದಲ್ಲಿ ಮಾನವನ ಜೀವನ ಚರಿತ್ರೆಯನ್ನು ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು

ಕಷ್ಟಕರವಾಗುವುದು. ಅಂಥಹ ಸಮಯದಲ್ಲಿ ಪುರಾತತ್ವ ಆಕಾರಗಳನ್ನು ಅವಲೋಕಿಸುವುದರ ಮೂಲಕ ಚರಿತ್ರೆಯನ್ನು ಪುನರ್ ನಿರ್ಮಾಣ ಮಾಡಲು ಸಹಾಯಕವಾಗುವುದಾಗಿದೆ. ಆದ್ದರಿಂದ ಇತಿಹಾಸ ಪೂರ್ವ ಮತ್ತು ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳ ಅಧ್ಯಯನಕ್ಕೆ ಪುರಾತತ್ವಶಾಸ್ತ್ರವೇ ಮೂಲ ಸಾಧನವಾಗಿದೆಯೆಂಬುದು ಸ್ಪಷ್ಟವಾಗಿದೆ. ಏಕೆಂದರೆ ನಾಲ್ಕು ಸುದೀರ್ಘ ಅವಧಿಯ ಇತಿಹಾಸ ಪೂರ್ವಕಾಲದ ಅನಕ್ಷರ ಹಾಗೂ ಪೂರ್ವಭಾವಿ ಇತಿಹಾಸ ಕಾಲದ ಸಾಕ್ಷರ ಮಾನವನ ಇತಿಹಾಸದ ರಚನೆಗೆ ಲಿಖಿತಾಧಾರಗಳು ಲಭ್ಯವಿರುವುದಿಲ್ಲ. ಪ್ರಾಚ್ಯ ಅವಶೇಷಗಳ ಅಧ್ಯಯನ ಅಂಥ ಸಂಸ್ಕೃತಿಗಳನ್ನು ಅರಿತುಕೊಳ್ಳುವುದಕ್ಕೆ ಮಾಹಿತಿ ಒದಗಿಸುತ್ತವೆ. ಪ್ರಾಚೀನ ಮಾನವನು ವಾಸಿಸುತ್ತಿದ್ದ ಗುಹೆಗಳು ಅಥವಾ ಬೀಡು ಬಿಟ್ಟಿದ್ದ ನೆಲೆಗಳು, ಅವನು ನಿರ್ಮಿಸಿ ಉಪಯೋಗಿಸುತ್ತಿದ್ದ ಕಲ್ಲಿನ ಲೋಹದ ಆಯುಧೋಪಕರಣಗಳು, ಮಣ್ಣಿನ ಪಾತ್ರೆಗಳು, ಬಂಡೆಗಳ ಮೇಲೆ ಬರೆದ ವರ್ಣಚಿತ್ರಗಳು, ಸಮಾಧಿಗಳು ಮುಂತಾದವುಗಳು ಆಳವಾದ ಅಧ್ಯಯನದಿಂದ ಪ್ರಾಚೀನ ಸಂಸ್ಕೃತಿಗಳ ಸ್ಥೂಲ ಚಿತ್ರಣ ಚಿತ್ರಿಸಲು ಸಾಧ್ಯವಾಗುವುದಾಗಿದೆ.[೧] ಇದರಿಂದ ಮಾನವನ ಗತಕಾಲದ ಜೀವನ ಸಂಸ್ಕೃತಿಗಳನ್ನು ಪುನರ್ ರಚಿಸಿ, ಅರಿತು, ಅರ್ಥಪರಾಮರ್ಶೆ ಮಾಡುವುದಾಗಿದೆ. ಹಳೆಯ ಸಮಾಜಗಳು, ಅವುಗಳ ಸಂಸ್ಕೃತಿ ಮತ್ತು ಆ ಸಂಸ್ಕೃತಿಗಳ ಪರಿವರ್ತನೆ ಇವುಗಳ ಅಧ್ಯಯನವು ಪರಾತತ್ವ ಶಾಸ್ತ್ರದ ಪರಿಧಿಯಲ್ಲಿ ಸೇರಿವೆ. ಮಾನವನ ವಿಕಾಸ ಕ್ರಮದಲ್ಲಿ ಅವನ ಸಾಧನೆಗಳು ಏರಿಳಿತಗಳು, ಅವುಗಳ ಕಾರಣ, ಗತಿ ಹಾಗೂ ಪರಿಣಾಮಗಳನ್ನು ಪುರಾತತ್ವಶಾಸ್ತ್ರಜ್ಞರು ಅಧ್ಯಯನ ಮಾಡುತ್ತಿದ್ದಾರೆ. ಮಾನವ ಸಂಸ್ಕೃತಿಯ ಉತ್ಪತ್ತಿ ವಿಕಾಸಗಳಲ್ಲಿ ಪರಿಸರದ ಪಾತ್ರ ಹಾಗೂ ಪರಿಸರದಲ್ಲುಂಟಾದ ಬದಲಾವಣೆಗಳಲ್ಲಿ ಮಾನವ ಸಂಸ್ಕೃತಿಯ ಪ್ರಭಾವ ಪ್ರಮುಖವಾಗಿರುವುದಾಗಿದೆ.[೨]

ಆಧುನಿಕ ಜಗತ್ತು ವೈಜ್ಞಾನಿಕ, ತಾಂತ್ರಿಕತೆ ಮತ್ತು ಗಣಕಯಂತ್ರ ಯುಗಗಳೆಂಬ ಮುಂತಾದ ವಿಧಾನಗಳು ಪ್ರಸ್ತುತ ಚಾಲ್ತಿಯಲ್ಲಿದ್ದು ಸಾಮಾಜಿಕ ವಿಜ್ಞಾನಗಳು ಇಂದಿನ ಆಧುನಿಕ ಯುವ ಜನ ಸಮುದಾಯದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದರೆ ತಪ್ಪಾಗುವುದಿಲ್ಲ. ಅಲ್ಲದೆ ಇಂದಿನ ಯುವ ಸಮೂಹವು ಸಾಮಾಜಿಕ ವಿಜ್ಞಾನಗಳನ್ನು ಅಲ್ಲಗಳೆಯುತ್ತ, ಸಾಮಾಜಿಕ ವಿಜ್ಞಾನಗಳನ್ನು ಅಧ್ಯಯನ ಮಾಡುವುದರಿಂದ ಆಗುವ ಪ್ರಯೋಜನವೇನು? ಸಮಾಜವನ್ನು ಪರಿವರ್ತಿಸಲು ಸಾಧ್ಯವೇ? ಇವುಗಳಿಂದ ಪರಿಣಾಮಗಳನ್ನು ಕಾಣಲು ಸಾಧ್ಯವೇ ಎಂಬ ಮುಂತಾದ ಪ್ರಶ್ನೆಗಳನ್ನು ಪ್ರಶ್ನಿಸುತ್ತಿರುವ ವೇಳೆಯಲ್ಲಿ ಪುರಾತತ್ವ ಅಧ್ಯಯನ ಈ ಮೇಲಿನ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗಿರುವುದಾಗಿದೆ ಎಂದು ದೃಢವಾಗಿ ಹೇಳಬಹುದು. ಇಟಲಿಯಲ್ಲಿ ಪುನರುಜ್ಜೀವನ ಚಳವಳಿಯು ನಡೆಯಲು ಪ್ರಮುಖ ಕಾರಣವೆಂದರೆ ಆ ದೇಶದಲ್ಲಿಯ ಪುರಾತತ್ವ ಅವಶೇಷಗಳೇ ಎಂದು ಹೇಳಬಹುದಾಗಿದೆ. ಈ ಪುರಾತನ ಅವಶೇಷಗಳನ್ನು ಸಂಗ್ರಹಿಸುವುದರ ಮೂಲಕ

ಪುನರುಜ್ಜೀವನ ಚಳವಳಿಗೆ ಕಾರಣರಾದರು. ನಂತರ ಇವರಿಂದ ಪ್ರಭಾವಿತರಾದ ಜನತೆ ಮುಂದಿನ ದಿನಗಳಲ್ಲಿ ವಿವಿಧ ರಾಷ್ಟ್ರಗಳ ನಿರಂಕುಶ ಪ್ರಭುತ್ವದ ವಿರುದ್ಧ ಚಳವಳಿ ನಡೆಸಿ ಸ್ವಾತಂತ್ರ್ಯವನ್ನು ಪಡೆದಿರುವುದಾಗಿದೆ. ನಮ್ಮ ದೇಶವು ಬ್ರಿಟಿಷರ ಸಂಕೋಲೆಯಿಂದ ಸ್ವಾತಂತ್ರ್ಯವನ್ನು ಪಡೆಯಲು ಸಾಮಾಜಿಕ ವಿಜ್ಞಾನಗಳ ಪಾತ್ರ ಮಹತ್ತರವಾದುದ್ದು ಎಂದು ಹೇಳಬಹುದು. ಸಾಮಾಜಿಕ ವಿಜ್ಞಾನಗಳಲ್ಲಿರುವ ಮಾನವೀಯತೆಯ ಗುಣಲಕ್ಷಣಗಳು ನಾಯಕರುಗಳು ತಳೆದ ದೃಢ ನಿರ್ಧಾರ ಮತ್ತು ಅವರುಗಳ ಸಂಘಟನೆಯೇ ಈ ಮೇಲಿನ ಎಲ್ಲಾ ಪ್ರಶ್ನೆಗಳು ಎದುರುದಾಗ ಪುರಾತತ್ವ ಅಧ್ಯಯನ ಉತ್ತರವನ್ನು ನೀಡಬಲ್ಲದಾಗಿದೆ. ಜವಾಹರಲಾಲ್ ನೆಹರು ಅಭಿಪ್ರಾಯ ಪಡುವಂತೆ ಅನಾಗರಿಕತೆಯಿಂದ ನಾಗರಿಕತೆಯೆಡೆಗೆ ಸಾಗಿದ ಮಾನವನ ಕಥೆಯೇ ಇತಿಹಾಸ ಎಂಬುವುದು ಸಮಂಜಸವಾಗಿದೆ. ತನ್ನ ಊರಿನ ಪ್ರಾಂತ್ಯ, ರಾಜ್ಯದ, ದೇಶದ ಬಗ್ಗೆ ಅಧ್ಯಯನ ಮಾಡಬೇಕಾದರೆ ಸಂಶೋಧಕರಿಗೆ ಪ್ರಮುಖವಾಗಿ ಹಿಂದಿನ ಅಥವಾ ಸ್ಥಳೀಯ ಇತಿಹಾಸದ ಪರಿಜ್ಞಾನವಿರಲೇಬೇಕು. ಇದನ್ನೇ ಇತಿಹಾಸ ಪ್ರಜ್ಞೆ ಎಂದು ಕರೆದಿರುವುದು.

ಭಾರತದಲ್ಲಿ ಪ್ರಾಚ್ಯವಸ್ತುಗಳ ಬಗ್ಗೆ ನಿಜವಾದ ಆಸಕ್ತಿ ಪ್ರಾರಂಭವಾದದ್ದು ಪಾಶ್ಚತ್ಯರ ಆಗಮನದ ನಂತರವೇ. ಭಾರತೀಯ ಸಾಹಿತ್ಯವು ಅಪಾರವಾಗಿದ್ದರೂ ಒಬ್ಬ ಲೇಖಕನು ಭಾರತದಲ್ಲಿಯ ವಿಪುಲ ಪ್ರಾಚ್ಯ ಅವಶೇಷಗಳನ್ನು ನೈಜ ಕುತೂಹಲ ದೃಷ್ಟಿಯಿಂದ ನೋಡದಿದ್ದುದು ಚಕಿತಗೊಳಿಸುವ ವಿಷಯವೇ ಸರಿ.[4] ಇದಕ್ಕೆ ಅಪವಾದವೆನಿಸಿ ವಾಸ್ತವಿಕ ದೃಷ್ಟಿಯಿಂದ ಇತಿಹಾಸದೆಡೆಗೆ ಕಣ್ಣು ಹಾಯಿಸಿದ ಓರ್ವನೇ ಭಾರತೀಯ ಇತಿಹಾಸಕಾರನೆಂದರೆ ಕಲ್ಹಣ. ಹನ್ನೊಂದನೆಯ ಶತಮಾನದ ಕಾಶ್ಮೀರ ಇತಿಹಾಸಕಾರನಾದ ಇವನು ವಿವಿಧ ಮೂಲ ಸಾಮಗ್ರಿಗಳನ್ನು ಕಲೆಹಾಕಿ, ಅರ್ಥೈಯಿಸಿ, ವಾಸ್ತವಿಕ ಇತಿಹಾಸದ ಪ್ರಸಾರಚನೆಗೆ ಪ್ರಯತ್ನಿಸಿದವರಲ್ಲಿ ಮೊದಲಿಗನಾಗಿದ್ದಾನೆ. ನಾಣ್ಯಗಳು, ಶಾಸನಗಳು ಹಾಗೂ ಪ್ರಾಚ್ಯ ಅವಶೇಷಗಳು ಕೂಡ ಇತಿಹಾಸದ ರಚನೆಗೆ ಸಹಾಯಕವಾಗಬಲ್ಲವೆಂಬುದನ್ನು ತಿಳಿಸಿದನು.[5] ಇದು ಮುಂದೆ ಭಾರತೀಯರಲ್ಲಿ ಪ್ರಾಚ್ಯ ಅವಶೇಷಗಳ ಬಗ್ಗೆ ಆಸಕ್ತಿಯ ಬೀಜವನ್ನು ಬಿತ್ತಿತು ಎಂದು ಅರಿಯಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶಿಯ ಸಂಸ್ಥಾನಗಳಿಂದ ಆಡಳಿತ ನಡೆಯಲ್ಪಡುತ್ತಿತ್ತು. ಅಂತಹ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಪ್ರಮುಖವಾಗಿದ್ದು ಪಾಶ್ಚತ್ಯರಿಂದಲೂ ಮೆಚ್ಚುಗೆಯನ್ನು ಪಡೆದಿತ್ತು. ಅಂದಿನ ಮೈಸೂರು ಸರ್ಕಾರವು ೧೮೮೪ರಲ್ಲಿ ಬಿ.ಎಲ್.ರೈಸ್‌ರವರನ್ನು ಪುರಾತತ್ವ ಇಲಾಖೆಯ ಅಧಿಕಾರಿಯನ್ನಾಗಿ ನೇಮಕ ಮಾಡಿತು.[6] ಆರು ವರ್ಷಗಳ ನಂತರ ಈ ಇಲಾಖೆಗೆ ಅವರನ್ನೇ ಪುನಃ ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ನೇಮಕ ಮಾಡಲಾಯಿತು. ಇವರು ತಮ್ಮ ೩೨ ವರ್ಷಗಳ ಸೇವಾವಧಿಯಲ್ಲಿ ೯೦೦೦ ಶಾಸನಗಳನ್ನು (ಪ್ರಕಟಿಸಿ, ಇಲಾಖೆಗೆ ಭದ್ರವಾದ ತಳಹದಿಯನ್ನು ಹಾಕಿದರು) ಸಂಗ್ರಹಿಸಿ ಎಪಿಗ್ರಾಫಿಯ ಕರ್ಣಾಟಿಕ ಎಂಬ ೧೨

ಸಂಪುಟಗಳನ್ನು ೧೮೮೬ ರಿಂದ ಪ್ರಾರಂಭಿಸುವುದರ ಮೂಲಕ ಪ್ರಾದೇಶಿಕ ಚರಿತ್ರೆಯನ್ನು ಅಥವಾ ಪ್ರಾಬಲ್ಯ ಹೊಂದಿದ್ದ ಮತ್ತು ಬಲಾಢ್ಯರಲ್ಲದ ಚರಿತ್ರೆಯನ್ನು, ಪ್ರಾಚ್ಯ ಅವಶೇಷಗಳನ್ನು ಸಂಗ್ರಹಿಸುವುದರ ಮೂಲಕ ತಮ್ಮ ಮುಂದಿನ ಚರಿತ್ರೆಯ ಕುರುಹುಗಳನ್ನು ಸಂಗ್ರಹಿಸುವುದರೊಂದಿಗೆ ಪ್ರಾದೇಶಿಕ ಅಧ್ಯಯನಕ್ಕೆ ಮೂಲ ತಳಪಾಯವನ್ನು ಹಾಕಿದರು ಎಂದು ಹೇಳಬಹುದು.

ಮಾನವನ ಪ್ರಗತಿಯ ಪರಂಪರೆಯಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಮಾನಸಿಕ ಶಕ್ತಿಗಳು, ಹೇಗೆ ಪ್ರಭಾವವನ್ನು ಬೀರಿದವು ಎಂಬುವುದರ ಅಧ್ಯಯನವೇ ಇತಿಹಾಸ. ಕಾಲ ಮತ್ತು ದೇಶಗಳ ಚೌಕಟ್ಟಿನೊಳಗೆ ಗತಕಾಲದ ಜೀವನವನ್ನು ಅದು ನಿರೂಪಿಸುತ್ತದೆ. ಅದೊಂದು ಮಾನವಿಕ ವಿಜ್ಞಾನ. ಗತಕಾಲದ ಘಟನೆಗಳನ್ನು ಸರಿಯಾಗಿ ಜೋಡಿಸುವುದು, ವಿಶ್ಲೇಷಿಸುವುದು ಮಾತ್ರವಲ್ಲದೆ ಘಟನೆಗಳು ಹೇಗೆ ಮತ್ತು ಏಕೆ ಸಂಭವಿಸಿದವು ಎಂಬುದನ್ನು ಸಂಶೋಧಿಸುವುದೇ ಇತಿಹಾಸದ ಕರ್ತವ್ಯ. ಆದ್ದರಿಂದ ಇತಿಹಾಸವೆಂದರೆ ಮಾನವನು ಬೌದ್ಧಿಕವಾಗಿ ತನ್ನ ಜೀವನವನ್ನು ಉತ್ತಮ ಪಡಿಸಿಕೊಳ್ಳಲು ಮತ್ತು ಸುವ್ಯವಸ್ಥಿತ ಸಮಾಜವನ್ನು ನಿರ್ಮಾಣ ಮಾಡಲು ತನ್ನ ಬುದ್ಧಿಶಕ್ತಿಯನ್ನು ಹೇಗೆ ಉಪಯೋಗಿಸಿಕೊಂಡ ಎಂಬುವುದರ ನಿರೂಪಣೆ. ಇದನ್ನು ನಾವು ನಾಗರಿಕತೆ ಮತ್ತು ಸಂಸ್ಕೃತಿ ಎಂದು ಕರೆಯುತ್ತೇವೆ. ಸಂಸ್ಕೃತಿ ಎಂಬುವುದು ಕ್ಲಿಷ್ಟವಾದ ಒಂದು ಕಲ್ಪನೆ. ಅದರಲ್ಲಿ ಜ್ಞಾನ, ನಂಬಿಕೆ, ಕಲೆ, ನಡುವಳಿಕೆ, ಸಂಪ್ರದಾಯ ಮೊದಲಾದವು ಅಡಕವಾಗಿವೆ.

ಮಾನವನ ಸುಖವನ್ನು ಹೆಚ್ಚಿಸುವ ಪ್ರಮುಖಾಂಶಗಳಲ್ಲಿ ನಗರ ವ್ಯವಸ್ಥೆಯು ಒಂದು. ನಗರ ಅಥವಾ ಪುರ ಎಂದಾಕ್ಷಣ ಸಾಮಾನ್ಯವಾಗಿ ನಾಗರಿಕತೆಯನ್ನು ಒಳಗೊಂಡಂತಹ ಸುಶಿಕ್ಷಿತರು, ವರ್ತಕರು, ನೆಲೆಸುವುದರ ಜೊತೆಗೆ ಹೆಚ್ಚು ಉತ್ಪಾದನೆಯನ್ನು ಒಳಗೊಂಡಂತಹ ಜನತೆಯ ಪ್ರದೇಶವೆಂದೇ ಸಾಮಾನ್ಯವಾಗಿ ಹೇಳಬಹುದಾಗಿದೆ. ಇಂತಹ ನಗರ ಅಧ್ಯಯನ ವಿಧಾನವನ್ನು ಹುಟ್ಟು ಹಾಕಿದವರು ಸಮಾಜ ವಿಜ್ಞಾನಿಗಳು. ಸಮಾಜ ವಿಜ್ಞಾನಿಗಳ ಚಿಂತನೆಗಳು, ನಗರ ಪ್ರದೇಶಗಳನ್ನು ಒಂದು ವಿಶೇಷವಾದ, ಸಮಾಜ ಎಂಬುದಾಗಿ ಗುರುತಿಸಿತು. ಅದೇ ರೀತಿ ನಗರ ವ್ಯವಸ್ಥೆಯು ವಿಭಿನ್ನ ಸ್ವರೂಪದ ಮಾನವ ಬದುಕಿನ ಮತ್ತು ದುಡಿಮೆಯ ತಾಣ ಹಾಗೂ ನಿರಂತರತೆಯನ್ನೊಳಗೊಂಡ ಒಂದು ಸಂಘಟಿತ ಸಮಾಜ ಎನ್ನುವ ತೀರ್ಮಾನವನ್ನು ನೀಡಿತು. ನಗರ ಜೀವನದ ಸಂಕೀರ್ಣತೆ ಹಾಗೂ ಬಹುರೂಪಿ ಲಕ್ಷಣಗಳು ಚರಿತ್ರೆಯ ಬೆಳವಣಿಗೆಯ ಗತಿಯನ್ನು ನಿರ್ಧರಿಸುವ ಮತ್ತು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ ಎನ್ನುವುದು ತಿಳಿದುಬರುತ್ತದೆ. ಒಂದು ಹಳ್ಳಿ, ದೇಶ ಪಟ್ಟಣವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯೇ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಪರಿವರ್ತನೆಯ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಉತ್ಪಾದನೆ, ಜನಸಂಖ್ಯೆಯ ಹೆಚ್ಚಳ, ಕುಶಲಕರ್ಮಿಗಳು, ವ್ಯಾಪಾರ ವಾಣಿಜ್ಯ, ವರ್ತಕ ಸಂಘಗಳು, ಧರ್ಮ,

ಶಿಕ್ಷಣ, ಆಡಳಿತ, ಜಮೀನ್ದಾರರು, ಭೌಗೋಳಿಕ ಸನ್ನಿವೇಶ ಮುಂತಾದವು ಪ್ರಮುಖ ಪಾತ್ರ ವಹಿಸುತ್ತಿರುತ್ತವೆ.[೭] ನಾಗರಿಕತೆಯ ಜೊತೆ ಜೊತೆಯಲ್ಲಿಯೇ ಸಂಸ್ಕೃತಿಯು ಮುಂದುವರೆಯುವುದು. ಸಂಸ್ಕೃತಿಯು ಎಲ್ಲಾ ಪ್ರಾಣಿಜೀವಿಗಳಿಗೂ ಅನ್ವಯಿಸುವುದು. 'ಮನುಷ್ಯನು ಪ್ರಾಣಿಗಳಲ್ಲಿ ಒಬ್ಬನಾದರೂ ತಾನು ಪ್ರಾಣಿಗಳಿಗಿಂತ ಭಿನ್ನ ಎಂದು ಹೇಳಿಕೊಳ್ಳುತ್ತಾನೆ. ಹಾಗಾದರೆ ಅವನು ಪ್ರಾಣಿಗಳಿಗಿಂತ ಬೇರೆ ಎಂದು ತೋರಿಸುವ ಅಂಶ ಯಾವುದು? ಪ್ರಾಣಿಗಳಿಗೆ ಬುದ್ದಿಯಿಲ್ಲ. ಅವುಗಳಲ್ಲಿ ಸಾಮಾಜಿಕ ಒಕ್ಕೂಟವಿಲ್ಲ. ವಾಕ್‌ಶಕ್ತಿಯಿಲ್ಲ, ಇಷ್ಟೂ ಮನುಷ್ಯರಿಗೆ ಇದೆ ಎಂದು ಹೇಳಬಹುದಾದರೆ ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಎಲ್ಲ ಅಂಶವನ್ನು ಒಂದು ಮಾತಿನಲ್ಲಿ ಹೇಳಬಹುದು. ಅದೇ 'ಸಂಸ್ಕೃತಿ' ಮನುಷ್ಯನಿಗೆ ಸಂಸ್ಕೃತಿಯುಂಟು, ಪ್ರಾಣಿಗಳಿಗೆ ಸಂಸ್ಕೃತಿಯಿಲ್ಲ.[೮]

ಭಾರತದಲ್ಲಿ ಸಂಸ್ಕೃತಿಯ ಉಗಮ, ಬೆಳವಣಿಗೆ ಮತ್ತು ಸಂರಕ್ಷಣೆಯ ನೆಲೆಗಳಿಂದ ಗ್ರಾಮೀಣ ಪ್ರದೇಶಗಳು, ಭಾರತದ ಪ್ರಾಚೀನ ಸಂಸ್ಕೃತಿಯು ಇಂದಿಗೂ ಉಳಿದುಕೊಂಡು ಬರಲು ಕಾರಣವೆಂದರೆ ಪ್ರಾದೇಶಿಕ ಜನತೆಯು ಎಂದು ಹೇಳುಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಹಾಗೂ ಪ್ರಾದೇಶಿಕ ನೆಲೆಯಲ್ಲಿ ಇತಿಹಾಸವನ್ನು ಅಮೂಲಾಗ್ರವಾಗಿ ಸಂಶೋಧನೆಗೆ ಒಳಪಡಿಸಬೇಕೆನ್ನುವ ಪ್ರತಿಪಾದನೆಯನ್ನು ನಾವು ಎಲ್ಲೆಡೆ ಕೇಳುತ್ತಿದ್ದೇವೆ. ಗ್ರಾಮ ಅಥವಾ ಚಾರಿತ್ರಿಕವಾಗಿ ಪ್ರಮುಖವಾಗಿರುವ ಒಂದು ನೆಲೆ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲೆಗಳ ಮಟ್ಟದ ಘಟಕಗಳ ಚಾರಿತ್ರಿಕ ಶೋಧನೆ ಈಗಾಗಲೇ ಪ್ರಾರಂಭ ಆಗಿದೆ.[೯] ಅಲ್ಲದೇ ಸ್ಥಳೀಯ ಮಟ್ಟದಲ್ಲಿ ರೂಪುಗೊಂಡು ಭೌಗೋಳಿಕವಾಗಿ ವ್ಯಾಪಕಗೊಳ್ಳುತ್ತ ಆಯಾಕಾಲದ ಪ್ರಬಲ ಜನವರ್ಗಗಳ ಸಾಮಾಜಿಕ, ಆರ್ಥಿಕ ಅಂತಸ್ತು ಹಾಗೂ ಪ್ರಬಲ ತತ್ವಪರಿಣಾಮಗಳ ಪ್ರಭಾವದಿಂದಲೂ ಸ್ಥಳೀಯತೆಯನ್ನು ಮೀರಿದ ವಿನ್ಯಾಸಗಳಾಗಿ ಮಾರ್ಪಾಡುತ್ತ ಏಕರೂಪಗೊಳ್ಳುತ್ತಾ ಹೋದ ಆಯಾಮಗಳನ್ನು ಪರಿಶೀಲಿಸುವುದೂ ಮುಖ್ಯವಾಗಬೇಕು. ಅಧ್ಯಯನದ ನೆಲೆ ಸ್ಥಳೀಯವಾದರೂ ಆ ವಿವರಗಳನ್ನು ಗ್ರಹಿಸುವ ಹಾಗೂ ಮಂಡಿಸುವ ಪರಿಪ್ರೇಕ್ಷ ಸ್ಥಳೀಯತೆಯನ್ನು ಮೀರಿದ್ದಾಗಿರಬೇಕು ಎಂಬ ಕಾಳಜಿಯೊಂದಿಗೆ ಅಂಥ ವಿಶ್ಲೇಷಣಾತ್ಮಕ ಪರಿಪ್ರೇಕ್ಷಗಳು ಸ್ಥಳೀಯ ಹಾಗೂ ಪ್ರಾದೇಶಿಕ ಚರಿತ್ರೆಯ ವೈಶಿಷ್ಟ್ಯಗಳ ತಲಸ್ಪರ್ಶಿ ಅಧ್ಯಯನದಿಂದಲೇ ಅಧಿಕೃತತೆಯನ್ನು ಪಡೆದುಕೊಳ್ಳಬೇಕೆಂಬ ಕಾಳಜಿಯೂ ಮುಖ್ಯವಾಗಬೇಕು.[೧೦]

ಇತಿಹಾಸ ಮತ್ತು ಪ್ರಾಗೈತಿಹಾಸಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮೈಸೂರು ಜಿಲ್ಲೆ ತನ್ನದೇ ಆದ ಮಹತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳ ಅವಶೇಷವುಳ್ಳ ಹಲವು ನೆಲೆಗಳಿವೆ. ಇತಿಹಾಸ ಕಾಲದಿಂದಲೂ ಅನೇಕ ರಾಜಮನೆಗಳು, ಸಾಮಂತರು, ಅಧಿಕಾರ ವರ್ಗ, ಆಡಳಿತ ನಿರ್ವಹಿಸಿರುವ ದಾಖಲೆಗಳಿವೆ. ಜಿಲ್ಲೆಯ ಹರಿದಿರುವ ಕಾವೇರಿ ಮತ್ತು ಕಪಿಲ ಅದರ ಉಪನದಿಗಳು ಈ ಪ್ರದೇಶದಲ್ಲಿ ಮಾನವ ನೆಲೆಗೊಳ್ಳಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ, ಚಂಗಾಳ್ವ, ಮೈಸೂರು ಒಡೆಯರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಹಲವು ಆಧಾರಗಳಿವೆ. ಪ್ರಾಗ್ಯೈತಿಹಾಸ ಕಾಲದ ಅವಶೇಷಗಳು ಮತ್ತು ಇತಿಹಾಸ ಕಾಲದ ಶಾಸನ ಹಾಗೂ ಸ್ಮಾರಕಗಳು, ದೇವಾಲಯಗಳು, ಅರಮನೆಗಳು, ಬಸದಿಗಳು ಗುಹದೇವಾಲಯಗಳು, ಕೋಟೆ–ಕೊತ್ತಲಗಳು ಹಾಗೆಯೇ ಶಾಸನಗಳು, ಸ್ಥಳೀಯ ಚರಿತ್ರೆಯನ್ನು ರಚಿಸಲು ಸಹಾಯಕವಾಗಿವೆ.

ಮೈಸೂರು ಜಿಲ್ಲೆಯಲ್ಲಿ ಆದಿ, ಮಧ್ಯ, ನವ ಹಾಗೂ ಬೃಹತ್ ಶಿಲಾಯುಗದ ಮತ್ತು ಇತಿಹಾಸ ಕಾಲಕ್ಕೆ ಸೇರಿದ ಹಲವು ಅವಶೇಷಗಳು ಕಂಡುಬರುತ್ತವೆ. ಅವುಗಳಲ್ಲಿ ಅಂದಿನ ಮಾನವ ಉಪಯೋಗಿಸಿದ ಆಯುಧಗಳು ಪ್ರಾಚೀನ ನೆಲೆಗಳು, ಸಂಶೋಧನಾ ಸಮಯದಲ್ಲಿ ಕಂಡುಬಂದಿರುವುದಾಗಿವೆ. ಇವುಗಳು ಆಯಾ ಕಾಲದ ಸಂಸ್ಕೃತಿಯ ಕುರುಹುಗಳಾಗಿದ್ದಾ ಅಂದಿನ ಸಾಂಸ್ಕೃತಿಕ ಜೀವನ ಚರಿತ್ರೆಯನ್ನು ರಚಿಸುವ ಅವಶೇಷಗಳಾಗಿವೆ ಎಂದು ತಿಳಿಯಬಹುದು.

ಪ್ರಸ್ತುತ ನಮ್ಮ ಅಧ್ಯಯನ ವಿಷಯ ವಸ್ತು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನಿಸಿರುವ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ "ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ"ವಾಗಿದೆ. ಬೆಟ್ಟದಪುರವು ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿಯ ಕೇಂದ್ರವಾಗಿರುವುದಾಗಿದೆ. ಇದು ಪಿರಿಯಾಪಟ್ಟಣದ ಉತ್ತರ ದಿಕ್ಕಿಗೆ ಇರುವುದು. ಪ್ರಾಚೀನ ಕಾಲದಿಂದಲೂ ಈ ಪ್ರದೇಶಕ್ಕೆ ಶ್ರೀಗಿರಿ, ಶ್ರೀಶೈಲ, ವಿಜಯಗಿರಿ, ಭೈರವಪುರ, ಮಲ್ಲಯ್ಯನ ಬೆಟ್ಟ, ಮಲ್ಲಿನಾಥತೀರ್ಥಂಕರ ಬೆಟ್ಟ, ಮಲ್ಲಿಕಾರ್ಜುನ ಬೆಟ್ಟ ಜೊತೆಗೆ ವೀಣಾದ್ರಿ, ಕುಡುಚಾದ್ರಿ ಹಾಗೂ ಬೆಟ್ಟದಪುರ ಬೆಟ್ಟ ಎಂದು ನಾನಾ ಹೆಸರುಗಳಿಂದ ಪ್ರಸಿದ್ಧಿಯನ್ನು ಪಡೆದಿರುವ ಐತಿಹಾಸಿಕ ಸ್ಥಳವಾಗಿರುವುದಾಗಿದೆ. ಹಿಂದೆ ಜೈನರ, ವೀರಶೈವರ ಮತ್ತು ಬ್ರಾಹ್ಮಣ ಸಂಕೇತಿಗಳ ಕೇಂದ್ರವಾಗಿತ್ತು. ಈ ಪ್ರದೇಶವು ಚೋಳರ ಸಾಮಂತರಾದ ಚಂಗಾಳ್ವರು ಮತ್ತು ಕೊಂಗಾಳ್ವರು ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಕೇಂದ್ರವಾಗಿತ್ತು ಎಂದು ಇಲ್ಲಿ ದೊರೆತಿರುವ ಶಾಸನಗಳಿಂದ ಕಂಡುಬಂದಿದೆ.

ಅಧ್ಯಯನದ ಉದ್ದೇಶ :

ಸತ್ಯ ಸಂಶೋಧನೆಯ ಫಲವೇ ಸಂಶೋಧನೆ. ಸತ್ಯಾನ್ವೇಷಣೆಯು ಸಕಲ ಜ್ಞಾನ ಶಾಖೆಗಳಿಗೂ ಲಕ್ಷ್ಯವಾಗಿದ್ದು ಭೌತವಿಜ್ಞಾನವು, ಭೂವಿಜ್ಞಾನವು, ಸಾಹಿತ್ಯವು, ತತ್ವಶಾಸ್ತ್ರವು ಚರಿತ್ರೆಯು ಯಾವುದೇ ಆಗಲಿ ಅದು ಸತ್ಯಾನ್ವೇಷಣೆಯ ಫಲ. ಸಂಶೋಧನೆ ಪರಿವರ್ತನೆಯಿಂದ ಕೂಡಿರುತ್ತದೆ. ಕತ್ತಲೆಯಿಂದ ಬೆಳಕಿನಡೆಗೆ, ಅಜ್ಞಾನದಿಂದ ಜ್ಞಾನದಡೆಗೆ, ಅಳುಕಿನಿಂದ ಆತ್ಮವಿಶ್ವಾಸದೆಡೆಗೆ, ಅನಾಗರಿಕತೆಯಿಂದ ನಾಗರಿಕತೆಡೆಗೆ ಸಾಗುವ ಪ್ರಕ್ರಿಯೆ ಸಂಶೋಧನೆಯಾಗಿರುವುದು. ಹೊಸ ವಿಷಯಗಳ ಅನ್ವೇಷಣೆಯು ಮತ್ತು ಹಳೆಯ ವಿಷಯಗಳ ಪುನರ್ ಪರಿಶೀಲನೆ ಸಂಶೋಧನೆಯಾಗಿದೆ ಎಂದು ಕಂಡುಬಂದಿದೆ.

ಬೆಟ್ಟದಪುರ ಪರಿಸರವು ಪ್ರಾಗೈತಿಹಾಸ ಕಾಲದಿಂದಲೂ ಜನವಸತಿಯ ಕ್ಷೇತ್ರವಾಗಿರುವುದಾಗಿದೆ. ಇದಕ್ಕೆ ಅನುಗುಣವಾಗಿ ಮಾನವ ವಸತಿಯ ಬೃಹತ್ ಶಿಲಾಯುಗದ ನೆಲೆ, ಗುಹೆಗಳನ್ನು ಸಂಶೋಧನಾಕಾರರು ಅಥವಾ ಪುರಾತತ್ವಶಾಸ್ತ್ರಜ್ಞರು ಗುರುತಿಸಿರುವರು. ಈ ಪರಿಸರವು ತುಂಬಾ ಕುತೂಹಲಕಾರವಾದ ವಿಷಯವನ್ನು ಒಳಗೊಂಡಿರುವುದು, ಅಲ್ಲದೇ ಪರಿಸರಕ್ಕೆ ಅನುಗುಣವಾಗಿ ಮುಂದುವರೆದುಕೊಂಡು ಬಂದಿದೆ. ಇದಕ್ಕೆ ಕಾರಣವಾದ ಅಂಶಗಳನ್ನು ಕಂಡುಕೊಳ್ಳುವುದು ಮತ್ತು ಅವುಗಳ ಬಗ್ಗೆ ಆದರ್ಶವಾದಿ ಆಲೋಚನೆಗಳ ಜೊತೆಗೆ ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿರುವುದಾಗಿದೆ.

ಬೆಟ್ಟದಪುರದಲ್ಲಿ ಸು.೨೯ಕ್ಕೂ ಹೆಚ್ಚು ಶಾಸನಗಳು ಕಂಡುಬಂದಿವೆ. ಈ ಶಾಸನಗಳ ಪ್ರಾಮುಖ್ಯತೆ, ದೇವಾಲಯಗಳು, ಬಸದಿಗಳು, ಗುಹಾಲಯಗಳು, ಮಂಟಪಗಳು, ಮೂರ್ತಿಶಿಲ್ಪ ಮುಂತಾದ ವಿಷಯಗಳು, ಹಾಗೂ ಬೆಟ್ಟಗುಡ್ಡಗಳಿಂದ ಆವೃತವಾಗಿರುವುದಾದಗಿದೆ. ಇದನ್ನು ಪ್ರಾಚೀನ ಕಾಲದಿಂದ ಶ್ರೀಗಿರಿ, ಬೈರವಪುರ, ಶ್ರೀಶ್ರೈಲ ಎಂಬ ಹೆಸರಿನಿಂದ ಕರೆಯುವರು. ಈ ಹಿನ್ನಲೆಯಲ್ಲಿ ಅಂದಿನ ವಾಸ್ತವಿಕತೆಯನ್ನು ಅರಿಯುವ ಉದ್ದೇಶವಾಗಿರುದಾಗಿದೆ.

ಬೆಟ್ಟದಪುರವು ಚಂಗಾಳ್ವ ಮನೆತನದ ಪ್ರಮುಖ ಧಾರ್ಮಿಕ ಸ್ಥಳವಾಗಿದ್ದು, ಈ ಹಿನ್ನಲೆಯಲ್ಲಿ ಜೈನ ಬಸದಿಗಳು, ಹೊಯ್ಸಳ, ಗಂಗ, ವಿಜಯನಗರ ಕಾಲದಲ್ಲಿ ಆದ ದೇವಾಲಯಗಳ ನಿರ್ಮಾಣ, ಪುನರುಜ್ಜೀವನ, ಧಾರ್ಮಿಕ ದಾನದತ್ತಿ ವಿಷಯಗಳು ಮತ್ತು ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿರಿಸಿಕೊಂಡು ಅದನ್ನು ವಿಸ್ತರಿಸುವ ಅಧ್ಯಯನವನ್ನು ಕೈಗೊಳ್ಳಲಾಗುವುದು. ಹಾಗೂ ಒಂದು ಶಿಸ್ತುಬದ್ಧ ಅಧ್ಯಯನದ ಚೌಕಟ್ಟಿಗೆ ಒಳಪಡಿಸಿ ಅರಿತುಕೊಳ್ಳುವ ಅವಶ್ಯಕತೆ ಹಿನ್ನಲೆಯಲ್ಲಿ ಚರ್ಚಿಸಲಾಗುವುದು.

ಪರಿಸರದ ಸುತ್ತ ಕಂಡುಬರುವ ಬೃಹತ್‌ಶೀಲಾಯುಗದ ನೆಲೆಗಳಿಗೆ ಸಂಬಂಧಿಸಿದಂತೆ ಹಲವು ಅಭಿಪ್ರಾಯಗಳನ್ನು ವಿದ್ವಾಂಸರು ಪ್ರಕಟಿಸಿದ್ದಾರೆ. ಹಾಗಾಗಿ ಇವುಗಳನ್ನು ವಿಶ್ಲೇಷಣಾತ್ಮಕವಾಗಿ ವಿಸ್ತರಿಸುವ ಅಧ್ಯಯನವಾಗಿರುವುದಾಗಿದೆ. ಅಲ್ಲದೆ ಪರಿಸರದ ದೇವಾಲಯಗಳ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸ್ಥಂಭಗಳನ್ನು ಅವಲೋಕಿಸುವುದಾಗಿದೆ. ಬೆಟ್ಟದಪುರ ಸಂಸ್ಥಾಪಕರ ಮನೆತನ, ಅವರ ಕಾಲದಲ್ಲಿ ಆದ ರಾಜಕೀಯ, ಧಾರ್ಮಿಕತೆಯ ಪ್ರಗತಿಯನ್ನು ಕುರಿತಂತೆ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನ ಪ್ರಮುಖ ಉದ್ದೇಶವಾಗಿದೆ.

ಚಾರಿತ್ರಿಕ ಕಾಲಘಟ್ಟವನ್ನು ಕುರಿತಂತೆ ಹಲವು ಲೇಖನಗಳು ಪ್ರಕಟಗೊಂಡಿರುವವು. ಆದರೆ ಅವುಗಳು ಸಮಪ್ರಮಾಣದಲ್ಲಿ ದಾಖಲಾಗದಿರುವುದರಿಂದ ಹಾಗೂ ಈ ಪರಿಸರದ ಬಗ್ಗೆ ಹೆಚ್ಚು ಮಾಹಿತಿಯು ಇಲ್ಲದಿರುವದರಿಂದ ಈ ನೆಲೆಯ ಚಾರಿತ್ರಿಕ ಹಿನ್ನಲೆಯಲ್ಲಿ ಗುರುತಿಸುವ ಉದ್ದೇಶದಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಬೆಟ್ಟದಪುರ ಪರಿಸರದ ಧಾರ್ಮಿಕ ಇತಿಹಾಸವನ್ನು ಗುರುತಿಸುವುದು, ಧರ್ಮಗಳ ವಿಷಯವು ತುಂಬಾ ಸೂಕ್ಷ್ಮವಾದದ್ದು, ಧಾರ್ಮಿಕ ಸೂಕ್ಷ್ಮತೆಗಳು ಸಂಸ್ಕೃತಿಯನ್ನು ಅಲ್ಲೋಲ-ಕಲ್ಲೋಲ ಮಾಡುವಂಥ ಸನ್ನಿವೇಶ ಸೃಷ್ಟಿಸುತ್ತದೆ. ಆಚಾರ-ವಿಚಾರ, ನಡೆ-ನುಡಿಯಲ್ಲಿ ಧರ್ಮದ ಪ್ರಭಾವವಿರುತ್ತದೆ. ಅಲ್ಲಿ ನಡೆದ ಧಾರ್ಮಿಕ ವಿಷಯಗಳನ್ನು ಕುರಿತಂತೆ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಎಲ್ಲಾದಕ್ಕಿಂತ ಮುಖ್ಯವಾಗಿ ಬೆಟ್ಟದಪುರ ಪರಿಸರದ ಚರಿತ್ರೆಯು ರಾಜ್ಯ ಪುರಾತತ್ವ ಇಲಾಖೆ ಮತ್ತು ಕರ್ನಾಟಕ ಇತಿಹಾಸದ ನಿರ್ಲಕ್ಷ್ಯಕ್ಕೆ ಒಳಗಾಗಿರುವುದಾಗಿದೆ. ಆದ್ದರಿಂದ ಈ ಪರಿಸರದ ಚರಿತ್ರೆಯನ್ನು ಕರ್ನಾಟಕ ಚರಿತ್ರೆಯಲ್ಲಿ ದಾಖಲು ಮಾಡುವ ಮಹಾದುದ್ದೇಶವು ಈ ಸಂಶೋಧನಾ ಉದ್ದೇಶಗಳ ಪ್ರಥಮ ಸಾಲಿನಲ್ಲಿ ನಿಲ್ಲುವಂಥದ್ದಾಗಿದೆ.

ಅಧ್ಯಯನದ ವ್ಯಾಪ್ತಿ:

ಇತಿಹಾಸಕ್ಕೆ ನಿರ್ದಿಷ್ಟವಾದ ವ್ಯಾಪ್ತಿಯ ಬಂಧನವಿಲ್ಲ. ಮಾನವ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಮಾತ್ರವಲ್ಲದೆ, ಭೌತ ಜಗತ್ತಿನ ಸಮಸ್ತವು ಇತಿಹಾಸದ ವ್ಯಾಪ್ತಿಗೆ ಒಳಪಟ್ಟಿದೆ ಎಂದು ತಿಳಿಯಬಹುದಾಗಿದೆ. ಇದು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ನಿರ್ಬಂಧಿಸಲಾಗುವುದಿಲ್ಲ. ಆದರೂ ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹುಮುಖ್ಯ. ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆಗೆ ಸಫಲವಾಗಬೇಕಾದರೆ ಅದಕ್ಕೆ ಒಂದು ಮಿತಿ ಅಗತ್ಯ. ಈ ನಿಯಂತ್ರಿತ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ಕಟ್ಟಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸುವುದಲ್ಲದೇ ಸಂಶೋಧಕನನ್ನು ದಾರಿ ತಪ್ಪಿಸುತ್ತದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯನ್ವಯ ಬೆಟ್ಟದಪುರ ಪರಿಸರಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಹಾಗಿದ್ದೂ ಬೆಟ್ಟದಪುರ ಪರಿಸರದ ವ್ಯಾಪ್ತಿಯನ್ನು ಮೀರಿ ನಿಂತಿದೆ. ಇವುಗಳನ್ನು ಸಾಂದರ್ಭಿಕವಾಗಿ ಆಯಾಯ ವಿಷಯಗಳಿಗೆನುಗುಣವಾಗಿ ಬಳಸಿಕೊಳ್ಳಲಾಗಿದೆ.

ಒಟ್ಟಾರೆ "ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ" ಎಂಬ ಪ್ರಸ್ತುತ ಅಧ್ಯಯನದಲ್ಲಿ ಪ್ರಾಗೈತಿಹಾಸ ಕಾಲದಿಂದ ಸ್ವಾತಂತ್ರ್ಯ ಕಾಲದವರೆಗೆ ಒಳಪಡಿಸಲಾಗಿದೆ. ಪ್ರಮುಖವಾಗಿ ಬೆಟ್ಟದಪುರ, ಬೆಟ್ಟದತುಂಗ, ಬಾರ್ಸೆ, ಕುಡುಕೂರು, ಭುವನಹಳ್ಳಿ, ಕೂಣಸೂರು, ಅನಿವಾಳು, ಮತ್ತು ದೊಡ್ಡನೇದಳೆ ಮುಂತಾದ ಪ್ರದೇಶಗಳು ಅಧ್ಯಯನದ ವ್ಯಾಪ್ತಿಯಲ್ಲಿ ಸೇರಲ್ಪಟ್ಟಿವೆ. ಮತ್ತು ಅಧ್ಯಯನದ ದೃಷ್ಟಿಯಿಂದ ಕಾಲಾವಧಿಯಲ್ಲಿ ಸಹ ನಿಗದಿಗೊಳಿಸಲಾಗಿದೆ.

ಇದುವರೆಗೆ ನಡೆದ ಅಧ್ಯಯನಗಳು:

ನಾವು ಪರಿಚಯಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬೆಟ್ಟದಪುರ ಪರಿಸರವನ್ನು ಬಿ.ಎಲ್. ರೈಸ್‌ರವರು ಮೊದಲಬಾರಿಗೆ ಬೆಳಕಿಗೆ ತಂದಿದ್ದಾರೆ. ಅನಂತರ ಸಿ. ಹಯವದನರಾವ್, ಸ್ಟ್ಯಾಯೆಲ್,

ಅಯ್ಯಂಗರ್, ಎಂ.ವಿ. ಕೃಷ್ಣರಾವ್, ಡಾ.ಬಿ.ಆರ್. ಗೋಪಾಲ್, ಡಾ. ಸೂರ್ಯನಾಥ್‌ಕಾಮತ್, ಡಾ. ಪಿ.ಕೆ.ರಾಜಶೇಖರ್, ಎಂ.ಜಿ.ನಾಗರಾಜ್‌ರಾವ್, ಪಿ.ವಿ. ಕೃಷ್ಣಮೂರ್ತಿ ಇತ್ಯಾದಿ ವಿದ್ವಾಂಸರು ಪರಿಶೀಲನೆ ಮಾಡಿದ್ದಾರೆ. ಡಾ. ಹೆಚ್.ಎಸ್. ಗೋಪಾಲರಾವ್‌ರವರು ಚಂಗಾಳ್ವರು ಎಂಬ ಗ್ರಂಥವನ್ನು ಪ್ರಕಟಿಸಿರುವರು. ಸಂ. ರಂಗಸ್ವಾಮಿ 'ಕರ್ನಾಟಕದ ದೇವಾಲಯ'ವನ್ನು, ಡಾ. ಪಿ.ಕೆ.ರಾಜಶೇಖರ್ ಅವರು 'ಶಿವಸಂಪದ', ಡಾ. ಪ್ರಾಣತಾರ್ತಿಹರನ್‌ರವರು 'ಸಂಕೇತಿ: ಒಂದು ಅಧ್ಯಯನ', ರಾಜಾರಾಮ ಹೆಗಡೆ ಮತ್ತು ಅಶೋಕ್ ಶೇಟ್ 'ಸಂಪಾದಕತ್ವದಲ್ಲಿ ಮಲೆ ಕನಾಟಕದ ಅರಸು ಮನೆತನಗಳು' ಎಂಬ ಗ್ರಂಥಗಳನ್ನು ಹೊರ ತಂದಿರುವರು. ಆದರೆ ಬೆಟ್ಟದಪುರ ಪರಿಸರದ ಪುರಾತತ್ವಕ್ಕೆ ಸಂಬಂಧಿಸಿದಂತೆ ಒಂದು ವ್ಯವಸ್ಥಿತವಾದ ಅಧ್ಯಯನವು ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು. ಅಂಥಹ ಒಂದು ಚಿಕ್ಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ವಿಧಾನಗಳು:

ಸಂಶೋಧನೆಗೆ ಅಧ್ಯಯನ ಕ್ರಮವು ಅತಿಮುಖ್ಯ. ಅಧ್ಯಯನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಉಪಯುಕ್ತ ಹಾಗೂ ಕ್ರಮಬದ್ಧವಾದ ಅಧ್ಯಯನವಿರಬೇಕಾಗುತ್ತದೆ. ಪ್ರಸ್ತುತ ಅಧ್ಯಯನದ ವಿಷಯವಸ್ತು, ಕ್ಷೇತ್ರಕಾರ್ಯವನ್ನು ಅವಲಂಬಿಸಿರುವುದಾಗಿದೆ. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಮೈಸೂರು ಜಿಲ್ಲೆಯಲ್ಲಿ ಪುರಾತತ್ವ ಮತ್ತು ಇತಿಹಾಸಗಳಿಗೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳನ್ನು ಪಟ್ಟಿ ಮಾಡಿ, ವಿವಿಧ ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ತೆಗೆದುಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತಗೊಂಡ ಬಳಿಕ "ಬೆಟ್ಟದಪುರ ಪರಿಸರ ಪರಿಸರದ ಪುರಾತತ್ವ" ಎಂಬ ವಿಷಯದಲ್ಲಿ ಯಾವ ಅಂಶಗಳು ಒಳಗೊಂಡಿರಬೇಕು ಎಂಬ ಪಠ್ಯಕ್ರಮವನ್ನು ತಯಾರಿಸಲಾಯಿತು. ನಂತರ ಮೈಸೂರು ವಿಶ್ವವಿದ್ಯಾಲಯ, ಪುರಾತತ್ವ ವಿಭಾಗ, ಮೈಸೂರು ಅರಮನೆಯಲ್ಲಿರುವ ಪುರಾತತ್ವ ಇಲಾಖೆ ಹಾಗೂ ಕೇಂದ್ರ ಪುರಾತತ್ವ ಇಲಾಖೆಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಈ ವಿಷಯದ ಅಧ್ಯಯನದ ವ್ಯಾಪ್ತಿಗೆ ಬರುವ ಪ್ರತಿಗ್ರಾಮಗಳನ್ನು ನೇರವಾಗಿ ಭೇಟಿ ನೀಡಿ, ಅಲ್ಲಿ ದೊರೆಯುವ ಸಂಪನ್ಮೂಲ ವಸ್ತುಗಳನ್ನು ಖುದ್ದಾಗಿ ವೀಕ್ಷಿಸಿ ಮತ್ತು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯಗಳನ್ನು ಕ್ರೂಢಿಕರಿಸಲಾಯಿತು.

ಅಧ್ಯಯನಕ್ಕೆ ಪೂರಕವಾಗಿ ದೊರೆಯುವ ಪ್ರಾಥಮಿಕ, ಅನುಷಂಗಿಕ ಆಧಾರಗಳು, ಎಲ್ಲಾ ಬಗೆಯ ಸರ್ಕಾರಿ, ಖಾಸಗಿ ದಾಖಲೆಗಳು, ಛಾಯಾಚಿತ್ರಗಳು, ರಾಜ್ಯಪತ್ರಾಗಾರ ಇಲಾಖೆ, ಗ್ರಂಥಾಲಯ, ಸಂಘ–ಸಂಸ್ಥೆ, ಪ್ರಕಟಿತ ಕೃತಿಗಳು, ಲೇಖನಗಳು, ವಿವಿಧ ಸಂಚಿಕೆಗಳಲ್ಲಿ ದೊರೆಯುವ ಆಧಾರಗಳನ್ನು ಮತ್ತು ಸಂಶೋಧನಾ ಲೇಖನಗಳು, ಪಿಎಚ್.ಡಿ. ಮಹಾಪ್ರಬಂಧಗಳು ಇತ್ಯಾದಿಗಳನ್ನು

ಆಧಾರಿಸಿ ಅವಶ್ಯ ವಿಷಯಗಳನ್ನು ಪರಿಶೀಲಿಸಿ ಸಂಶೋಧನೆಗೆ ತೆಗೆದುಕೊಳ್ಳಲಾಗಿದೆ. ಮತ್ತು ವೈಜ್ಞಾನಿಕ ಸತ್ಯ-ಸತ್ಯತೆಯನ್ನು ಕಂಡುಕೊಂಡು ಯಾವುದೇ ಒತ್ತಡಕ್ಕೆ ಒಳಗಾಗದೆ ವಸ್ತುನಿಷ್ಠವಾಗಿ ಇತಿಹಾಸವನ್ನು ನಿರ್ಮಿಸಲು ನನ್ನ ಈ ಸಂಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ಈ ಕೆಳಗಿನಂತೆ ೮ ಅಧ್ಯಯನಗಳಿಗೆ ವಿಭಾಗಿಸಿಕೊಳ್ಳಲಾಗಿದೆ.

ಪ್ರಸ್ತುತ ಮೊದಲನೆಯ ಅಧ್ಯಯನವಾದ ಇದರಲ್ಲಿ ಸಂಪ್ರಬಂಧವನ್ನು ರಚಿಸುವ ಉದ್ದೇಶ, ಅದರ ಭಿನ್ನತೆ, ಹಾಗೂ ಚಾರಿತ್ರಿಕ ನೆಲೆಗಟ್ಟು ಮತ್ತು ಸ್ಥಳೀಯ ಚರಿತ್ರೆಗೆ ಸ್ಫೂರ್ತಿದಾಯಕವಾಗಿರುವ, ಮೂಕಸಾಕ್ಷಿಗಳಂತಿರುವ ಸ್ಮಾರಕಗಳು ನನ್ನನ್ನು ಆಕರ್ಷಿಸಿದ ಬಗ್ಗೆ ಕಾರ್ಯಕ್ಷೇತ್ರದಲ್ಲಿ ಒಳಪಡುವ ಗ್ರಾಮಗಳ ಮಿತಿ, ಹಾಗೂ ಇದುವರೆಗೆ, ಈ ಪ್ರದೇಶಗಳ ಬಗ್ಗೆ ಬಂದಿರುವ ಸಾಹಿತ್ಯಕ ಮಾಹಿತಿ ನಂತರ ಪ್ರಬಂಧವನ್ನು ರಚಿಸಲು ಕೈಗೊಳ್ಳಬೇಕಾದ ವಿಧಾನಗಳನ್ನು ಹಾಗೂ ಪುರಾತತ್ವಶಾಸ್ತ್ರ ಬೆಳವಣಿಗೆಯ ಕೆಲವು ಮುಖ್ಯ ಅಂಶಗಳನ್ನು ಇದರಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಯನವಾದ ಭೌಗೋಳಿಕತೆ ಮತ್ತು ಚರಿತ್ರೆ ವಿಭಾಗ ಪ್ರಮುಖವಾಗಿದೆ. ಸಂಪ್ರಬಂಧಕ್ಕೆ ಸಂಬಂಧಪಟ್ಟಂತೆ ಇರುವ ಭೌಗೋಳಿಕತೆಯ ಅಂಶಗಳಾದ ಭೌಗೋಳಿಕತೆಯ ಸ್ಥಾನವಾದ ಪ್ರದೇಶದ ಎತ್ತರ, ವಿಸ್ತೀರ್ಣತೆ, ಜಿಲ್ಲೆ, ತಾಲೂಕು ಮತ್ತು ಅಧ್ಯಯನಕ್ಕೆ ಒಳಪಟ್ಟ ಲಕ್ಷಣಗಳು, ಬೆಟ್ಟಗುಡ್ಡಗಳು, ಅರಣ್ಯ ಸಂಪತ್ತು, ಹವಾಗುಣ, ಮಣ್ಣು, ಕೃಷಿ ವಿಷಯಗಳನ್ನು ಹೊಂದಿರುವುದು. ಈ ಪರಿಸರವು ಇತಹಾಸಪೂರ್ವ ಬೃಹತ್ ಶಿಲಾಯುಗದ ಹಿನ್ನಲೆ ನಂತರ ಚರಿತ್ರೆಯ ಕಾಲಘಟ್ಟವನ್ನು ಈ ವಿಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಜನಪದವಾಗಿ ದೊರೆಯುವ ಕಥೆ, ಐತಿಹ್ಯ, ಪುರಾಣ, ಆಚರಣೆಗಳು, ಮತ್ತು ಮಾಹಿತಿಗಳನ್ನು ಸಂಗ್ರಹಿಸಿದ್ದು, ಜನಪದವಾಗಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳೊಂದಿಗೆ, ಪ್ರಶ್ನಾವಳಿಯ ಮೂಲಕ ಸಂದರ್ಶನ ಮಾಡಿ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸಿ ಮೌಲ್ಯಯುತ ಮಾಹಿತಿಯನ್ನು ಕ್ರೋಢೀಕರಿಸಿಕೊಂಡು ಸ್ಥಳೀಯ ಚರಿತ್ರೆಯನ್ನು ಸತ್ಯ-ಸತ್ಯತೆಯನ್ನು ವಿಶ್ಲೇಷಣೆ ಮಾಡುವುದರ ಮೂಲಕ ಮೌಖಿಕ ಚರಿತ್ರೆಯನ್ನು ಕಟ್ಟಲಾಗಿದೆ.

ಶಾಸನಗಳು ಇತಿಹಾಸ ರಚನೆಗೆ ಪುರಾತತ್ವ ಮತ್ತು ಸಾಹಿತ್ತಿಕ ಮೂಲ ಆಧಾರವಾಗಿದೆ. ಇವುಗಳನ್ನು ಹಿಂದೆ ರಾಜ-ರಾಣಿಯರು ಮತ್ತು ಅಧಿಕಾರಿಗಳು, ಸಂಪತ್ತನ್ನು ಹೊಂದಿರುವವರು ಹೊರಡಿಸುತ್ತಿದ್ದರು. ಶಾಸನಗಳನ್ನು ಅಂದಿನ ಅರಸರು ಪ್ರಜೆಗಳಿಗೆ, ಧಾರ್ಮಿಕ ಮತ್ತು ಆಡಳಿತಾತ್ಮಕ ವಿಷಯಗಳನ್ನು ಜನತೆಗೆ ತಿಳಿಸುವ ಉದ್ದೇಶದಿಂದ ಗಟ್ಟಿಯಾದ ವಸ್ತುಗಳ ಮೇಲೆ ಕೆತ್ತಿಸುತ್ತಿದ್ದರು. ನಂತರ ರಾಜನ ಆಜ್ಞೆಗಳಾಗಿ ಪರಿವರ್ತಿಸಿ ಹೊಂದಿದ್ದವು. ಶಾಸನಗಳನ್ನು ಸಾರ್ವಜನಿಕರು ಸಹ ಹೊರಡಿಸುತ್ತಿದ್ದರು. ಬಹುತೇಕ ಎಲ್ಲಾ ಶಾಸನಗಳು ಧಾರ್ಮಿಕ ಕೊಡುಗೆಯ ವಿಷಯವನ್ನು

ಒಳಗೊಂಡಿರುತ್ತವೆ. ಇದರಲ್ಲಿ ಶಾಸನಗಳನ್ನು ಹೊರಡಿಸಿದವರ ಹೆಸರು, ಕಾಲ, ರಾಜ ಲಾಂಛನ, ದಾನಕೊಟ್ಟ ವಿಷಯ ಮುಂತಾದ ಅಂಶಗಳು ಇರುತ್ತವೆ. ಈ ಅಧ್ಯಾಯದಲ್ಲಿ (ಬೆಟ್ಟದಪುರ ಪರಿಸರದಲ್ಲಿಯೇ ಸುಮಾರು ಇಪ್ಪತ್ತೊಂಬತ್ತು ಶಾಸನಗಳು ಕಂಡುಬರುತ್ತವೆ. ಈ ಶಾಸನಗಳ ಮುಖ್ಯ ಉದ್ದೇಶ, ರಾಜನ ಹೆಸರು, ಕಾಲ, ದಾನಕೊಟ್ಟ ವಿಷಯ ಮೊದಲಾದ ವಿಚಾರಗಳನ್ನು ಇದರಲ್ಲಿ ಗಮನಿಸಲಾಗುವುದು.

ಐದನೇ ಅಧ್ಯಯನದಲ್ಲಿ ಬೆಟ್ಟದಪುರ ಪರಿಸರದಲ್ಲಿ ಕಂಡುಬರುವ ವಿವಿಧ ರೀತಿಯ ಜೈನ, ಶೈವ, ವೈಷ್ಣವ ಮತ್ತು ಗುಹಾದೇವಾಲಯಗಳು ಹಾಗೂ ರಕ್ಷಣಾ ವಾಸ್ತುಶಿಲ್ಪದ ಕಟ್ಟಡಗಳನ್ನು ಕುರಿತಾದ್ದಾಗಿದೆ. ಅಂದಿನ ಕಾಲದಲ್ಲಿ ರಚಿತವಾಗಿದ್ದ ವಿವಿಧ ಶೈಲಿಯ ದೇವಾಲಯ, ತಳವಿನ್ಯಾಸ, ಅಂತರಂಗ, ಗರ್ಭಗೃಹ, ಸುಕನಾಶಿ, ಭುವನೇಶ್ವರಿ, ಗೋಪುರ ಮತ್ತು ದೇವಾಲಯಗಳ ಉದ್ದ, ಅಗಲ ಎತ್ತರದ ಆಕಾರದ ವಿಷಯಗಳು ಹಾಗೆ ರಕ್ಷಣಾ ವಾಸ್ತುಶಿಲ್ಪದ ಕೋಟೆಗಳು, ವಿವಿಧ ರೀತಿಯ ಮಂಟಪಗಳ ಲಕ್ಷಣಗಳನ್ನು ಇದರಲ್ಲಿ ವಿಮರ್ಶಿಸಲಾಗಿದೆ.

ಆರನೇ ಅಧ್ಯಯನದಲ್ಲಿ ಅಂದು ಆಳ್ವಿಕೆ ಮಾಡಿದ ರಾಜರು ಮತ್ತು ಭಕ್ತರು ಹಲವು ಮೂರ್ತಿಗಳನ್ನು ಕೆತ್ತಿಸಿದ್ದಾರೆ. ಚಂಗಾಳ್ವ ಗಂಗ, ವಿಜಯನಗರ, ಮೈಸೂರು ಒಡೆಯ ಮನೆತನ ಕಾಲಕ್ಕೆ ಸೇರಿದ ಜೈನ, ಶೈವ, ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಶಿವಲಿಂಗ, ವಿನಾಯಕ, ಜೈನ ತೀರ್ಥಂಕರ ಮೂರ್ತಿಗಳು, ವೀರಭದ್ರ ಮೂರ್ತಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ನಂದಿಮೂರ್ತಿಗಳು ಇರುವುದು. ಇಲ್ಲಿಯ ಕೆಲವು ಮೂರ್ತಿ ಶಿಲ್ಪಗಳು ಗಾರೆ ಶಿಲೆ ಮತ್ತು ತಾಮ್ರದಿಂದ ಮಾಡಿದಂತಹ ಮೂರ್ತಿಶಿಲ್ಪಗಳನ್ನು ವಿಶ್ಲೇಷಣೆಗೆ ಒಳಪಡಿಸಿಕೊಂಡು ಮತ್ತು ದೇವಾಲಯದ ಉಬ್ಬುಶಿಲ್ಪಗಳು, ಮುಂತಾದ ವಿಷಯವನ್ನು ವಿಶ್ಲೇಷಿಸಲಾಗಿದೆ.

ಪ್ರತಿಯೊಂದು ಜೀವಿಗೂ ಜೀವಿಸುವ ಪ್ರಾಥಮಿಕ ಅವಶ್ಯಕತೆಗಳಲ್ಲಿ ನೀರಿನ ವ್ಯವಸ್ಥೆಯು ಒಂದು ಸಾಮ್ರಾಜ್ಯಗಳನ್ನು ಆಳಿದ ಅಂದಿನ ಅರಸರು ತಮ್ಮ ದೈನಂದಿನ ಅವಶ್ಯಕತೆಗೆ ಮತ್ತು ತೋಟದ ವ್ಯವಸ್ಥೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವರು. ಚಂಗಾಳ್ವ ಮನೆತನಗಳ ಆಳ್ವಿಕೆಯನ್ನು ಮಾಡಿದ ಅರಸರು ನೀರನ್ನು ಸಂಗ್ರಹಿಸುವುದಕ್ಕೆ ಕೆರೆಯನ್ನು ನಿರ್ಮಿಸಿರುವರು. ಹಾಗೆ ಕೊಳಗಳನ್ನು ಸಹ ಕಟ್ಟಿಸಿರುವರು. ಅಂದಿನ ಕೆರೆ, ಕೊಳ, ಭಾವಿಗಳನ್ನು ಈ ಅಧ್ಯಯನದಲ್ಲಿ ವಿಮರ್ಶೆಗೆ ಒಳಪಡಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು:

೧. ಡಾ. ಶ್ರೀನಿವಾಸ ಪಾಡಿಗಾರ, ೧೯೮೭, ಪುರಾತತ್ವಶಾಸ್ತ್ರ ಪರಿಚಯ, ಧಾರವಾಡ, ಪುಟ. ೬.

೨. ಅದೇ, ಪುಟ. ೩.

೩. ಪ್ರೊ. ಲಕ್ಷ್ಮಣ್ ತೆಲಗಾವಿ. (ಸಂ)., ೨೦೦೩, ಸ್ಥಳೀಯ ಚರಿತ್ರೆ ಅಧ್ಯಯನ, ಹಂಪಿ, ಪುಟ. ೫೫.

೪. ಡಾ. ಶ್ರೀನಿವಾಸ ಪಾಡಿಗಾರ, ಪೂರ್ವೋಕ್ತ, ಪುಟ. ೪೭.

೫. ಅದೇ ಪುಟ. ೪೭.

೬. ಡಾ. ನರಸಿಂಹಮೂರ್ತಿ., ೧೯೮೩, ಕರ್ನಾಟಕ ಪುರಾತತ್ವ ಶೋಧನೆ, ಮೈಸೂರು, ಪುಟ. ೭.

೭. ಡಾ. ಮೋಹನ್ ಕೃಷ್ಣ ರೈ.ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಹಂಪಿ, ಪುಟ. ೮೬.

೮. ಡಾ. ಚಿದಾನಂದಮೂರ್ತಿ, ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ಪುಟ. ೫.

೯. ಪ್ರೊ. ಲಕ್ಷ್ಮಣ್ ತೆಲಗಾವಿ., 'ಪೂರ್ವೋಕ್ತ', ಪುಟ. ೫೦.

೧೦. ಅದೇ ಪುಟ.

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಚರಿತ್ರೆ

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಚರಿತ್ರೆ

ಭೌಗೋಳಿಕ ಪರಿಸರ:

ಭಾರತೀಯ ಜನಜೀವನ ಮತ್ತು ಸಂಸ್ಕೃತಿಯ ವಿಕಾಸ ಕಾರ್ಯದಲ್ಲಿ ಭೌಗೋಳಿಕ ಅಂಶಗಳು ಮಹತ್ವದ ಪಾತ್ರವನ್ನು ವಹಿಸಿವೆ. ಹಿಮಾಲಯದ ಕಣಿವೆಗಳ ಮುಖಾಂತರ ಭಾರತವನ್ನು ಪ್ರವೇಶಿಸಿದ ಅನೇಕ ಜನಾಂಗಗಳು ಇಲ್ಲಿಯೇ ನೆಲಿಸಿ ಭಾರತೀಯ ಸಂಸ್ಕೃತಿಯ ಚೌಕಟ್ಟಿನಲ್ಲಿ ಸೇರಿದವು. ಪ್ರಾಚೀನ ಕಾಲದಲ್ಲಿ ಸಾಗರ ಪ್ರದೇಶವನ್ನು ದಾಟಿ ಯಾವೊಬ್ಬ ದಾಳಿಕಾರನೂ ದಕ್ಷಿಣ ಭಾರತವನ್ನು ಪ್ರವೇಶಿಸಲಾಗಲಿಲ್ಲ. ಆದ್ದರಿಂದ ಸುಮಾರು ಐದುಸಾವಿರ ವರ್ಷಗಳಷ್ಟು ಪ್ರಾಚೀನವಾದ ಪರಂಪರಾನುಗತ ಭಾರತೀಯ ಸಂಸ್ಕೃತಿ ನಶಿಸದೆ ಉಳಿಯಲು ಭಾರತದ ಭೌಗೋಳಿಕ ಪರಿಸರ ಸಹಕಾರಿಯಾಗಿದೆ.[೧] ಅಲ್ಲದೆ ಮಾನವನು ನಿಸರ್ಗದ ಶಿಶು, ಭೂಗೋಳ ಇತಿಹಾಸದ ಮಾತೃಗರ್ಭ, ಮಾನವನ ಇತಿಹಾಸ ಆಯಾಪ್ರದೇಶಗಳ ಸ್ವಾಭವಿಕ, ಭೌಗೋಳಿಕ ವಾತಾವರಣವನ್ನು ಅವಲಂಭಿಸಿರುತ್ತದೆ. ಹಾಗೂ ಅವುಗಳು ಇತಿಹಾಸವನ್ನು ರೂಪಿಸುತ್ತವೆ ಎಂಬ ಅಭಿಪ್ರಾಯವನ್ನು ಇಂದು ಸರ್ವರೂ ಸಮ್ಮತಿಸಿದ್ದಾರೆ. ಆದ್ದರಿಂದ "ರಿಚರ್ಡ್ ಹಾಕ್ಲುಯಟ್ಸ್ ಭೌಗೋಳ ಮತ್ತು ಕಾಲಗಣನೆ ಚರಿತ್ರೆಗೆ ಸೂರ್ಯಚಂದ್ರರು ಹಾಗೂ ಬಲ ಮತ್ತು ಎಡ ಕಣ್ಣುಗಳಾಗಿವೆ ಎಂಬ ವಾಕ್ಯವು ಇತಿಹಾಸ ಮತ್ತು ಭೂಗೋಳದ ನಡುವಣ ಸಂಬಂಧವನ್ನು ಸೂಚಿಸುತ್ತದೆ."[೨]

ಭೌಗೋಳಿಕ ಪರಿಸರ ಎಂದರೆ ಸಾಮಾನ್ಯವಾಗಿ ಭೂಮಿ, ಭೂಮಿಯ ಮೇಲ್ಮೆಯಲ್ಲಿ ಕಂಡುಬರುವ ಎಲ್ಲಾ ರೀತಿಯ ಜೀವಿಗಳು, ಸಸ್ಯ ಸಮೂಹಗಳು, ಅರಣ್ಯ, ಪ್ರಾಣಿಸಂಪತ್ತು, ವಾಯುಗುಣ, ಖನಿಜ, ಮಣ್ಣು, ಕೃಷಿ, ನೀರಾವರಿ ವ್ಯವಸ್ಥೆ, ಎಲ್ಲಕ್ಕಿಂತ ಮುಖ್ಯವಾಗಿ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುವ ಜನಸಮೂಹ ಎಂದು ಹೇಳಬಹುದು. ಭೌಗೋಳಿಕ ಲಕ್ಷಣಗಳು ಜೀವಿ ಸಮೂಹಗಳು ನಿಯಂತ್ರಿಸುತ್ತವೆಯೇ? ಅಥವಾ ಜೀವಿ ಸಮೂಹಗಳನ್ನು ಪರಿಸರವನ್ನು ನಿಯಂತ್ರಿಸುತ್ತವೆಯೇ? ಹಾಗೂ ಭೌಗೋಳಿಕತೆ ಮತ್ತು ಜೀವಿ ಸಮೂಹಗಳು ಒಂದಾನೊಂದು ಬಿಟ್ಟು ಇರಲು ಸಾಧ್ಯವಿಲ್ಲವೇ? ಎಂಬ ಮುಂತಾದ ಪ್ರಶ್ನೆಗಳು ಮೂಡುತ್ತವೆ. ಇದಕ್ಕೆ ಉತ್ತರವಾಗಿ ಸಮಶೀತೋಷ್ಣವಲಯದ ಪ್ರದೇಶಗಳಲ್ಲಿ ಮಾತ್ರ ಪ್ರಸಿದ್ಧ ನಾಗರಿಕತೆಗಳು ಬೆಳೆದು ಬಂದಿವೆಯೇ ಹೊರತು ಅತಿಶೀತ ಅಥವಾ ಅತಿಉಷ್ಣ ಪ್ರದೇಶಗಳಲ್ಲಿ ಅಲ್ಲಾ. ಈ

ಅಂಶವನ್ನು ಗಮನಿಸಿದಾಗ ವಾಯುಗುಣವು ಆ ಪ್ರದೇಶದ ಇತಿಹಾಸವನ್ನು ನಿರ್ಧರಿಸುತ್ತದೆ, ರೂಪಿಸುತ್ತದೆ ಎಂಬುವುದು ವ್ಯಕ್ತಿಗತವಾಗುತ್ತದೆ. ಪ್ರಪಂಚದ ಪ್ರಮುಖ ಪ್ರಾಚೀನ ನಾಗರಿಕತೆಗಳು ಬೆಳೆದು ಬಂದಿರುವುದು ಸಾಮಾನ್ಯವಾಗಿ ನೈಲ್ ಯೂಪ್ರೆಟೆಸ್, ಮತ್ತು ಟೈಗ್ರಿಸ್ ಹಾಗೂ ಸಿಂಧೂ ಗಂಗಾ ನದಿ ದಂಡೆಯ ಬಯಲು ಪ್ರದೇಶಗಳಲ್ಲಿ, ಹೀಗೆ ವಾಯುಗುಣ, ಭೂಮಿಯ ಫಲವತ್ತತೆ, ನೈಸರ್ಗಿಕ ರಕ್ಷಣೆಗೆ ಪರ್ವತಗಳು, ಬೆಟ್ಟಗುಡ್ಡಗಳು ನಾಗರಿಕತೆಯ ಬೆಳವಣಿಗೆಗೆ ಆಧಾರಗಳು ಎಂಬುದು ಇಂದಿನ ತಂತ್ರಜ್ಞಾನ ಬೆಳದಂತೆ ಕುಗ್ಗುತ್ತದೆ ಎಂದು ಹೇಳಲಾಗಿದೆ.[೩] ಪ್ರತಿಯೊಂದು ದೇಶದ ಜನಜೀವನವೂ ಅದರ ಭೌಗೋಳಿಕ ಸನ್ನಿವೇಶ, ವಾಯುಗುಣ ಮತ್ತು ಪ್ರಕೃತಿ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಆಧುನಿಕ ಕಾಲದಲ್ಲಿ ನೈಸರ್ಗಿಕ ಅಡ್ಡಿ ಆತಂಕಗಳನ್ನು ತನಗನುಕೂಲದಂತೆ ಮಾರ್ಪಾಡಿಸಿಕೊಳ್ಳಲು ಮಾನವ ಹೋರಾಡುತ್ತಿರುವನು. ಆದರೆ ಈ ಕಾರ್ಯದಲ್ಲಿ ಅವನು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ.

ಮೈಸೂರು ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತು ಹೇರಳವಾಗಿದ್ದು, ಫಲವತ್ತಾದ ಭೂಮಿ, ಹಿತಕರವಾದ ವಾಯುಗುಣ, ಅರಣ್ಯ ಸಂಪತ್ತು ಮೊದಲಾದ ನೈಸರ್ಗಿಕ ಸಂಪತ್ತುಗಳಿಂದ ಕೂಡಿದೆ. ಮೈಸೂರು ಸಮುದ್ರ ಮಟ್ಟದಿಂದ ೭೭೦ ಮೀಟರ್ ಎತ್ತರದಲ್ಲಿದೆ.[೪] ಒಡೆಯರ ಮನೆತನದ ಆಡಳಿತ ಕಾಲದಲ್ಲಿ ರಾಜಧಾನಿಯಾಗಿತ್ತು. ಇದನ್ನು ಅರಮನೆಗಳ ನಗರ ಎಂದೂ ಕರೆಯಲಾಗಿದೆ. ಅಲ್ಲದೆ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯೂ ಸಹ ಆಗಿದೆ. ಈ ಪ್ರದೇಶವು ಆದಿಶಿಲಾಯುಗದಿಂದ ಮಾನವನ ವಸತಿಯ ಕೇಂದ್ರವಾಗಿದೆ.

ಭೌಗೋಳಿಕ ಸ್ಥಾನ:

ಮೈಸೂರು ಜಿಲ್ಲೆಯಲ್ಲಿ ಪಿರಿಯಾಪಟ್ಟಣ ಒಂದು ತಾಲ್ಲೂಕು. ಮೈಸೂರಿನಿಂದ ಸುಮಾರು ೭೦ ಕಿ.ಮೀ.ಗಳ ದೂರದಲ್ಲಿದೆ. ಈ ಪ್ರದೇಶವು ೧೨° ರಿಂದ ೨೦° ಉತ್ತರ ಅಕ್ಷಾಂಶ ಮತ್ತು ೭೬° ರಿಂದ ೧೩° ಪೂರ್ವರೇಖಾಂಶವನ್ನು[೫] ಹೊಂದಿದೆ. ಪಿರಿಯಾಪಟ್ಟಣವು ಇಂದು ಬೆಟ್ಟದಪುರ, ಹಾರನಹಳ್ಳಿ ಮತ್ತು ರಾವಂದೂರು ಎಂಬ ನಾಲ್ಕು ಹೋಬಳಿಗಳನ್ನು ಹೊಂದಿದ್ದು ೨೦೫ ಗ್ರಾಮಗಳನ್ನು ಒಳಗೊಂಡಿದೆ. 'ಭೌಗೋಳಿಕವಾಗಿ ೮೩,೧೨೧ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದೆ. ಪೂರ್ವ ಹಾಗೂ ದಕ್ಷಿಣಕ್ಕೆ ವಿಶಾಲವಾದ ಭೂಪ್ರದೇಶವನ್ನು ಹೊಂದಿದ್ದು ಪಶ್ಚಿಮ ಹಾಗೂ ಉತ್ತರ ದಿಕ್ಕಿನಲ್ಲಿ ಪರ್ವತ ಮತ್ತು ಅರಣ್ಯ ಪ್ರದೇಶಗಳನ್ನು ಹೊಂದಿದೆ. ಹಸಿರುವನಗಳಿಂದ ಬೆಟ್ಟ-ಗುಡ್ಡಗಳಿಂದ ಸುತ್ತಲೂ ಆವೃತ್ತವಾಗಿದೆ. ಸಮುದ್ರಮಟ್ಟದಿಂದ ಸರಾಸರಿ ೨,೨೮೫ ಅಡಿಗಳಷ್ಟು ಎತ್ತರದಲ್ಲಿರುವ ಈ ತಾಲ್ಲೂಕು ಹೆಚ್ಚಾಗಿ ಮಳೆಯಾಧಾರಿತ ಬೇಸಾಯವನ್ನು ಅವಲಂಬಿಸಿದೆ.[೬]

ಪೂರ್ವಕ್ಕೆ ಹುಣಸೂರು ತಾಲ್ಲೂಕು, ಪಶ್ಚಿಮಕ್ಕೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು, ದಕ್ಷಿಣಕ್ಕೆ ವಿರಾಜಪೇಟೆ ತಾಲ್ಲೂಕು, ಉತ್ತರಕ್ಕೆ ಹಾಸನ ಜಿಲ್ಲೆಯ ಅರಕಲಗೂಡು

ತಾಲ್ಲೂಕು ಇದ್ದು ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುವ ಕರ್ನಾಟಕದ ಜೀವನದಿಗಳಲ್ಲಿ ಒಂದಾದ ಕಾವೇರಿಯು ಈ ತಾಲ್ಲೂಕಿನ ಗಡಿರೇಖೆಯಾಗಿದೆ. ಪಶ್ಚಿಮಘಟ್ಟಗಳ ಕೊನೆಯ ಭಾಗದಲ್ಲಿದ್ದು ಸಂಪೂರ್ಣ ಮಲೆನಾಡು ಅಲ್ಲದೆ, ಒಣಬಯಲು ಪ್ರದೇಶವು ಅಲ್ಲದೆ ಅರೆಮಲೆನಾಡು ವ್ಯಾಪ್ತಿಗೆ ಒಳಪಟ್ಟಿವೆ.

'ಬೆಟ್ಟದಪುರವು ಭೌಗೋಳಿಕವಾಗಿ ನಾಲ್ಕು ಪ್ರಮುಖ ಪಟ್ಟಣಗಳಿಗೆ ಸಂಪರ್ಕವನ್ನು ಪಡೆದುಕೊಂಡಿದೆ. ಪಿರಿಯಾಪಟ್ಟಣದಿಂದ ಉತ್ತರ ದಿಕ್ಕಿಗೆ ಇರುವ ಈ ಗ್ರಾಮ ಪಶ್ಚಿಮಕ್ಕೆ ಕುಶಾಲನಗರ, ಪೂರ್ವದಿಕ್ಕಿಗೆ ಕೃಷ್ಣರಾಜನಗರಕ್ಕೆ ಸಂಪರ್ಕ ಹೊಂದಿದೆ. ಉತ್ತರ ದಿಕ್ಕಿಗೆ ಹಾಸನ ಜಿಲ್ಲೆಯ ಅರಕಲಗೂಡು ಮತ್ತು ದಕ್ಷಿಣಕ್ಕೆ ಪಿರಿಯಾಪಟ್ಟಣ ಮೂಲಕ ವೀರಾಜಪೇಟೆಗೆ ಸಂಪರ್ಕವನ್ನು ಹೊಂದಿದೆ.[೭] ಗ್ರಾಮದ ಆಗ್ನೇಯ ದಿಕ್ಕಿಗೆ ಇರುವ ಬೆಟ್ಟವೇ ಬೆಟ್ಟದಪುರದ ಬೆಟ್ಟ, ಸಮುದ್ರಮಟ್ಟದಿಂದ ಸುಮಾರು ೪,೩೮೯ ಅಡಿಗಳ ಎತ್ತರದಲ್ಲಿದೆ.[೮] ಈ ಬೆಟ್ಟವು ಜಿಲ್ಲೆಯಲ್ಲಿಯೇ ಎರಡನೆಯ ಎತ್ತರದ ಬೆಟ್ಟವಾಗಿದೆ. (ಮೊದಲನೆಯದು ಗೋಪಾಲಸ್ವಾಮಿ ಬೆಟ್ಟ ೪೭೭೦ ಅಡಿ, ಚಾಮರಾಜನಗರ) ಇದು ಸುಮಾರು ೬೬೦೦ ಎಕರೆ ಭೂಮಿಯನ್ನು ಆಕ್ರಮಿಸಿದ್ದು ಅದರ ಸುತ್ತಳತೆ ಸುಮಾರು ಹನ್ನೆರಡು ಮೈಲಿಗಳಿದ್ದು ಪಿರಿಯಾಪಟ್ಟಣದಿಂದ ಹದಿನಾರು ಕಿ.ಮೀ. ಅಂತರದಲ್ಲಿದೆ.

ಭೌಗೋಳಿಕವಾಗಿ ಈ ಪ್ರದೇಶವು ಹಲವು ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟಿದೆ. ಅವುಗಳಲ್ಲಿ ಬೆಟ್ಟದಪುರ ಬೆಟ್ಟ ಅತ್ಯಂತ ದೊಡ್ಡದಾದರೆ, ಮಾಕಲ್ಲಯ್ಯನ ಬೆಟ್ಟ, ಹೊನ್ನೂರಯ್ಯನ ಗುಡ್ಡ, ಏಣಿ ಹನುಮಂತನ ಬೆಟ್ಟಗಳು ಕಂಡುಬರುತ್ತವೆ. 'ಬೆಟ್ಟದಪುರದ ವಾಯುವ್ಯ ದಿಕ್ಕಿಗೆ ಎರಡೂವರೆ ಮೈಲಿ ದೂರದಲ್ಲಿ ಬೆಟ್ಟಗಳ ಮುಂದುವರೆದ ಭಾಗದಂತಿರುವ ಹಳ್ಳಿಗಾಡು ಪ್ರದೇಶವಿದ್ದು ಇಲ್ಲಿಯ ಜನರು ಈ ಪ್ರದೇಶವನ್ನು ಸೀತೆ ಗುಡ್ಡವೆಂದು ಕರೆಯುತ್ತಾರೆ. ಈ ಪ್ರದೇಶವು ಪೂರ್ವದಲ್ಲಿ ಅಲಪನಾಯಕನ ಹಳ್ಳಿಯಿಂದಲೂ, ಪಶ್ಚಿಮದಲ್ಲಿ ತರಿಕಲ್ಲು ಮತ್ತು ಚಿಕ್ಕನೇರಳೆ ಗ್ರಾಮದಿಂದಲೂ, ಉತ್ತರ ಭಾಗದಲ್ಲಿ ಹುಣಸೆತಪ್ಪಲು ಮತ್ತು ದಕ್ಷಿಣದಲ್ಲಿ ಬ್ಯಾಡರ ಬಿಳಗುಳಿಯಿಂದಲೂ ಸುತ್ತುವರೆದಿದೆ.[೯] ಇಡೀ ಬೆಟ್ಟಗಳು ಗ್ರಾನೈಟ್ ಶಿಲೆಗಳಿಂದ ಕೂಡಿದ್ದು, ಬೆಟ್ಟಗಳ ನಡುವೆ ಅಲ್ಲಲ್ಲಿ ಸಣ್ಣ ಬಯಲು ಪ್ರದೇಶವಿದೆ. ಇಲ್ಲಿ ಕಂಡುಬರುವ ತಗ್ಗು ಪ್ರದೇಶಗಳು ಹಿಂದೆ ನೀರಿನ ಸಂಗ್ರಹಣೆ ತಾಣಗಳಾಗಿದ್ದವು. ಈ ಪ್ರದೇಶದಲ್ಲಿ ಪ್ರಾಚೀನ ಕಾಲದ ಕುರುಹುಗಳು ಹರಡಿಕೊಂಡಿರುವುದನ್ನು ಕಾಣಬಹುದು. ಬೃಹತ್ ಶಿಲಾಯುಗದಿಂದ ಇಂದಿನವರೆಗಿನ ಬದುಕಿನ ಅನೇಕ ಅಂಶಗಳು ಕಂಡುಬರುತ್ತವೆ. ಅಂದರೆ ಮಾನವ ಸಂಸ್ಕೃತಿ ನಿರಂತರವಾಗಿ ಮುಂದುವರೆದಿದ್ದರಿಂದ ಇದರ ಭೌಗೋಳಿಕ ಪ್ರಾಮುಖ್ಯತೆಯನ್ನು ತಿಳಿಯಬಹುದು. ಸಮೃದ್ಧಿಯಾದ ಈ ಪ್ರದೇಶ ಚಾರಿತ್ರಿಕ ಅಂಶಗಳ ಕೇಂದ್ರವಾಗಿದೆ. ಇದರಿಂದ ಬೆಟ್ಟದಪುರದ ಸಂಸ್ಕೃತಿಯ ಅವಶೇಷಗಳು ಗಡಿ ತಾಲ್ಲೂಕು ಪ್ರದೇಶಗಳವರೆಗೆ ಹರಡಿಕೊಂಡಿವೆಂದಾದರೂ ಪ್ರಾಚೀನ

ಕಾಲದಲ್ಲಿಯೇ ಪಟ್ಟಣವಾಸಿಗಳಾಗಿದ್ದ ಕುರುಹುಗಳು ಇಂದು ಅವನತಿಯ ಹಾದಿಯಲ್ಲಿವೆ ಎಂದು ತಿಳಿಯಲಾಗಿದೆ.

ಇಲ್ಲಿನ ಭೂಮಿಯು ಕೆಂಪು ಮಣ್ಣಿನಿಂದ ಕೂಡಿದ್ದು, ಫಲವತ್ತಾಗಿದೆ. ಹಸಿರು ವನಗಳೊಂದಿಗೆ ಕುರುಚಲುಗಿಡ ಪ್ರದೇಶದಿಂದ ಆವೃತವಾಗಿದೆ. ಮಳೆಯಾದಂತ ಪ್ರದೇಶವಾಗಿರುವುದರಿಂದ ಇಲ್ಲಿ ಒಣ ಬೇಸಾಯ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಕಾವೇರಿ ನದಿಯ ಬಲದಂಡೆಯಾದ ಕರಡಿ ಲಕ್ಕನ ಕೆರೆಯಿಂದ ನೀರಾವರಿಯ ಸೌಲಭ್ಯ ಇಂದು ಗ್ರಾಮವನ್ನು ತಲುಪಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಅಲ್ಲಲ್ಲಿ ಇರುವ ತಗ್ಗಿನಿಂದಾಗಿ ಮಳೆಗಾಲದ ನೀರು ಸಂಗ್ರಹವಾಗುವ ವ್ಯವಸ್ಥೆಯಿದೆ. ದ್ವೀಪಗಳಂತೆ ಸಣ್ಣದಾದ ಬೆಟ್ಟಗುಡ್ಡಗಳನ್ನು ಕಾಣಬಹುದಾಗಿದೆ. ಇದರಿಂದ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ತಗ್ಗು ಅಥವಾ ಹಳ್ಳ ಪ್ರದೇಶಗಳಲ್ಲಿ ನಿಲ್ಲುವುದು.

ಈ ಭಾಗದ ಬಹುತೇಕ ಜನರ ಮುಖ್ಯ ವೃತ್ತಿ ವ್ಯವಸಾಯ ಮತ್ತು ವ್ಯಾಪಾರ. ಇಲ್ಲಿಯ ಪ್ರಮುಖ ವಾಣಿಜ್ಯ ಬೆಳೆಗಳೆಂದರೆ ತಂಬಾಕು, ಇದಲ್ಲದೇ ತೆಂಗು, ಬಾಳೆ, ಅಡಿಕೆ ಹಾಗೂ ಇತರೆ ಬೆಳಗಳಾದ ರಾಗಿ, ಜೋಳ, ಭತ್ತ, ಶುಂಠಿ ದ್ವಿದಳ ಬೆಳಗಳಾದ ತೊಗರಿ, ಹುರುಳಿ, ಅಲಸಂದೆ ಇತ್ಯಾದಿ ಬೆಳೆಗಳನ್ನು ಕೃಷಿಕರು ಬೆಳೆಯುತ್ತಾರೆ. ಈ ರೀತಿ ಉತ್ಪಾದನೆ ಮಾಡಿದ ಉತ್ಪನ್ನಗಳನ್ನು ಪ್ರತಿ ಭಾನುವಾರ ನಡೆಯುವ ಬೆಟ್ಟದಪುರದ ಸಂತೆಯಲ್ಲಿ ಮಾರಾಟವಾಗುವುದನ್ನು ಕಾಣಬಹುದು. ಇಂದಿಗೂ ಈ ಸಂತೆ ಉತ್ಪಾದನೆ ಮಾಡಿದ ದವಸ–ಧಾನ್ಯಗಳ ಮಾರಾಟಕ್ಕೆ ಸಾಕ್ಷಿಯಾಗಿದೆ. ತಾಲ್ಲೂಕಿನಲ್ಲಿಯೇ ನಡೆಯುವ ದೊಡ್ಡದಾದ ಆರ್ಥಿಕ ಚಟುವಟಿಕೆಯ ಸ್ಥಳವಾಗಿದೆ. ಈ ಪರಿಸರದಲ್ಲಿ ಹೆಚ್ಚು ಕೆರೆಗಳು ಇದ್ದು ಇದನ್ನು ಕೆರೆಗಳ ತಾಣ ಎಂದು ಕರೆಯಬಹುದು.

ಈ ಪ್ರದೇಶದಲ್ಲಿ ಬೆಟ್ಟಗುಡ್ಡಗಳು ಇರುವುದರಿಂದ ಅರಣ್ಯ ಸಂಪತ್ತು ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ. ಇದರಲ್ಲಿ ಬೆಲೆಬಾಳುವ ಮರಗಳು, ಪ್ರಾಣಿಗಳು ಹಾಗೆ ಗಿಡಮೂಲಿಕೆಗೆ ಬೇಕಾಗುವ ಔಷಧಿಯ ಸಸ್ಯಗಳು ದೊರೆಯುತ್ತವೆ. ಅರಗು ಮತ್ತು ಬಣ್ಣದ ಕಾರ್ಖನೆಗೆ ಅತಿ ಮುಖ್ಯವಾಗಿ ಬೇಕಾಗಿರುವ ಕಲ್ಲುಹೂ ಮತ್ತು ಮರದ ಹೂವು ದೊರಕುವುದು ವಿಶೇಷವಾಗಿದೆ. ಈ ರೀತಿಯ ಹೂವುಗಳಿಂದ ಚುನಾವಣೆಗಳಲ್ಲಿ ಗುರುತು ಮಾಡಲು ಉಪಯೋಗಿಸುವ ಇಂಕನ್ನು ತಯಾರು ಮಾಡಬಹುದಾಗಿದೆ. ಮೇಣ, ನೆಲ್ಲಿಕಾಯಿ, ಜೇನುತುಪ್ಪ ಮತ್ತು ಮುತ್ತುಗದ ಎಲೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ.

ಬೆಟ್ಟದ ಸುತ್ತ ಇರುವ ೬೬೦೦ ಎಕೆರೆ ಪ್ರದೇಶವನ್ನು ಅರಣ್ಯ ಇಲಾಖೆಯು ಸಂರಕ್ಷಿತ ಅರಣ್ಯಭೂಮಿಯೆಂದು ತಿಳಿಸಿ ಅದರ ತುಂಬ ಗಿಡ–ಮರಗಳನ್ನು ಬೆಳೆಸುತ್ತಿದೆ. ಕುಡುಕೂರು ಗ್ರಾಮದ ಬಳಿ ಅಗ್ನಿ ಶಿಲೆಯಂತಹ ವಿಶೇಷವಾದ ಶಿಲೆಗಳು ಕಂಡುಬರುತ್ತದೆ. ವಿಸ್ತೀರ್ಣದ ಶೇ.

೭ ರಷ್ಟು ಅರಣ್ಯ ಪ್ರದೇಶವನ್ನು ಹೊಂದಿರುವ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ೩೬,೬೮೭.೨ ಎಕರೆಯಷ್ಟು ಮೀಸಲು ಅರಣ್ಯವನ್ನು ಹೊಂದಿದ್ದು. ಈ ಅರಣ್ಯದಲ್ಲಿ ಮುಖ್ಯವಾಗಿ ಶ್ರೀಗಂಧ, ಬೀಟೆ, ಹೊನ್ನೆ, ತೇಗ, ಮತ್ತಿ, ದೇವದಾರು, ಮಾವು, ಬೇವು, ಬಿದಿರು ಮುಂತಾದ ಉತ್ತಮ ಜಾತಿಯ ಮರಗಳು ಹಾಗೆ ಉರುವಲಿಗೆ ಬೇಕಾಗುವ ಇತರೆ ಎಲ್ಲಾ ಜಾತಿಯ ಮರಗಳು ಕಂಡುಬರುತ್ತವೆ.[೧೦]

ಬೆಟ್ಟದಪುರ ಪರಿಸರವು ಸಾಮಾನ್ಯವಾಗಿ ಉಷ್ಣತೆ ಪ್ರಧಾನವಾದ ವಾಯುಗುಣವನ್ನು ಹೊಂದಿದೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳ ಬೇಸಗೆಯ ಕಾಲ ಪಶ್ಚಿಮ ಘಟ್ಟಗಿಂತಲೂ ಬೆಟ್ಟದಪುರ ಪರಿಸರದಲ್ಲಿ ಉಷ್ಣಾಂಶ ಹೆಚ್ಚು. ಬೇಸಿಗೆಯ ಕಾಲದಲ್ಲಿ ಮಾತ್ರ ಜಿಲ್ಲೆಯ ಒಳಭಾಗಗಳಲ್ಲಿ ಸ್ವಲ್ಪ ಮಟ್ಟಿನ ಒಣ ಹವೇ ಹೆಚ್ಚಾಗಿರುತ್ತದೆ. ಆದರೂ ರಾಜ್ಯದ ಉತ್ತರಕರ್ನಾಟಕದ ಜಿಲ್ಲೆಗಳಿಗೆ ಹೋಲಿಸಿದರೆ ಬೇಸಗೆಯ ಉಷ್ಣಾಂಶ ಮೈಸೂರು ಜಿಲ್ಲೆಯಲ್ಲಿ ಹೆಚ್ಚೆನಿಸುವುದಿಲ್ಲ. ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಮಳೆಗಾಲವಿರುತ್ತದೆ. ಮಳೆಯ ಹಂಚಿಕೆ ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿರದೇ ಇದ್ದರೂ ಎಲ್ಲಾ ಭಾಗಗಳಿಗೂ ಸಾಮಾನ್ಯ ಮಳೆಯಾಗುತ್ತದೆ. ಅಕ್ಟೋಬರ್ ಮಧ್ಯದಿಂದ ಫೆಬ್ರವರಿಯವರೆಗೂ ಚಳಿಗಾಲವಾಗಿದೆ. ಈ ಪರಿಸರವು ಮಲೆನಾಡು, ಅಲ್ಲದೇ ಇತ್ತ ಪಶ್ಚಿಮ ಘಟ್ಟಗಳಿಗೂ ಸೇರದೆ ಮಿಶ್ರ ಲಕ್ಷಣಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಈ ಪ್ರದೇಶದ ಹವೆಯು ಹಿತಕರವಾಗಿದೆ.

ಪ್ರಾಗಿತಿಹಾಸ:

ಆದಿಮಾನವ ಪ್ರಾರಂಭದಲ್ಲಿ ಬೆಟ್ಟಗುಡ್ಡ, ಗುಹೆಗಳಲ್ಲಿ ಮತ್ತು ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ. ಆಹಾರಕ್ಕಾಗಿ ನೀರಾವರಿ ಸೌಲಭ್ಯವಿದ್ದ, ಹಣ್ಣು-ಹಂಪಲುಗಳು ದೊರೆಯುತ್ತಿದ್ದದರಲ್ಲಿ ಜೀವಿಸುತ್ತಿದ್ದನು. ತದನಂತರ ಪ್ರಾಣಿಗಳನ್ನು ಬೇಟೆಯಾಡಲು ಕಲಿತು ಮಾಂಸವನ್ನು ಉಪಯೋಗಿಸಿ ಅವುಗಳ ಚರ್ಮದಿಂದ ತಮ್ಮ ಮೈಯನ್ನು ಸಂರಕ್ಷಿಸಿಕೊಳ್ಳಲು ಕಲಿತನು. ಕೋಟ್ಯಂತರ ವರ್ಷಗಳ ನಂತರ ಬುದ್ಧಿಶಕ್ತಿ ಬೆಳವಣಿಗೆ ಆದಂತೆ ಆಹಾರ ಸಂಗ್ರಹಿಸಲು ಕಲಿತನು. ಆ ಕಾಲದ ಸಂಸ್ಕೃತಿಯನ್ನು ಶಿಲಾಯುಗದ ಸಂಸ್ಕೃತಿಯೆಂದು ಕರೆಯಲಾಗಿದೆ. ಭಾರತದಲ್ಲಿ ಕ್ರಿ.ಪೂ. ೩೫೦೦೦ ದಿಂದ ೧೦೦೦೦ ವರ್ಷಗಳ ಕಾಲವನ್ನು ಹಳೆ ಶಿಲಾಯುಗವೆಂದು ಕರೆಯಲಾಗುವುದು.[೧೧]

ದಕ್ಷಿಣ ಭಾರತದಲ್ಲಿ ನವ ಶಿಲಾಯುಗದ ಅಂತ್ಯದಿಂದ ಐತಿಹಾಸಕ ಕಾಲ ಆರಂಭವಾಗುವವರೆಗಿನ ಕಾಲವನ್ನು ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗವೆಂದು ಕರೆಯಲಾಗಿದೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಇವುಗಳನ್ನು 'ಪಾಂಡವರಕಲ್ಲು ಅಥವಾ ಪಾಂಡವರ ದಿಬ್ಬ' ಎಂದು ಕರೆಯುತ್ತಾರೆ. ತಮಿಳು ಭಾಷೆಯಲ್ಲಿ ಪಾಂಡು ಎಂದರೆ ಸಮಾಧಿ ಎಂದರ್ಥ. ಇದರ ಕಾಲ ಕ್ರಿ.ಪೂ. ೧೦೦೦ ದಿಂದ ಕ್ರಿ.ಪೂ. ೨೦೦.[೧೨]

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕೆಲವು ಬೃಹತ್ ಶೀಲಾನೆಲೆಗಳು ಕಂಡುಬಂದಿವೆ. ಅವುಗಳಲ್ಲಿ ಚಿಕ್ಕೇನಹಳ್ಳಿ, ಚನ್ನಕಲ್ಲು ಬೃಹತ್ ನೆಲೆಗಳಾದರೆ ಕೊಪ್ಪ, ಚಾಕುರು, ಬಿಳಗುಂದಗಳಲ್ಲಿ ಬೃಹತ್ ಶೀಲಾಯುಗಕ್ಕೆ ಸೇರಿದ ಗೋರಿಗಳು ಕಂಡುಬಂದಿವೆ.[೧೩] ಬೆಟ್ಟದಪುರದಿಂದ ವಾಯುವ್ಯ ದಿಕ್ಕಿಗೆ ಎರಡೂವರೆ ಮೈಲಿ ಪಶ್ಚಿಮಕ್ಕೆ ದೂರವಿರುವ ಸೀತೆ ಬೆಟ್ಟದಲ್ಲಿಯೂ ಸಹ ಬೃಹತ್ ಶೀಲಾಯುಗದ ಸಮಾಧಿಗಳು ಕಂಡುಬರುತ್ತದೆ.[೧೪] ಪಿರಿಯಾಪಟ್ಟಣ ತಾಲ್ಲೂಕಿನ ಗಡಿಭಾಗದಲ್ಲಿರುವ ಕೊಪ್ಪ ಕಾವೇರಿಯ ಬಲದಂಡೆಯ ಮೇಲಿದೆ. ಇಲ್ಲಿ ಸುಮಾರು ೩೦೦ ಸ್ಮಾರಕ ಶಿಲಾವೃತ್ತಗಳನ್ನು ಡಾ.ಕೆ.ಕೆ.ಸುಬ್ಬಯ್ಯ ಅವರು ಕಂಡುಹಿಡಿದಿದ್ದಾರೆ. ಮತ್ತು ೧೮೬೯ರಲ್ಲಿ ಕೋಲ್ ಎಂಬುವರು ಇಲ್ಲಿ ಹದಿನೇಳು ಸಮಾಧಿಗಳನ್ನು ತೆರೆದು ಪರಿಶೀಲಿಸಿದ್ದಾರೆ. ಕೋಲ್ ನಡೆಸಿದ್ದ ಉತ್ಖನನದಿಂದ ಒಂದು ದೊಡ್ಡ ಬೃಹತ್ ಶಿಲಾಸಮಾಧಿಯು ಒಂಬತ್ತು ಅಡಿ ಉದ್ದ, ಐದೂವರೆ ಅಡಿ ಅಗಲ ಹಾಗೂ ನಾಲ್ಕು ಅಡಿ ಆಳವಾಗಿದ್ದು, ಇದರ ಸುತ್ತ ವೃತ್ತಾಕಾರದ ಆವರಣವು ನಲವತ್ತೇಳು ಅಡಿಯ ವ್ಯಾಸವನ್ನು ಹೊಂದಿದೆ. ಇಲ್ಲಿನ ನಾಲ್ಕು ಗೋರಿಗಳಲ್ಲಿ ಕಪ್ಪು, ಕೆಂಪು ಮಡಿಕೆಗಳು, ಭಾರೀ ಗಾತ್ರದ ಮಣ್ಣಿನ ಪಾತ್ರೆಗಳು, ಮಣ್ಣಿನ ತಟ್ಟೆಗಳು, ಸುರಿಯಲು ಬಾಯಿನಳಿಕೆಗಳುಳ್ಳ ಪಾತ್ರೆಗಳಿರುವುದು ಕಂಡುಬಂದಿವೆ.

ಕೆಲವು ಪಾತ್ರೆಗಳಿಗೆ ಮೂರು ಬಾಯಿನಳಿಕೆಗಳಿದ್ದು ಹತ್ತರಿಂದ ಹದಿಮೂರು ಸೆಂ.ಮೀ. ಉದ್ದವಾಗಿದ್ದು, ಇಲ್ಲಿಯೇ ದೊರಕಿರುವ ಮಾನವನ ಮೂಳೆಗಳು, ಎರಡು ಹಲ್ಲುಗಳಿದ್ದ ಒಂದು ದವಡೆ ಎಲುಬು, ಕಬ್ಬಿಣದ ವಸ್ತುಗಳು ಮತ್ತು ಭತ್ತದ ಸಿಪ್ಪೆಯಿದ್ದ ಪಾತ್ರೆ ಇವೆಲ್ಲ ಇಲ್ಲಿನ ಸಮಾಧಿಗಳಲ್ಲಿ ದೊರೆತಿದ್ದು ಒಂದು ಪಾತ್ರೆಯಲ್ಲಿ ರಾಗಿಯ ಕೆಲವು ಕಾಳುಗಳು ದೊರೆತಿವೆ.[೧೫] ಇದರಿಂದ ಈ ಕಾಲದ ಜನರ ವೃತ್ತಿ ವ್ಯವಸಾಯವಾಗಿತ್ತು ಎಂದು ಹೇಳಲಾಗಿದೆ. ಈ ಜನರು ಒಂದು ಕಡೆ ನೆಲೆನಿಂತು ಜೀವನ ಪದ್ಧತಿಯನ್ನು ಸಾಗಿಸುತ್ತಿದ್ದರು.

ಕೊಪ್ಪ ಒಂದು ಬೃಹತ್ ಶೀಲಾಯುಗದ ನೆಲೆಯಾಗಿದೆ. ಇಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದೊಂದಿಗೆ ರಾಜ್ಯ ಪುರಾತತ್ವ ಇಲಾಖೆಯ ಸಹಯೋಗದೊಂದಿಗೆ ೧೯೭೫–೭೬ರ ಅವಧಿಯಲ್ಲಿ ಎರಡು ಬಾರಿ ಉತ್ಖನನ ಕಾರ್ಯ ಕೈಗೊಂಡ ಎ.ವಿ.ನರಸಿಂಹಮೂರ್ತಿ ಮತ್ತು ಕೆ.ಕೆ.ಸುಬ್ಬಯ್ಯನವರು ಹಲವು ಪ್ರಾಗೈತಿಹಾಸಿಕ ಕುರುಹುಗಳನ್ನು ಬೆಳಕಿಗೆ ತಂದಿದ್ದಾರೆ. ಇವರೊಟ್ಟಿಗೆ ಮೈಸೂರು ವಿಶ್ವವಿದ್ಯಾಲಯ ಡಾ.ಎಂ.ಎಸ್.ಕೃಷ್ಣಮೂರ್ತಿ, ಎಂ. ಕೃಷ್ಣಪ್ಪ ಮತ್ತು ಕ್ಯೂರಿಯೇಟರ್‌ರಾಗಿದ್ದ ಡಾ.ದಯಾನಂದ ಪಟೇಲರವರುಗಳು ಕಾರ್ಯ ನಿರ್ವಹಿಸಿದ್ದಾರೆ. ಈ ಸಂದರ್ಭದಲ್ಲಿ ಡಾ. ಅಲ್ಜಿನ್ ದಂಪತಿಗಳು ಭೇಟಿ ನೀಡಿದ್ದರೆಂದು ತಿಳಿದುಬಂದಿದೆ.

ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ೧೯೮೩-೮೪ರಲ್ಲಿ ಮತ್ತೊಮ್ಮೆ ಉತ್ಖನನವನ್ನು ಕೈಗೊಂಡಿತ್ತು. ಈ ಉತ್ಖನನ ಕಾರ್ಯದಲ್ಲಿ ಬಿ.ಕೆ.ಗುರುರಾಜ್‌ರಾವ್, ಕೃಷ್ಣಮೂರ್ತಿ, ಎಂ.ಪಿ.ಮಹಾದೇವಯ್ಯ ಮತ್ತು ಕೃಷ್ಣಪ್ಪನವರ ತಂಡ ಬೃಹತ್ ಶಿಲಾಯುಗದ ಸಮಾಧಿಗಳನ್ನು ಕಂಡುಹಿಡಿದರು. ಆದರೆ ಈ ಸಂಶೋಧನೆಯ ವರದಿಗಳು ಪ್ರಕಟವಾಗಿಲ್ಲ.[೧೬] ಕ್ಷೇತ್ರಕಾರ್ಯದಲ್ಲಿ ಬೇಣಗಾಲು ಒಂದು ದೊಡ್ಡ ಬೃಹತ್ ಶಿಲಾಯುಗದ ನೆಲೆಯಾಗಿದೆ ಎಂದು ಕಂಡುಬಂದಿದ್ದು ಇಲ್ಲಿಯ ಪ್ರದೇಶವು ಎರಡು ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿರುವುದಾಗಿದೆ.

ಚರಿತ್ರೆ:

ಚರಿತ್ರೆಯನ್ನು ಅಧ್ಯಯನ ಮಾಡುವಾಗ ಆಕರಗಳು ಮುಖ್ಯ. ಅಧ್ಯಯನ ಕ್ರಮದಲ್ಲಿ ಎರಡು ರೀತಿಯ ಆಕರಗಳಿವೆ ಸಾಹಿತ್ಯ ಮತ್ತು ಪುರಾತತ್ವ ಇವುಗಳಲ್ಲಿ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳೆಂದು ವಿಂಗಡಿಸಬಹುದಾಗಿದೆ. ಪ್ರಾಥಮಿಕ ಆಕರಗಳು ಸಮಕಾಲೀನ ದಾಖಲೆ ಪತ್ರಗಳಾಗಿದ್ದು, ವಸ್ತುನಿಷ್ಠತೆಗೆ ಬದ್ಧವಾಗಿರುತ್ತವೆಂಬ ನಂಬಿಕೆಯಿದೆ. ಶಾಸನ, ನಾಣ್ಯ, ತಾಳೇಗರಿ, ಕಂಚಿನಪತ್ರ, ವಾಸ್ತುಶಿಲ್ಪ, ಸಮಕಾಲೀನ ದಾಖಲೆ, ದಿನಚರಿ ಮೊದಲಾವುದಗಳನ್ನು ಹೆಸರಿಸಬಹುದು. ಅನುಷಂಗಿಕ ಆಕರಗಳು ಪ್ರಕಟಗೊಂಡವುಗಳಾಗಿದ್ದು, ಕಾಲ, ಸಮಯ, ಸ್ಥಳ ಇತ್ಯಾದಿ ಲಕ್ಷಣಗಳಿಂದ ಭಿನ್ನವಾಗಿರುತ್ತವೆ.[೧೭] ಮೈಸೂರು ಜಿಲ್ಲೆಯಲ್ಲಿ ಪ್ರಾಗ್ಯೈತಿಹಾಸ ಕಾಲದಿಂದಲೂ ಮಾನವನ ಅಸ್ತಿತ್ವದ ಕುರುಹುಗಳನ್ನು ನಿರಂತರವಾಗಿ ಕಾಣಬಹುದು. ಜಿಲ್ಲೆಯ ವಿವಿಧೆಡೆಗಳಲ್ಲಿ ಅವನು ಬಳಸಿದ ಬೃಹತ್ ಶಿಲಾಯುದಗಳು ಹಾಗೂ ರಚಿಸಿದ ಗವಿವರ್ಣ ಚಿತ್ರಗಳು ಕಂಡುಬಂದಿವೆ. ಅದೇ ರೀತಿ ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿವೆ. ಅಶೋಕನ ಶಾಸನಗಳಲ್ಲಿ ಮೈಸೂರನ್ನು ಮಹಿಷಮಂಡಲ ಎಂದು ಉಲ್ಲೇಖಿಸಿರುವುದರಿಂದ ಮೌರ್ಯರ ಕಾಲದಿಂದ ಚಾರಿತ್ರಿಕಯುಗ ಆರಂಭವಾಗುತ್ತದೆ. ಇದರಿಂದ ಮೈಸೂರು ಜಿಲ್ಲೆ ಇನ್ನೂ ಹೆಚ್ಚಿನ ಮಹತ್ವ ಪಡೆದಿದೆ. ಅಲ್ಲದೆ ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ನಿರ್ಧರಿಸಬಹುದು. ಅಂದರೆ ಕರ್ನಾಟಕದ ಆದಿಚಾರಿತ್ರಿಕ ನೆಲೆಗಳಾದ ಬ್ರಹ್ಮಗಿರಿ, ಚಂದ್ರವಳ್ಳಿ, ವಡಗಾಂಮಾಧವಪುರ, ಬನವಾಸಿ, ತಲಕಾಡು ಮತ್ತು ಹಂಪೆಗಳಂತೆ ಬೆಟ್ಟದಪುರವು ಸಹ ಪ್ರಾಚೀನ ನೆಲೆಯಾಗಿದೆ.

ಪ್ರಸ್ತುತ ಮೈಸೂರು ಜಿಲ್ಲೆಯು ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪಿರಿಯಾಪಟ್ಟಣವು ಒಂದು ಐತಿಹಾಸಿಕ ಮತ್ತು ತಾಲ್ಲೂಕು ಕೇಂದ್ರವಾಗಿದೆ. ಆಡಳಿತ ಏಕೇಂದ್ರಿಕರಣದಿಂದ ಪಿರಿಯಾಪಟ್ಟಣ ತಾಲ್ಲೂಕು ೧೮೬೫ರ ವೇಳೆಯಲ್ಲಿಯೇ ರಚನೆಯಾಗಿದ್ದರೂ ತಾಲ್ಲೂಕು ಕೇಂದ್ರ ಹುಣಸೂರು ಆಗಿತ್ತು. ಇದಕ್ಕೆ ಮುಖ್ಯ ಕಾರಣ ದಟ್ಟವಾದ ಅರಣ್ಯ ಈ

ಭಾಗದಲ್ಲಿದ್ದುದು. ೧೮೮೨ರಲ್ಲಿ ಪ್ರತ್ಯೇಕವಾದ ಹುಣಸೂರು ತಾಲ್ಲೂಕು ರಚನೆಯಾಯಿತು. ಪಿರಿಯಾ ಪಟ್ಟಣ ಅದರೊಳಗೆ ಸೇರಿತ್ತು. ೧೯೩೧ರಲ್ಲಿ ಪಿರಿಯಾಪಟ್ಟಣವನ್ನು ಉಪತಾಲ್ಲೂಕೆಂದು ಘೋಷಿಸಲಾಯಿತು. ಕೆಲ ವರ್ಷಗಳ ನಂತರ ಇದು ಪೂರ್ಣಮಟ್ಟದ ತಾಲ್ಲೂಕಾಯಿತು.[೧೮] ಪ್ರಸ್ತುತ ಪಿರಿಯಾಪಟ್ಟಣ, ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಸೇರಲ್ಪಟ್ಟಿದೆ.

ಪ್ರಸ್ತುತ ಅಧ್ಯಯನವು ಬೆಟ್ಟದಪುರಕ್ಕೆ ಸಂಬಂಧಪಟ್ಟಿದ್ದು ಪ್ರಾಚೀನ ಕಾಲದಿಂದ ಮಾರುಕಟ್ಟೆಯ ಕೇಂದ್ರವಾಗಿದೆ. ಇದು ಒಂದು ಪಿರಿಯಾಪಟ್ಟಣ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿಯ ಕೇಂದ್ರವಾಗಿದೆ. ಗಂಗ ಮತ್ತು ಚೋಳ ವಂಶಗಳ ಸಂಘರ್ಷದ ಸಂದರ್ಭದಲ್ಲಿ ಹುಟ್ಟಿಕೊಂಡ ಎರಡು ಪ್ರಮುಖ ಅರಸು ಮನೆತನಗಳೆಂದರೆ ಚಂಗಾಳ್ವರು ಮತ್ತು ಕೊಂಗಾಳ್ವರು. ಚಂಗಾಳ್ವರು ಆಳಿದ ಭೂಪ್ರದೇಶವೇ ಚಂಗನಾಡು. ಈ ಚಂಗನಾಡಿನ ಮೊದಲ ಉಲ್ಲೇಖ ಕ್ರಿ.ಶ. ೧೧೦೪ರ ಹಾಸನ ತಾಲೂಕಿನ ಗುಡ್ಡತ್ತರಣ್ಯದ ಶಾಸನದಲ್ಲಿ ಕಂಡುಬರುತ್ತದೆ. ಅಲ್ಲಿ ಚಂಗನಾಡು ಮಾವನೂರು ಪ್ರಸ್ತಾಪಿತವಾಗಿದೆ. ನಂತರ ಅರಕಲಗೂಡು ತಾಲ್ಲೂಕಿನ ರಾಮನಾಥಪುರ, ರುದ್ರಪಟ್ಟಣ, ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡಬ್ಯಾಲಳು ರಾವಂದೂರು, ಕೂರಗಲ್ಲು, ಕುಡಕೂರು ಶಾಸನಗಳಲ್ಲಿ ಚಂಗನಾಡಿನ ಪ್ರಸ್ತಾಪವಿದೆ. ಇದರಿಂದ ಚಂಗಾಳ್ವರು ಆಳಿದ ಪ್ರದೇಶವು ಚಂಗನಾಡು ಎಂದು ಹೆಸರು ಪಡೆದಿದೆ. ಅಂದರೆ ಗಂಗರು ಆಳಿದ ಪ್ರದೇಶ ಗಂಗವಾಡಿ. ನೂಳಂಬರು ಆಳಿದ ಪ್ರದೇಶ ನೂಳಂಬವಾಡಿ ಎಂದು ಕರೆಯುವಂತೆಯೇ ಚಂಗಾಳ್ವರು ಆಳಿದ ಪ್ರದೇಶವನ್ನು ಚಂಗನಾಡೆಂದು[೧೯] ಡಾ.ಎಚ್.ಎಸ್.ಗೋಪಾಲರಾವ್ ವ್ಯಕ್ತಪಡಿಸಿರುವ ಅಭಿಪ್ರಾಯ ಸಮರ್ಥನೀಯವಾಗಿದೆ.

ಚಂಗಾಳ್ವರು ತಾವು ಚಂದ್ರವಂಶದವರೆಂದೂ ಯಾದವ ಕುಲಕ್ಕೆ ಸೇರಿದವರೆಂದೂ ದ್ವಾರಕೆಯಿಂದ ಬಂದವರೆಂದು ಮೈಸೂರು ಅರಸರು ಹೇಳಿಕೊಂಡಿರುವಂತೆಯೇ ಇವರೂ ಸಹ ಹೇಳಿಕೊಂಡಿದ್ದಾರೆ. ಚಂಗ ಎಂಬುವುದಕ್ಕೆ ಸುಂದರ ಎಂಬ ಅರ್ಥ ಇರುವಂತೆ ಚಂದ್ರ ಎಂಬ ಅರ್ಥಕ್ಕೆ ಇದು ಹತ್ತಿರದ ಪದವಾಗಿದೆ. ಚಂಗಾಳ್ವರು ಸುಂದರರಾಗಿದ್ದರಿಂದ ಅವರ ರಾಜ ಸಂತತಿಗೆ ಚಂಗಾಳ್ವರು ಎಂಬ ಹೆಸರು ಬಂದಿರಬಹುದು ಅಥವಾ ಬಹಳಷ್ಟು ರಾಜವಂಶಗಳು ತಮ್ಮನ್ನು ಚಂದ್ರವಂಶದವರೆಂದು ಕರೆದುಕೊಳ್ಳುವಂತೆ ಇವರೂ ತಮ್ಮನ್ನು ಚಂದ್ರವಂಶದವರೆಂದು ಕರೆದುಕೊಂಡಿರಬಹುದು. ಚಂಗ ಅರಸರ ನಾಡು ಚಂಗನಾಡು ಎಂಬ ಹೆಸರಾಯಿತೆಂದು ಕಂಡು ಬರುತ್ತದೆ.[೨೦]

ಬೆಟ್ಟದಪುರವು ೩೧೦೨೪.೩೦ ಎಕರೆ ಭೌಗೋಳಿಕ ಪ್ರದೇಶವನ್ನು ಒಳಗೊಂಡಿದ್ದು, ೨೦೧೧ರ ಜನಗಣತಿಯ ಪ್ರಕಾರ ಒಟ್ಟು ೪೬೮೪೬ ಜನಸಂಖ್ಯೆಯನ್ನು ಹೊಂದಿದೆ.[೨೧] ಐತಿಹಾಸಿಕ

ಬೆಟ್ಟದಪುರ ಸ್ಥಾಪನೆಯ ಬಗ್ಗೆ ಹಸ್ತಪ್ರತಿಯು ಬಹಳ ಆಶ್ಚರ್ಯಕರವಾದ ಮಾಹಿತಿಯನ್ನು ನೀಡುತ್ತದೆ. ಅದನ್ನು ಬಿಟ್ಟರೆ ಯಾವುದೇ ಮಾಹಿತಿಯು ದೊರೆಯುವುದಿಲ್ಲ. ಹಸ್ತಪ್ರತಿಯ ಪ್ರಕಾರ ಸೋಮವಾರಪೇಟೆ ತಾಲ್ಲೂಕಿನ ನಂಜರಾಜಪಟ್ಟಣದ ಒಡೆಯ ವಿಕ್ರಮರಾಯ ಇತನು ಗುಜರಾತಿನ ದ್ವಾರಕೆಯ ಮೂಲದ ಜೈನಧರ್ಮದ ಅನುಯಾಯಿ ಮತ್ತು ಯದುವಂಶಕ್ಕೆ ಸೇರಿದವನು.

ವಿಕ್ರಮರಾಯರಾಜ ಮತ್ತು ಅವನ ಮಂತ್ರಿಯಾದ ಮಂಗರಸನೊಂದಿಗೆ ಇಂದಿನ ಬೆಟ್ಟಪುರವಾದ ಪ್ರಾಚೀನ ಅಂಜನಗಿರಿ ಬೆಟ್ಟಕ್ಕೆ ಒಮ್ಮೆ ಭೇಟಿ ನೀಡಿದರು. ಈ ಸಮುದಾಯದಲ್ಲಿ ಇತನು ತನ್ನ ರಾಜ್ಯದಲ್ಲಿ ಇಲ್ಲದಿದ್ದಾಗ, ಈತನ ರಾಜಧಾನಿಯು ಶತೃಗಳಿಂದ ಆಕ್ರಮಣಕ್ಕೆ ಒಳಗಾಯಿತು. ರಾಜರ ಅನುಪಸ್ಥಿತಿಯಲ್ಲಿ ಅನಂತರಾಜನು ರಾಜಧಾನಿಯನ್ನು ನೋಡಿಕೊಳ್ಳುತ್ತಿದ್ದನು. ಅವರೊಂದಿಗೆ ಕಾದಾಡಿ ವೀರಮರಣವನ್ನು ಹೊಂದಿದನು. ಆದರೆ ಆತನ ಮರಣಕ್ಕಿಂತ ಮುಂಚೆ ರಾಜನ ಕುಟುಂಬವನ್ನು ರಾಜನು ಇದ್ದಂತಹ ಸ್ಥಳಕ್ಕೆ ರವಾನಿಸಿದನು. ಅಂತಿಮವಾಗಿ ಈ ರಾಜ್ಯವು ಶತೃಗಳ ವಶವಾಯಿತು. ಈ ಸಂದರ್ಭದಲ್ಲಿ ವಿಕ್ರಮರಾಯನು ಬೇರೆ ದಾರಿಯಿಲ್ಲದೆ ತನ್ನ ಕುಟುಂಬ ಮತ್ತು ಮಂತ್ರಿಗಳೊಂದಿಗೆ ಅಂಜನಗಿರಿ ಬೆಟ್ಟದಲ್ಲಿಯೇ ಉಳಿದನು. ಈ ಸಂದರ್ಭದಲ್ಲಿ ಇಂದಿನ ಮಲ್ಲಿಕಾರ್ಜುನ ಬೆಟ್ಟವಾದ ಅಂದಿನ ತೀರ್ಥಂಕರ ಬೆಟ್ಟದ ಬಳಿಯಲ್ಲಿ ವಾಸ್ತವ್ಯವನ್ನು ಮಾಡಿರುವ ವೇಳೆಯಲ್ಲಿ ಒಂದು ಕಥೆ ಈ ರೀತಿಯಲ್ಲಿ ನಡೆಯುತ್ತೆಂದು ಕಂಡುಬರುವುದು. ಒಂದು ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿರುವ ದೃಶ್ಯವನ್ನು ನೋಡಿ ಪ್ರೇರಿಪಿತಗೊಂಡನು. ಇದರಿಂದ ಇದು ವಾಸ್ತವ್ಯ ಮಾಡಲು ಅತ್ಯಂತ ಸೂಕ್ತ ಮತ್ತು ಪವಿತ್ರವಾದ ಕ್ಷೇತ್ರವೆಂದು ತಿಳಿದನು.[೨೨]

ವಿಕ್ರಮರಾಯನು ಆ ಸ್ಥಳದಲ್ಲಿ ಸ್ಥಳೀಯ ಜನತೆಯಾದ ಬೇಡ ಜನಾಂಗದ ವಿರೋಧವಿದ್ದರೂ ಅಲ್ಲಿಯೇ ಒಂದು ಪಟ್ಟಣವನ್ನು ಕ್ರಿ.ಶ. ಹತ್ತನೆಯ ಶತಮಾನದಲ್ಲಿ ನಿರ್ಮಿಸಿ, ಆ ಪಟ್ಟಣಕ್ಕೆ ತನ್ನ ಹೆಸರಿನಲ್ಲಿಯೇ ವಿಕ್ರಮಪಟ್ಟಣವೆಂದು ಅಥವಾ ವಿಕ್ರಮಪುರವೆಂದು ಕರೆದನು. ಇದರ ಆಡಳಿತಕ್ಕೆ ಅನುಗುಣವಾಗಿ ೭೦೦೦ ಪಗೂಡಗಳಷ್ಟು ಆದಾಯ ತರುವಂತಹ ಒಂದು ಭೂಪ್ರದೇಶವನ್ನು ವಶಪಡಿಸಿಕೊಂಡು[೨೩] ಬೆಟ್ಟದ ತಳಭಾಗದಲ್ಲಿರುವ ಬೆಟ್ಟದತುಂಗ ಎಂಬಲ್ಲಿ ತನ್ನೊಂದಿಗೆ ಬಂದ ೫೦೦-೬೦೦ ಕುಟುಂಬಗಳೊಂದಿಗೆ ನೆಲಸಿದನು.[೨೪]

ಬೇಡ ಜನಾಂಗದವರೊಂದಿಗೆ ಹಲವು ಬಾರಿ ಕಲಹಗಳು ನಡೆದವು. ಇದರ ಪರಿಣಾಮವಾಗಿ ಇವರ ಕಿರುಕಳ ತಡೆಯಲಾರದೆ ಕೊನೆಗೆ ಬೇಡ ಜನಾಂಗದವರೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ರಾಜ ಒಪ್ಪಂದದಂತೆ ರಾಜಕುಟುಂಬದ ಕನ್ಯೆಯರನ್ನು ಬೇಡ ಸಮುದಾಯದ

ಜನಾಂಗದವರೊಂದಿಗೆ ವಿವಾಹ ಮಾಡಿಕೊಡಬೇಕಾಗಿತ್ತು. ಆದರೆ ತಮ್ಮ ಮಗಳ ಮದುವೆಯು ಉತ್ತಮ ರೀತಿಯಲ್ಲಿ ನಡೆಸಬೇಕು ಹಾಗಾಗಿ ನಮಗೆ ಉತ್ತಮವಾದ ಮನೆಗಳನ್ನು ನಿರ್ಮಿಸಿಕೊಟ್ಟರೆ ಮಾತ್ರ ಷರತ್ತಿಗೆ ಒಪ್ಪುತ್ತೇವೆಂದು ಮರುಷರತ್ತನ್ನು ವಿಧಿಸಿದರು. ಬೇಡ ಸಮುದಾಯದವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟು ಅವರ ಸಮುದಾಯದವರ ವಸತಿಗಳ ಸಮೀಪದಲ್ಲಿಯೇ ಇವರಿಗೆ ಮನೆಗಳನ್ನು ಕಟ್ಟಿಸಿದರು. ಸ್ವಲ್ಪ ಸಮಯದಲ್ಲಿಯೇ[೨೫] ವಿಕ್ರಮರಾಯನು ಸುತ್ತಮುತ್ತಲ ಬೇಡನಾಯಕರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಬೇಡನಾಯಕರಲ್ಲಿ ಪ್ರಬಲವಾದವರು ವಲಸೆ ಬಂದು ಚಂಗಾಳ್ವರ ಕನ್ಯೆಯರ ಸೌಂದರ್ಯಕ್ಕೆ ಸೋತು ವಿವಾಹ ಸಂಬಂಧಕ್ಕೆ ಒತ್ತಾಯ ಮಾಡಿದಾಗ ವಿಕ್ರಮರಾಯನು ವಿವಾಹಕ್ಕೆ ಚಪ್ಪರವನ್ನು ಹಾಕಿಸಿ ಚಪ್ಪರದ ಕೊನೆಯಲ್ಲಿ ನಿರ್ಮಿಸಿದ ಕತ್ತಲೆಯ ಕೋಣೆಯಲ್ಲಿ ಕಂದಕವನ್ನು ತೋಡಿಸಿ ಪೂಜೆಯ ನೆಪದಿಂದ ಬೇಡರನ್ನು ಒಬ್ಬೊಬ್ಬರನ್ನಾಗಿ ಕಳುಹಿಸಿ, ಅವರನ್ನು ಕಡಿದು ಕಂದಕದಲ್ಲಿ ಹಾಕಿಸಿದ. ಬೇಡರ ಉಪದ್ರವ ಹೀಗೆ ಮುಕ್ತಾಯವಾಯಿತು.[೨೬]

ನಂತರ ವಿಕ್ರಮರಾಯನು ಕೆಲವು ಉಳಿದ ಬೇಡ ನಾಯಕರನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಂಡು ಅವರಿಗೆ ಸಂಬಂಧಪಟ್ಟ ಎಲ್ಲ ಭೂಮಿಗಳನ್ನು ವಶಪಡಿಸಿಕೊಂಡು ಅದಕ್ಕೆ ಉತ್ತುಂಗ ವಿಕ್ರಮಪುರವೆಂದು ಕರೆದನು. ಅದೇ ಇಂದು ಬೆಟ್ಟದಪುರವಾಗಿದೆ. ಇದರ ಸುತ್ತ ಕೋಟೆಯನ್ನು ಕಟ್ಟಿ ಹಲವು ರಾಜ್ಯಗಳನ್ನು ವಶಪಡಿಸಿಕೊಂಡನು. ಇತನು ಜೈನಧರ್ಮದ ಅವಲಂಭಿಯಾಗಿದ್ದರಿಂದ ಚಿಕ್ಕಹನಸೋಗೆಯಲ್ಲಿ ತ್ರಿಕೂಟಾಚಲ ಜೈನ ದೇವಾಲಯವನ್ನು ನಿರ್ಮಿಸಿದನು. ಚೆನ್ನಾಜಿದೇವಿ, ಕೆಂಪಾಜಿದೇವಿ ಮತ್ತು ಮರುದೇವಮ್ಮನಿ ಎಂಬಂತಹ ರಾಣಿಯರ ಕೋರಿಕೆಯ ಮೇರೆಗೆ ಆದಿನಾಥ, ಶಾಂತಿನಾಥ ಮತ್ತು ನೇಮಿನಾಥ ತೀರ್ಥಂಕರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನೆಂದು ಕಂಡುಬರುತ್ತದೆ. ಬಸದಿಯ ಸೇವೆಗಳಿಗಾಗಿ ದೊಡ್ಡಹನಸೋಗೆ, ಚಿಕ್ಕಹನಸೋಗೆ ಮತ್ತು ಚೆನ್ನಮೊಗ್ಗೆ (ಚೆನ್ನಂಗೆರೆ) ಎಂಬಂತಹ ಗ್ರಾಮಗಳನ್ನು ದಾನ ನೀಡಿದನು. ರಾಜನು ಕೊನೆಯವರೆಗೆ ಉತ್ತುಂಗ ವಿಕ್ರಮಪುರದಲ್ಲಿಯೇ ಉಳಿದು, ಕಾಶೀರಸಮುದ್ರ ಮತ್ತು ದ್ವಾರಸಮುದ್ರಗಳೆಂಬ ಕೆರೆಗಳನ್ನು ಲೋಕಕಲ್ಯಾಣಕ್ಕಾಗಿ ನಿರ್ಮಿಸಿದನು. ಅಲ್ಲದೇ ಜೈನಧರ್ಮ ಪ್ರಚಾರಕ್ಕೆ ಅನುಗುಣವಾಗಿ ಮಲ್ಲಿನಾಥಪುರವೆಂಬ ಗ್ರಾಮವನ್ನು ನಿರ್ಮಿಸಿ ಅದನ್ನು ಜೈನ ತೀರ್ಥಂಕನಾದ ಮಲ್ಲಿನಾಥನಿಗೆ ಸಮರ್ಪಿಸಿದನು. ಇದರ ನಂತರ ಕಲ್ಲಹಳ್ಳಿ ಎಂಬಂತಹ ಪಟ್ಟಣವನ್ನು ಕಟ್ಟಿಸಿ ಅದನ್ನು ತನ್ನ ಮಂತ್ರಿಯಾದ ಮಂಗರಸನಿಗೆ ಒಪ್ಪಿಸಿದನು.[೨೭]

ವಿಕ್ರಮರಾಯನ ನಂತರ ಈತನ ಪುತ್ರ ಚಂಗಾಲರಾಯನು ಪಟ್ಟಾಭಿಷಕ್ತನಾದನು. ಈತನ ವಿಷಯವಾಗಿ ಹಲವು ಕೌತುಕಭರಿತ ಕಥೆಗಳಿವೆ. ಚಂಗಾಲರಾಯನ ಬಲಕಿವಿಯು ಕತ್ತೆಯ ಕಿವಿಯಂತಿತ್ತು ಎಂದು ಕಥೆಯಿದೆ. ಈ ರಹಸ್ಯವು ಚಂಗಾಲರಾಯನಿಗೂ ಮತ್ತು ಅವನ

ಕ್ಷೌರಿಕನಿಗೆ ಬಿಟ್ಟು ಬೇರೆ ಯಾರಿಗೂ ತಿಳಿದಿರಲಿಲ್ಲ. ಈ ರಹಸ್ಯವು ಅವನ ಕ್ಷೌರಿಕನಿಗೆ ಬಹಳ ತೊಂದರೆಯುಂಟು ಮಾಡುತ್ತಿತ್ತು. ಅದನ್ನು ಯಾರಿಗಾದರೂ ಹೇಳಬೇಕೆಂದು ಬಹಳ ಕಾತುರತೆಯನ್ನು ಹೊಂದಿದ್ದ ಅವನು ಈ ರಹಸ್ಯವನ್ನು ಅರಮನೆಯ ಆವರಣದಲ್ಲಿ ಇದ್ದಂತಹ ಗಂಧದ ಮರದಬಳ್ಳಿಯಲ್ಲೇ ನುಡಿದನು. ಅರಮನೆಯ ಪ್ರದೇಶವು ಇಂದು ನಿರ್ಜನ ಪ್ರದೇಶವಾಗಿದೆ. ಗಂಧದ ಮರದ ಅಡಿಯಲ್ಲಿಯೇ ಕ್ಷೌರಿಕನು ರಾಜನಿಗೆ ಕ್ಷೌರವನ್ನು ಮಾಡುತ್ತಿದ್ದನು. ಸ್ವಲ್ಪ ಸಮಯದ ನಂತರ, ಒಮ್ಮೆ ರಾಜನು ದೊಂಬರಾಟದವರ ಕುಣಿತವನ್ನು ನೋಡಿ ಸಂತೋಷಗೊಂಡನು. ಅವರ ಕೋರಿಕೆಯ ಮೇರೆಗೆ ಗಂಧದ ಮರದ ಡೋಲನ್ನು ಉಡುಗೊರೆಯಾಗಿ ನೀಡಲು ನಿರ್ಧರಿಸಿ ಅರಮನೆಯ ಆವರಣದಲ್ಲಿದ್ದಂತಹ ಗಂಧದ ಮರವನ್ನು ನೀಡಿದನು. ಅವರು ಆ ಮರವನ್ನು ಕಡಿಯುವಾಗ ಆ ಕ್ಷೌರಿಕನು ಮರದ ಬಳಿ ಪಿಸುಗುಡುತ್ತಿದ್ದಂತಹ ಮಾತನ್ನು ಪ್ರತಿಧ್ವನಿಸುತ್ತಿತ್ತು ವಿನಃ ಬೇರೆ ಏನನ್ನು ಪ್ರತಿಧ್ವನಿಸುತ್ತಿರಲಿಲ್ಲ. ಅಂದರೆ ಅರಸನ ಕಿವಿ ಕತ್ತೆ ಕಿವಿ, ಅರಸನ ಕಿವಿ ಕತ್ತೆ ಕಿವಿಯೆಂದು ಪ್ರತಿಧ್ವನಿಸುತ್ತಿತ್ತು. ಆವಾಗ ರಾಜನ ರಹಸ್ಯವೆಲ್ಲ ಬಯಲಾಯಿತು.[೨೮]

ಚಂಗಾಲರಾಯನಿಗೆ ಸಂಬಂಧಪಟ್ಟಂತೆ ಇನ್ನು ಒಂದು ಕಥೆಯಿದೆ. ಅದೇನೆಂದರೆ ಈತನ ಬಾಹುಗಳು ಉದ್ದವಾಗಿದ್ದು ಮಂಡಿಯನ್ನು ತಲುಪುತ್ತಿದ್ದವು. ಈತನ ಪಾದತಳವು ಯಾವಾಗಲು ತನ್ನ ತಲೆಯ ನೀಳ ಕೂದಲಿನಿಂದ ಮುಚ್ಚಲ್ಪಡುತ್ತಿತ್ತು. ಪಾದದ ಅಡಿಗೆ ಬಿದ್ದು ಯಾವುದೇ ಜೀವಿಗಳು ಸಾಯದಿರಲಿ ಎಂದು ಈ ರೀತಿಯಾಗಿ ಮಾಡುತ್ತಿದ್ದನು ಎಂದು ತಿಳಿದುಬಂದಿದೆ. ಜೈನ ಸಿದ್ಧಾಂತಗಳ ಪ್ರಕಾರ ಪ್ರಾಣಿ ಹಿಂಸೆ ಮಹಾಪರಾಧವೆಂಬುವುದನ್ನು ತಿಳಿದಿದ್ದನು.

ಚಂಗಾಲರಾಯನು ತನ್ನ ತಂದೆಗಿಂತ ಅತ್ಯಂತ ಬಲಿಷ್ಠ ರಾಜನಾಗಿದ್ದು, ಬೆಟ್ಟದಪುರ ಕೋಟೆಯನ್ನು ಕಟ್ಟಿದ್ದಲ್ಲದೇ ರಾಜ್ಯವನ್ನು ವಿಸ್ತರಿಸಿದನು. ಇತನು ವಿಕ್ರಮಪುರಕ್ಕೆ ಬೆಟ್ಟದಪುರವೆಂದು ನಾಮಕರಣ ಮಾಡಿದನು. ೧೨,೦೦೦ ಪಗೋಡಗಳಷ್ಟು ಆದಾಯ ಬರುವವರೆಗೆ ತನ್ನ ಕೇಂದ್ರಾಡಳಿತ ಪ್ರದೇಶವನ್ನು ವಿಸ್ತರಿಸಿದನು. ಚಂಗಾಲರಾಯನು ತನ್ನ ಮಗಳಾದ ಮಲ್ಲಜ್ಜಮಳನ್ನು ಪಿರಿಯಾಪಟ್ಟಣದ ಲಿಂಗಾಯಿತ ಅಧಿಕಾರಿ ನಂಜುಂಡ ಅರಸನ ಮಗನಾದ ವೀರರಾಜನೊಂದಿಗೆ ವಿವಾಹ ಮಾಡುವುದರ ಮೂಲಕ ಮಧುರ ಬಾಂಧವ್ಯವನ್ನು ಬೆಳೆಸಿದನು. ಈ ಸಂದರ್ಭದಲ್ಲಿ ಲಿಂಗಾಯಿತ ಅನುಯಾಯಿಗಳಿಗೆ ಜೈನಧರ್ಮದ ಬೋಧನೆಯನ್ನು ಮಾಡಿದನೆಂಬ ಪ್ರತೀತಿಯಿದೆ. ಪಿರಿಯಾಪಟ್ಟಣದ ನಂಜರಾಜನು ಎಂಬತ್ತು ವರ್ಷಗಳ ನಂತರ ಸಂಪೂರ್ಣ ಅಧಿಪತ್ಯವನ್ನು ವಹಿಸಿ ಕೆಲವು ಪ್ರಮುಖ ಗ್ರಾಮಗಳನ್ನು ಜಹಗೀರಾಗಿ ನೀಡಿದನು.[೨೯]

ಚೋಳರು ಚಂಗಾಳ್ವರನ್ನು ೧೦೦೪ರ ಪನಸೋಗೆ ಅಥವಾ ಹನಸೋಗೆ ಯುದ್ಧದಲ್ಲಿ ಸೋಲಿಸಿದರು. ಚೋಳರ ದಂಡನಾಯಕ ಪಂಚವಾನ ಮಹಾರಾಯನಿಗೆ ಕೊಂಗಾಳ್ವ ಅರಸ

ಮನಿಜ (ಸುಮಾರು ೧೦೦೦-೧೦೨೦) ಚಂಗಾಳ್ವರ ವಿರುದ್ಧ ನೆರವು ನೀಡಿದ ಕಾರಣ ಚಂಗಾಳ್ವರಿಗೆ ಸೋಲಾಯಿತು.[೨೦] ಇದರಿಂದ ಚಂಗಾಳ್ವರು ಚೋಳರ ಮಾಂಡಲಿಕರಾದರು. ಅಲ್ಲದೆ ಚೋಳ ಎಂಬ ಹೆಸರನ್ನು ತಮ್ಮ ಹೆಸರಿನ ಮುಂದೆ ಬಳಿಸಿರುವುದು ನಿರಂತರವಾಗಿ ಮುಂದುವರೆದಿದೆ. ಚಂಗಾಳ್ವ ವಂಶದ ಮೊದಲ ಶಾಸನೋಲ್ಲೇಖಿತ ರಾಜನಾದ ನನ್ನಿ ಚಂಗಾಳ್ವ (ಸು.೧೦೩೪) ರಾಜೇಂದ್ರ ಚೋಳ ಎಂಬ ಹೆಸರನ್ನು ಹೊಂದಿದ್ದು ಇದು ಅವನ ಚೋಳ ಮಾಂಡಲಿಕತ್ವದ ಸೂಚಕವಾಗಿದೆ. ಜೈನನಾದ ನನ್ನಿ ಚಂಗಾಳ್ವ ಹನಸೋಗೆಯ ಬಸದಿಯನ್ನು ಜೀರ್ಣೋದ್ಧಾರ ಮಾಡಿದಂತೆ ತಿಳಿಯುತ್ತದೆ. ಹನ್ನೊಂದರಿಂದ ಹದಿಮೂರನೆಯ ಶತಮಾನದವರೆಗೆ ಹೊಯ್ಸಳರೊಡನೆ ಸೆಣಸುತ್ತಿದ್ದು ಈ ವಂಶದ ರಾಜರು ಮುಂದೆ ಹೊಯ್ಸಳರ ಮಾಂಡಲಿಕರೂ ಆದರೂ, ಮಹದೇವ (೧೦೯೦) ಉದಯಾದಿತ್ಯ (೧೦೯೭), ಅನ್ನದಾನಿ (೧೧೦೬) ಮುಂತಾದ ದೊರೆಗಳು ಶಾಸನಗಳಲ್ಲಿ ಕಂಡುಬಂದಿದ್ದಾರೆ. ಇವರಿಗೆ ಚೋಳವಂಶದ ರಾಜರ ಹೆಸರುಗಳು ಇವೆ.[೨೧] ೧೧೪೫ರ ಅನಂತರ ಐದು ವರ್ಷಗಳ ತರುವಾಯ ಚಂಗಾಳ್ವರು ಹೊಯ್ಸಳ ನಾಡನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ನರಸಿಂಹನ ದಂಡನಾಯಕ ಬೋಕಣ (ಬೋಮಯ್ಯ) ೧೧೫೫ರಲ್ಲಿ ಕೊಂಗ, ಚಂಗ, ಚೋಳ, ಕೇರಳ ನಾಡುಗಳ ಅರಸುಗಳನ್ನು ಅಡಿಗಿಸಿದನೆಂದು ತಿಳಿದುಬರುತ್ತದೆ. ಹೊಯ್ಸಳ ನರಸಿಂಹನು ೧೧೯೯ ರಲ್ಲಿ ಚಂಗಾಳ್ವರ ಮೇಲೆ ದಂಡೆತ್ತಿ ಹೋದಾಗ ಅವನ ದಳಪತಿ ಗೋವಿದೇವನು ಪರಾಕ್ರಮದಿಂದ ಯುದ್ಧವೆಸಗಿ ಚಂಗಾಳ್ವನು ಏರಿದ್ದ ಆನೆಯನ್ನು ತನ್ನ ಭರ್ಜಿಯಿಂದ ಗಾಯಗೊಳಿಸಿದ. ಚಂಗಾಳ್ವನನ್ನು ಸೆರೆಹಿಡಿದು ಸಂಕೋಲೆಗಳಿಂದ ಬಂಧಿಸಿದ ವಿಷಯ ಸೊರಬದ ಶಾಸನವೊಂದರಲ್ಲಿ ಕಂಡುಬಂದಿದೆ. ಈ ಯುದ್ಧಗಳಲ್ಲಿ ಸೋತ ಚಂಗಾಳ್ವರು ಬಲಹೀನರಾಗಿದ್ದ ಸಮಯದಲ್ಲಿ ಮುಂದೆ ಅರಸನಾಗಿ ಬಂದ ಮಹದೇವ ಚಂಗಾಳ್ವನು ರಾಜಧಾನಿಯನ್ನು ಬೆಟ್ಟದಪುರದಿಂದ ಕೊಡಗಿನ ಕಿಗ್ಗಟ್ಟ್ಯಾದಿನ ಪಾಲ್ಪರೆಗೆ ವರ್ಗಾಯಿಸಿದ. ಹೊಯ್ಸಳರ ಒಂದನೇ ನರಸಿಂಹನು ಚಂಗಾಳ್ವರ ವಿರುದ್ಧ ಯುದ್ಧ ಮಾಡಿದರೂ ಸಹ ಚಂಗನಾಡಿನವರೊಡನೆ ವೈವಾಹಿಕ ಸಂಬಂಧವನ್ನು ಮಾಡಿಕೊಂಡಿರುವಂತೆ ಕಾಣುತ್ತದೆ. ಅವನ ರಾಣಿ ಚಂಗಾಲದೇವಿ ಚಂಗಾಳ್ವ ಕುಲದ ರಾಜಕುಮಾರಿಯಾಗಿರಬಹುದೆಂದು ಅಭಿಪ್ರಾಯ ಪಡಲಾಗಿದೆ.[೨೨] ಇವರ ಆಳ್ವಿಕೆಯ ವಿಚಾರ ಶಾಸನಗಳಲ್ಲಿ ಬಂದರೂ ೧೩೦೦ರ ಅನಂತರ ಎರಡು ಶತಮಾನಗಳ ಕಾಲ ಶಾಸನಗಳು ದೊರೆಯುವುದಿಲ್ಲ.

ಚಂಗನಾಡಿನ ಆರಾಧ್ಯದೇವ ಬೆಟ್ಟದಪುರದ ಮಲ್ಲಿಕಾರ್ಜುನ ಬೆಟ್ಟದಪುರದ ಪ್ರಾಚೀನ ಹೆಸರು ಕೂರುಗಲ್. ಇಲ್ಲಿ ಗಂಗರಾಜ ಬೂತುಗನ ಮಡದಿ ಪರಮಬ್ಬೆಯು ಒಂಬತ್ತನೆಯ ಶತಮಾನದಲ್ಲಿ ಆಳುತ್ತಿದ್ದಳೆಂದು ವೀರಗಲ್ಲು ಶಾಸನ ತಿಳಿಸುತ್ತದೆ. ೩೧೦೮ ಮೆಟ್ಟಿಲುಗಳನ್ನು ಮೇಲೇರಿದರೆ ಬೆಟ್ಟದ ತುದಿಯಲ್ಲಿ ಒಂದು ಶೈವ ದೇವಾಲಯ ಕಂಡುಬರುತ್ತದೆ. ಈ ಬೆಟ್ಟದ

ತುದಿಯಲ್ಲಿ ಪ್ರಸಿದ್ಧ ಸಿಡಿಲು ಮಲ್ಲಿಕಾರ್ಜುನ ದೇವಾಲಯವಿದ್ದು, ಈ ಬೆಟ್ಟವನ್ನು ಸಿರಿಗಿರಿ, ವಿಜಯಗಿರಿ, ವಿಜಯಾಚಲ, ಅನ್ನದಾನಿಮಲ್ಲಿಕಾರ್ಜುನ ಬೆಟ್ಟ ಎಂಬ ಮೊದಲಾದ ಹೆಸರಿನಿಂದ ಕರೆಯುವರು.[೩೩] ಸಿರಿಗಿಯು ರಾಮಾಯಣ ಮತ್ತು ಮಹಾಭಾರತದ ಕಾಲದಿಂದಲೂ ಪ್ರಸಿದ್ಧವಿದೆ. ಗಯ ಎಂಬ ಒಬ್ಬ ಗಂಧರ್ವನು ಗಂಗಾನದಿಯಿಂದ ಶಾಪಗ್ರಸ್ತನಾಗಿದ್ದ ಆದ್ದರಿಂದ ಶಾಪ ವಿಮೋಚನೆಯಾಗಬೇಕಾದರೆ ಇಲ್ಲಿರುವ ಮಲ್ಲಿಕಾರ್ಜುನ ದೇವರನ್ನು ಸಿಡಿಲಿನಿಂದ ಪೂಜಿಸಬೇಕೆಂದು ಅನುಗ್ರಹಿಸಿದಳು. ಹಾಗಾಗಿ ಈ ಲಿಂಗವನ್ನು ಸಿಡಿಲು ಮಲ್ಲಿಕಾರ್ಜುನ ದೇವಾಲಯವೆಂದು ಕರೆಯುತ್ತಾರೆ. ಪ್ರತಿವರ್ಷವೂ ಮಳೆಗಾಲದ ಪ್ರಾರಂಭಕ್ಕಿಂತ ಮೊದಲು ಇಲ್ಲಿಯ ದೇವಾಲಯ ಕಿಟಕಿಗಳ ಮೂಲಕ ಒಂದು ಸಿಡಿಲು ಒಳಪ್ರವೇಶಿಸಿ ಸುತ್ತು ಹಾಕಿ ಹೊರಹೋಗುತ್ತದೆ ಎಂದು ಪ್ರತೀತಿಯಿದೆ.[೩೪]

ನಂಜರಾಜನು (೧೫೦೨-೧೫೩೩) ಅಧಿಕಾರಕ್ಕೆ ಬಂದ ಕೆಲವು ವರ್ಷಗಳಲ್ಲಿಯೇ ಎಂದರೆ ೧೫೦೯ರಲ್ಲಿ ಕೃಷ್ಣದೇವರಾಯ ಪಟ್ಟಕ್ಕೆ ಬಂದನು. ರಾಯನು ಆಡಳಿತ ವಹಿಸಿಕೊಂಡ ಕೂಡಲೇ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದಾಗ ಹೊಯ್ಸಳ ನಾಡಿಗೂ ಬಂದಿದ್ದನೆಂದು ಚರಿತ್ರೆಯಲ್ಲಿ ವರ್ಣಿಸಲಾಗಿದೆ. ಬಹುಶಃ ಆ ಸಂದರ್ಭದಲ್ಲಿ ಸ್ವತಂತ್ರವಾಗಿಯೇ ಆಳ್ವಿಕೆ ನಡೆಸಲು ಪ್ರಯತ್ನಿಸಿದ ಚಂಗಾಳ್ವ ನಂಜರಾಜ ಮತ್ತು ಕೃಷ್ಣದೇವರಾಯನ ಸೈನ್ಯಕ್ಕೂ ಯುದ್ಧ ನಡೆದಿರಬಹುದು. ಹಾಗಾಗಿ ಚಂಗಾಳ್ವರು ವಿಜಯನಗರದ ಅರಸರ ಅಧೀನಕ್ಕೊಳಪಟ್ಟ ಪರಿಣಾಮವಾಗಿ ಚಂಗಾಳ್ವ ಭೂಮಿಯಲ್ಲೆಲ್ಲ ಅವರು ಹಾಕಿಸಿದ ಶಾಸನಗಳು, ಅವರ ಕಟ್ಟಿಸಿದ ದೇವಾಲಯಗಳು, ಅವರ ಹೆಸರಿನ ಊರುಗಳು ಎಲ್ಲೆಂದರಲ್ಲಿ ಕಂಡುಬರುತ್ತವೆ. ವಿಜಯನಗರದ ರಾಜರೋ ಅಥವಾ ಪ್ರತಿನಿಧಿಗಳೋ ಆಗಿರಬಹುದಾದ ಬುಕ್ಕರಾಯ, ಮಲ್ಲಿಕಾರ್ಜುನ, ನರಸಣ್ಣನಾಯಕ ಕೃಷ್ಣದೇವರಾಯ, ಲಕ್ಕಣ್ಣವೊಡೆಯ, ಹಂಪರಸ, ವೀರನರಸಿಂಹ, ಕೃಷ್ಣರಾಮನಾಯಕ, ಮಹಾಮಂಡಲೇಶ್ವರ ರಾಮರಾಜರಾಯ, ತಿರುಮಲರಾಜಯ್ಯದೇವರ ಹೆಸರುಗಳು ಈ ಪ್ರದೇಶಗಳಲ್ಲಿ ಕಂಡುಬರುವ ಶಾಸನಗಳಲ್ಲಿ ಕಂಡುಬರುತ್ತವೆ.[೩೫]

ಚಂಗಾಳ್ವ ನೆಲದಲ್ಲಿ ವೀರಶೈವ ಧರ್ಮವು ಪ್ರಗತಿಯನ್ನು ಹೊಂದಿತ್ತಲ್ಲದೆ ಚಂಗಾಳ್ವರು ಮಲ್ಲಿಕಾರ್ಜುನ ಸ್ವಾಮಿಯನ್ನು ತಮ್ಮ ಕುಲದೈವವನ್ನಾಗಿ ಆರಾಧಿಸಿದರು. ವೀರ ಶ್ರೀಕಂಠರಾಜಯ್ಯ ದೇವ ಮಹಾಅರಸು ಇವರ ಮಗನಾದ ಪಿರಿಯರಾಜಯ್ಯ ದೇವ ಮಹಾಅರಸು, ಸಿರಿಗೆರೆ ಅನ್ನದಾನಿ ಮಲ್ಲಿಕಾರ್ಜುನ ದೇವರ ಅಂಗ-ರಂಗ-ಭೋಗ ಮತ್ತು ಪೂಜೆಗಳಿಗಾಗಿ ಭಕ್ತಿಯಿಂದ, ತಮ್ಮ ತಂದೆಯಾದ ಶ್ರೀಕಂಠರಾಜ ತಾಯಿ ವಲ್ಲಭಮ್ಮ ಮತ್ತು ಪುತ್ರ ಪಿರಿಯೊಡೆಯನಿಗೆ ಒಳ್ಳೆಯದಾಗಬೇಕೆಂದು, ನಂಜರಾಯಪಟ್ಟಣದ ಸೀಮೆಯಲ್ಲಿರುವ ತುಂಗದ ಸ್ಥಳವನ್ನು ಮತ್ತು ಅದರ ಹಳ್ಳಿಗಳಾದ ಪಿರಿಯಸಮುದ್ರ, ಆನೆವಾಳು, ಕೌಲನಹಳ್ಳಿ, ಲಕೂರು, ಕೊಟ್ಟವಳ್ಳಿ, ಮೇಲೂರು,

ಮರದೂರು ಮೊದಲಾದ ಹದಿನೈದು ಹಳ್ಳಿಗಳನ್ನು ದಾನವಾಗಿ ನೀಡಿದನು.[೩೬] ಅಲ್ಲದೆ ೧೫೧೧ರಲ್ಲಿ ತನ್ನ ತಂದೆಯಾದ ಶ್ರೀಕಂಠರಾಜ, ತಾಯಿ ವಲ್ಲಭಮ್ಮನವರಿಗೆ ಕೈಲಾಸ ಪ್ರಾಪ್ತಿಯಾಗಲೆಂದು ಮತ್ತು ಚಂಗಾಳ್ವವಂಶದ ಎಲ್ಲ ಸದಸ್ಯರಿಗೆ ಒಳ್ಳೆಯದಾಗಲಿಯೆಂದು ದೇವರ ದೇವನೆಂದು ಕರೆಯುವ ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಒಂದು ದೊಡ್ಡ ಘಂಟೆಯನ್ನು ದಾನ ನೀಡಿದನು.[೩೭]

ರಾಮರಾಜಯ್ಯನ ಪುತ್ರನಾದ ತಿರುಮಲ ರಾಜಯದೇವ ಮಹಾಅರಸು ನಂಜರಾಯ ಪಟ್ಟಣದ ರುದ್ರಗಣಕ್ಕೆ ಒಂದು ಶಿಲಾಶಾಸನವನ್ನು ಹೊರಡಿಸಿ ಅದನ್ನು ರಾಮರಾಜಯ್ಯ ಮತ್ತು ತಿಮ್ಮಾಜಮ್ಮನವರಿಗೆ ಒಳ್ಳೆಯದಾಗಬೇಕೆಂದು ಮಲ್ಲಿಕಾರ್ಜುನ ದೇವರ ಅಂಗ–ರಂಗ–ಭೋಗಕ್ಕಾಗಿ ಮಲವಡಿ ರಾಜ್ಯವನ್ನು ಕ್ರಿ.ಶ. ೧೫೨೯ರಲ್ಲಿ ಶ್ರೀಗಿರಿಯ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದನು. ಈ ದಾನವು ಚಂಗಾಳ್ವ ವಂಶದಲ್ಲಿ ಜನಿಸಿದ ನಂಜರಾಯ ಪಟ್ಟಣದ ರಾಜರುಗಳಿರುವರೆಗೆ ಮತ್ತು ಭೂಮಿ ಆಕಾಶಗಳಲ್ಲಿರುವವರೆಗೆ ನಿರಂತರ ಇರಬೇಕೆಂದು ಶಾಸನವನ್ನು ಕೆತ್ತನೆಮಾಡಿ ನಿಲ್ಲಿಸಲಾಗಿದೆ.

ಕಾಶಿ, ಕೇದಾರ, ನೀಲಕಂಠ, ತುಂಗಾಭದ್ರ ಮತ್ತು ವಾರಣಾಸಿಯ ಅಭಿಮಾನಿ ದೇವರುಗಳನ್ನು ವಂದಿಸುತ್ತಾ ಶ್ರೀಶೈಲ ಪರ್ವತದ ಮಲ್ಲಿಕಾರ್ಜುನನ್ನು ನಮಿಸುತ್ತಾ, ತಿರುಪತಿಯ ತಿರುವೆಂಗಳನಾಥ ದೇವರನ್ನು ಪ್ರಾರ್ಥಿಸುತ್ತಾ, ಕಪ್ಪಿನಿಯ ನಂಜುಂಡೇಶ್ವರನನ್ನು ಪ್ರಾರ್ಥಿಸುತ್ತಾ, ಶ್ರೀರಂಗಪಟ್ಟಣದ ರಂಗನಾಥನನ್ನು ಪ್ರಾರ್ಥಿಸುತ್ತಾ ಕೈಲಾಸ ಮತ್ತು ವೈಕುಂಠ ಅಭಿಮಾನಿ ದೇವತೆಗಳನ್ನು ಪ್ರಾರ್ಥಿಸುತ್ತಾ ಅನ್ನದಾನಿ ಮಲ್ಲಿಕಾರ್ಜುನ ದೇವರ ರಥೋತ್ಸವದ ಅಂಗವಾಗಿ ರಥೋತ್ಸವದ ಸಮಯದಲ್ಲಿಯೇ ಈ ಶಾಸನವನ್ನು ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರ ಮುಂದೆ ದಾನ ಮಾಡಲಾಗಿದೆ.[೩೮] ಇದರಿಂದ ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಚಂಗಾಳ್ವ ಮನೆತನ ಚಿಕ್ಕದಾಗಿದ್ದರೂ ದಕ್ಷಿಣ ಭಾರತದಲ್ಲಿ ಅತ್ಯಂತ ಹೆಚ್ಚು ಭಕ್ತರನ್ನು ಒಳಗೊಂಡು ಪವಿತ್ರ ಕ್ಷೇತ್ರವಾಗಿತ್ತು ಎಂದು ಕಂಡುಬಂದಿದೆ.

ನಿರಂತರವಾಗಿ ಮೈಸೂರು ಒಡೆಯರಿಗೂ ಮತ್ತು ಚಂಗಾಳ್ವರಿಗೂ ಕಲಹ ಏರ್ಪಡುತ್ತಲೇ ಇತ್ತು. ಅಂತಿಮವಾಗಿ ಪಿರಿಯಾಪಟ್ಟಣದ ರಾಜ ಮೈಸೂರು ಅರಸನಿಗೆ ವಾರ್ಷಿಕ ಪೊಗದಿಯಾಗಿ ೩೦೦೦ ವರಹಗಳನ್ನು ಕೊಡಬೇಕೆಂದು ಹಿಂದೆ ತೀರ್ಮಾನಿಸಲಾಗಿತ್ತು. ಈ ಒಪ್ಪಂದವನ್ನು ಪಿರಿಯಾಪಟ್ಟಣದ ಅರಸರು ಒಪ್ಪದೆ ತಿರಸ್ಕರಿಸಿದ್ದರಿಂದ ಕಂಠೀರವ ನರಸರಾಜನಿಗೂ ಪಿರಿಯಾಪಟ್ಟಣದ ರಾಜನಿಗೂ ಯುದ್ಧ ನಡೆಯಿತು. ಈ ಯುದ್ಧವನ್ನ ಪ್ರೋನೇಜ ಎಂಬ ಪಾದ್ರಿಯು ಮೂಗುಗಳಿಗಾಗಿ ನಡೆದ ಯುದ್ಧವೆಂದು ವರ್ಣಿಸಿದ್ದಾರೆ. ಎದುರಾಳಿಗಳ ಮೂಗುಗಳನ್ನು

ಕತ್ತರಿಸಬೇಕೆಂದು ಕಂಠೀರವ ನರಸರಾಜ ಆಜ್ಞೆ ಇತ್ತೆಂದು ಅಭಿಪ್ರಾಯಪಟ್ಟಿರುವನು. ಕಂಠೀರವ ನರಸರಾಜನು ಎದುರಾಳಿಗಳ ಮೂಗುಗಳನ್ನು ಕತ್ತರಿಸಿ ಅವರನ್ನು ವಿಕಾರಗೊಳಿಸುತ್ತಿದ್ದುದಲ್ಲದೆ ಅತ್ಯಂತ ಕ್ರೂರ ರೀತಿಯಲ್ಲಿ ನರಳಿ ಸಾಯುವಂತೆ ಮಾಡಿದನು. ಅಂತಿಮವಾಗಿ ಬೆಟ್ಟದಪುರ, ಅರಕಲಗೂಡನ್ನು ವಶಪಡಿಸಿಕೊಳ್ಳುವಲ್ಲಿ ಸ್ವತಃ ನರಸರಾಜನೇ ಯುದ್ಧಕ್ಕೆ ಬಂದಿದ್ದರೂ ಎರಡನೆಯ ಬಾರಿಗೆ ದಳವಾಯಿಯೊಬ್ಬ ಪಿರಿಯಾಪಟ್ಟಣವನ್ನು ಮುತ್ತಿದ್ದನು. ನಂತರ ಪ್ರದೇಶವು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತು.[೩೯]

ಅಡಿಟಿಪ್ಪಣಿಗಳು:

೧. ಡಾ. ಷೇಕ್‌ಅಲಿ., (ಸಂ)., ೧೯೭೬, ಇತಿಹಾಸ ಪರಿಚಯ, ಮೈಸೂರು, ಪುಟ.೫.

೨. ಡಾ. ಸದಾಶಿವ. ಕೆ., ೨೦೦೧, ಪ್ರಾಚೀನ ಭಾರತದ ಇತಿಹಾಸ, ಮೈಸೂರು, ಪುಟ.೨.

೩. ಅದೇ.

೪. ಶ್ರೀಧರ ಅಡಿಗ, ೨೦೦೬, ಕನಾಟಕ ಪ್ರೇಕ್ಷಣೀಯ ಸ್ಥಳಗಳು, ಪುಟ. ೪೬.

೫. ಬಿ.ಎಲ್.ರೈಸ್., ಮೈಸೂರು ಗ್ಯಾಸೆಟಿಯರ್, Vol - I, ಪುಟ. ೧೦.

೬. ಡಾ. ರಾಜಶೇಖರ.ಪಿ.ಕೆ., ೨೦೦೧, ಶಿವಸಂಪದ, ಮೈಸೂರು, ಪುಟ. ೬೧.

೭. ಅದೇ.

೮. ಬಿ.ಎಲ್.ರೈಸ್., ಮೈಸೂರು ಗ್ಯಾಸೆಟಿಯರ್, 'ಪೂರ್ವೋಕ್ತ', ಪುಟ. ೧೦.

೯. ಎಮ್.ಎ.ಆರ್.–೧೯೪೩, ಪುಟ. ೩೪.

೧೦. ಡಾ. ರಾಜಶೇಖರ್.ಪಿ.ಕೆ., 'ಪೂರ್ವೋಕ್ತ', ಪುಟ. ೬೨.

೧೧. ಪ್ರೊ. ರಂಗಸ್ವಾಮಯ್ಯ.ಜಿ.ಆರ್., ೨೦೦೧, ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಮೈಸೂರು, ಪುಟ.೨೧.

೧೨. ಡಾ. ಶಿವರುದ್ರಪ್ಪಸ್ವಾಮಿ.ಎಸ್.ಎನ್., ೨೦೦೪, ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ತಿಪಟೂರು, ಪುಟ. ೪೪.

೧೩. ಶಿವತಾರಕ್.ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಹಂಪಿ, ಪುಟ. ೫೮೧.

೧೪. ಎಮ್.ಎ.ಆರ್.: 'ಪೂರ್ವಕ್ತ', ಪುಟ. ೩೪.

೧೫. ಸೂರ್ಯನಾಥ.ಯು.ಕಾಮತ್., ೧೯೯೨, ಕೊಡಗು ಜಿಲ್ಲೆ ಗ್ಯಾಸೆಟಿಯರ್, ಬೆಂಗಳೂರು, ಪುಟ. ೬೯.

೧೬. ಡಾ. ರಂಗರಾಜು.ಎನ್.ಎಸ್., ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮೈಸೂರು, ಮಾಹಿತಿ ನೀಡಿದವರು.

೧೭. ಪ್ರೊ. ಲಕ್ಷ್ಮಣ್ ತೆಲಗಾವಿ., 'ಪೂರ್ವೋಕ್ತ', ಪುಟ. ೨೦.

೧೮. ಡಾ. ರಾಜಶೇಖರ್.ಪಿ.ಕೆ., 'ಪೂರ್ವೋಕ್ತ', ಪುಟ. ೬೯.

೧೯. ಡಾ. ಗೋಪಾಲರಾವ್.ಹೆಚ್.ಎಸ್., ೨೦೦೦, ಚಂಗಾಳ್ವರು, ಹಂಪಿ, ಪುಟ ೨೩.

೨೦. ಡಾ. ರಾಜಶೇಖರ್.ಪಿ.ಕೆ., 'ಪೂರ್ವೋಕ್ತ', ಪುಟ. ೧೦೧, ೧೦೨.

೨೧. ಸಿಗಾಂಚಾರ್, ನಾಡಕಛೇರಿ, ಮಾಹಿತಿ ನೀಡಿದವರು, ಬೆಟ್ಟದಪುರ.

೨೨. ಎಮ್.ಎ.ಆರ್.–೧೯೨೪, ಪುಟ. ೧೪.

೨೩. ಬಿ.ಎಲ್.ರೈಸ್., ೨೦೦೪, ಮೈಸೂರು ಜಿಲ್ಲೆ ಗ್ಯಾಸೆಟಿಯರ್, Vol - II, ಲಂಡನ್, ಪುಟ. ೨೩೬.

೨೪. ಡಾ. ರಾಜಶೇಖರ್.ಪಿ.ಕೆ., 'ಪೂರ್ವೋಕ್ತ', ಪುಟ. ೧೦೬.

೨೫. ಎಮ್.ಎ.ಆರ್.–೧೯೨೪, 'ಪೂರ್ವಕ್ತ'.

೨೬. ಡಾ. ರಾಜಶೇಖರ್.ಪಿ.ಕೆ., 'ಪೂರ್ವೋಕ್ತ', ಪುಟ. ೧೦೬, ೧೦೭.

೨೭. ಎಮ್.ಎ.ಆರ್.–೧೯೨೪, 'ಪೂರ್ವಕ್ತ'.

೨೮. ಹಯವದನರಾವ್.ಸಿ., ಮೈಸೂರು ಗ್ಯಾಸೆಟಿಯರ್, Vol - V, ಪುಟ. ೬೪೪.

೨೯. ಹಯವದನರಾವ್.ಸಿ. ಮತ್ತು ಬಿ.ಎಲ್.ರೈಸ್., 'ಪೂರ್ವೋಕ್ತ'.

೩೦. ರಾಜಾರಾಮ ಹೆಗಡೆ (ಸಂ)., ೨೦೦೧., ಮಲೆಕರ್ನಾಟಕದ ಅರಸು ಮನೆತನಗಳು, ಹಂಪಿ, ಪುಟ.೧೯೮.

೩೧. ಕನ್ನಡ ವಿಷಯ ವಿಶ್ವಕೋಶ, ೧೯೭೯, ಮೈಸೂರು, ಪುಟ. ೫೩೭.

೩೨. ರಾಜಾರಾಮ ಹೆಗಡೆ – 'ಪೂರ್ವೋಕ್ತ', ಪುಟ. ೨೦೧.

೩೩. Suryanath. U. Kamath., (Editor)., 1983-93, Decennial Supplement, Bangalore, Page 706.

೩೪. ಅದೇ.

೩೫. ರಾಜಾರಾಮ ಹೆಗಡೆ, 'ಪೂರ್ವೋಕ್ತ', ಪುಟ. ೨೦೫.

೩೬. ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–೪, ಶಾಸನ ಸಂಖ್ಯೆ ೭೧.

೩೭. ಅದೇ ಶಾಸನಸಂಖ್ಯೆ ೬೨.

೩೮. ಅದೇ ೫೯.

೩೯. ರಾಜಾರಾಮ ಹೆಗಡೆ, 'ಪೂರ್ವೋಕ್ತ', ಪುಟ. ೨೦೮.

ಅಧ್ಯಾಯ : ಮೂರು

ಮೌಖಿಕ ಚರಿತ್ರೆ

ಅಧ್ಯಾಯ : ಮೂರು

ಮೌಖಿಕ ಚರಿತ್ರೆ

ಮೌಖಿಕ ಪರಂಪರೆಯಲ್ಲಿ ಉಳಿದು ಬಂದ ಜನಪದ ಸಂಸ್ಕೃತಿಯ ಕುರುಹುಗಳಲ್ಲಿ ಜಾನಪದ ಸಾಹಿತ್ಯವೂ ಒಂದಾಗಿದ್ದು, ಐತಿಹ್ಯಗಳ ಪ್ರಭಾವವಿರುವುದು. ಭಾರತವು ಜಾನಪದದ ತವರೂರು ಎಂದು ಪಾಶ್ಚಿಮಾತ್ಯ ವಿದ್ವಾಂಸರು ಅಭಿಪ್ರಾಯಪಟ್ಟಿದ್ದು ಜಾನಪದ ಅಧ್ಯಯನಗಳಿಗೆ ಜಗತ್ತಿನಾದ್ಯಾಂತ ಇಂದು ಹೊಸ ಚಾಲನೆ ದೊರೆಯುತ್ತಿದೆ. ಇಂಥಹ ಮೌಖಿಕ ಕಥೆಗಳನ್ನು, ಐತಿಹ್ಯಗಳನ್ನು ಜನರು ಮೌಖಿಕವಾಗಿ ಹೇಳುತ್ತ ಬಂದಿದ್ದಾರೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಬಾಯಿಯಿಂದ ಬಾಯಿಗೆ ಹರಿದು ಬಂದಿರುವುದು ಇಂದಿಗೂ ಜಾನಪದ ಸಂಸ್ಕೃತಿಯು ಉಳಿದು ಬಂದಿರುವುದು ಗ್ರಾಮೀಣ ಜನತೆಯಲ್ಲಿ, ಅದರಲ್ಲೂ ಬುಡಕಟ್ಟು ಜನತೆಯಲ್ಲಿ ಮಾತ್ರ ಕಾಣಲು ಸಾಧ್ಯ.

ಜನರ ಸ್ಮರಣೆಯಲ್ಲಿ ಉಳಿದ ವಿಚಾರವನ್ನು ಇತಿಹಾಸವಾಗಿ ರೂಪಾಂತರಗೊಳಿಸುವ ಪ್ರಕ್ರಿಯೆಯೇ ಮೌಖಿಕ ಇತಿಹಾಸ ಎನ್ನಬಹುದು. ಮೌಖಿಕ ಚರಿತ್ರೆಯ ರಚನೆಗೆ ಮಾತ್ರವಲ್ಲದೆ ಜಾನಪದ, ಸಮಾಜಶಾಸ್ತ್ರ, ಮಾವನಶಾಸ್ತ್ರ, ಜೀವನ ಚರಿತ್ರೆ ಮುಂತಾದ ಶಾಸ್ತ್ರಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸುವ ಆಕಾರಗಳಾಗಿವೆ. ಲಿಖಿತ ಬರಹ ಮತ್ತು ಸ್ಮಾರಕಗಳನ್ನು ಆಧರಿಸಿ ಹೇಳುವುದು ಇತಿಹಾಸದ ಒಂದು ಭಾಗವಾದರೇ ಇನ್ನೊಂದು ಜನಪದರಲ್ಲಿದೆ. ಜನಪದರಲ್ಲಿ ನಿರ್ದಿಷ್ಟ ಕಾಲಮಿತಿಯ ಆಕರಗಳನ್ನೊಳಗೊಂಡ ಚರಿತ್ರೆ ಎಂಬುವುದಿಲ್ಲ. ಅವರಲ್ಲಿ ಪುರಾಣ, ಕಥೆ, ಕಾವ್ಯ ಮತ್ತು ಐತಿಹ್ಯ, ನಂಬಿಕೆಗಳಿವೆ. ಇದನ್ನೇ ಅವರು ಇತಿಹಾಸ ಎಂದು ತಿಳಿದುಕೊಂಡು ನಿರೂಪಿಸುತ್ತಾರೆ. ಜಾನಪದ ನಿರೂಪಕರಿಗೆ ದಾಖಲೆಗಳ ಅವಶ್ಯಕತೆಯಿರುವುದಿಲ್ಲ. ಅವರು ನಿರೂಪಿಸುವುದನ್ನೇ ಸತ್ಯ ಎಂದು ತಿಳಿದಿರುವರು. ನನ್ನ ಕ್ಷೇತ್ರಕಾರ್ಯದಲ್ಲಿ ಹಲವು ಮಾಹಿತಿಗಳನ್ನು ಸಂಗ್ರಹಿಸಿದ್ದು, ವಿಶ್ಲೇಷಣೆಗೆ ಒಳಪಡಿಸಿ ಚರಿತ್ರೆಯೊಂದಿಗೆ ಹೋಲಿಸಿ ಮೌಖಿಕ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಿರುವುದಾಗಿದೆ. ಹೆಸರೇ ಸೂಚಿಸುವಂತೆ ಬೆಟ್ಟದಪುರವು ಬೆಟ್ಟಗುಡ್ಡಗಳಿಂದ ಆವೃತ್ತವಾಗಿರುವುದು. ಚಿಕ್ಕ-ಗುಡ್ಡಗಳೊಂದಿಗೆ ಅತ್ಯಂತ ದೊಡ್ಡ ಬೆಟ್ಟವಿದ್ದು, ಬೆಟ್ಟವು ಮೈಸೂರು ಜಿಲ್ಲೆಯಲ್ಲಿಯೇ ೪೩೮೯ ಅಡಿ ಎತ್ತರವಾಗಿದ್ದು ಮೊದಲನೆಯದಾಗಿದೆ. ಪ್ರಾಚೀನ ಕಾಲದಿಂದ ಸ್ಥಳೀಯ ಜನತೆಯು ಮುಖ್ಯ ವೃತ್ತಿ ವ್ಯವಸಾಯ ಮತ್ತು ವ್ಯಾಪಾರವಾಗಿದ್ದು ತಂಬಾಕು ಇವರ ವಾಣಿಜ್ಯ ಬೆಳೆಯಾಗಿದೆ. ಮೂಲತಃ ಬೆಟ್ಟದಪುರ ಮಲ್ಲಿನಾಥ ತೀರ್ಥಂಕರ[೧] ಬೆಟ್ಟವೆಂದು ಜೈನ

ಅನುಯಾಯಿಗಳು ಹೇಳುವರು. ಇದಕ್ಕೆ ಅನುಗುಣವಾಗಿ ಬೆಟ್ಟದಪುರದ ಸಂಸ್ಥಾಪಕ ವಿಕ್ರಮರಾಯ ಜೈನ ಅವಲಂಬಿಯಾಗಿದ್ದ ಜೊತೆಗೆ ಪ್ರಾರಂಭದ ಚಂಗಾಳ್ವರು ಜೈನ ಧರ್ಮದವರು. ಇದಕ್ಕೆ ಅನುಗುಣವಾಗಿ ಗ್ರಾಮದಲ್ಲಿರುವ ಮತ್ತು ಸುತ್ತಲಿನ ಜೈನ ವಸತಿಗಳು ಇಂದು ಶೈವ ದೇವಾಲಯಗಳಾಗಿವೆ ಎಂದು ಸ್ಥಳೀಯ ಜನತೆ ಅಭಿಪ್ರಾಯ ವ್ಯಕ್ತಪಡಿಸುವರು. ಇದಕ್ಕೆ ಅನುಗುಣವಾಗಿ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ವಾಸ್ತುಶಿಲ್ಪವು ಮೂಲತಃ ಹಿಂದೂ ವಾಸ್ತುಶೈಲಿಗೆ ವಿಭಿನ್ನವಾಗಿದೆ.

ಬೆಟ್ಟದ ಉಗಮದ ಬಗ್ಗೆ ಒಂದು ಐತಿಹ್ಯವಿದೆ.[೨] ಇದರ ಪ್ರಕಾರ ರೈತ ಜನತೆ ಬೆಳೆಗಳನ್ನು ಬೆಳೆದು ಸಂಗ್ರಹಿಸಿರುವರು. ಮಲ್ಲಯ್ಯ ಎಂಬ ರೈತ ರಾಗಿ ಬೆಳೆದು ಒಂದು ಗುಡ್ಡೆಯನ್ನು ಹಾಕಿದ್ದ. ಆ ಸಮಯದಲ್ಲಿ ಇಲಿಯೊಂದು ಗುಡ್ಡವನ್ನು ಹೊಕ್ಕಿತ್ತು. ಮಲ್ಲಯ್ಯನು ಇಲಿಯನ್ನು ಓಡಿಸಲು ಗುಡ್ಡವನ್ನು ಕಿತ್ತು ಮತ್ತೊಂದು ಕಡೆ ಸಾಗಿಸುತ್ತಾ ಹೋದಂತೆ ಇಲಿಯು ರೈತನಿಗೆ ಸಿಗಲೇ ಇಲ್ಲ. ಇದರಿಂದ ಭೂಮಿಯ ಮಣ್ಣನ್ನು ಮತ್ತು ರಾಗಿಯ ತೆನೆಯನ್ನು ರಾಸಿ ಹಾಕುತ್ತಾ ಹೋದ. ಆದರೆ ಅಂತಿಮವಾಗಿ ಇಲಿಯನ್ನು ಹೊಡೆಯುವಲ್ಲಿ ಮಲ್ಲಯ್ಯ ವಿಫಲವಾದನು. ಈ ರಾಸಿಯೇ ಬೆಟ್ಟವಾಯಿತೆಂದು ಹೇಳುವರು. ಇಂತಹ ರೈತನಾದ ಮಲ್ಲಯ್ಯ ಊರಿನ ಅರಸನ (ಯಜಮಾನರ) ಗೋವುಗಳನ್ನು ದಿನನಿತ್ಯವು ಬೆಟ್ಟಕ್ಕೆ ಹೊಡೆದುಕೊಂಡು ಮೇಯಿಸಿ ಗೋವುಗಳನ್ನು ಮನೆಗೆ ಹಿಂತಿರುಗಿಸಿ ದಿನನಿತ್ಯ ಕಾರ್ಯಗಳನ್ನು ಮುಗಿಸಿಕೊಂಡು ಬರುತ್ತಿದ್ದ. ಕೆಲವು ದಿನಗಳ ನಂತರ 'ಹಳ್ಳಿಕಾರ್'[೩] ಹಸುವೊಂದು ಅರಸನ ಮನೆ ಕರು ಹಾಕಿತು. ಆದರೆ ಮನೆಯಲ್ಲಿ ಹಾಲು ಕೊಡದೆ ಬೆಟ್ಟದ ತುದಿಯಲ್ಲಿ ಹುತ್ತದ ಮೇಲೆ ಹಾಲನ್ನು ಸುರಿಸುತ್ತಿತ್ತು. ಕೆಲವು ದಿನಗಳ ಕಾಲ ಇದೇ ರೀತಿ ನಡೆಯುತ್ತಿದ್ದು, ಇದನ್ನು ಮಲ್ಲಯ್ಯನು ಆಶ್ಚರ್ಯದಿಂದ ನೋಡಿ ಇದೊಂದು ಶಿವಲೀಲೆ ಎಂದೇ ನಂಬಿದ. ಸಂಜೆ ಮಲ್ಲಯ್ಯ ಹಸುಗಳನ್ನು ಅರಸನ ಮನೆಗೆ ಹೊಡೆದು ಕಟ್ಟಿಹಾಕಿ ಮನೆಗೆ ಬರುತ್ತಿದ್ದ. ಎಲ್ಲಾ ಹಸುಗಳು ಹಾಲು ಕೊಟ್ಟರೆ ಒಂದು ಹಸು ಅರಸನ ಮನೆಯಲ್ಲಿ ಹಾಲನ್ನು ಕೊಡುತ್ತಿರಲಿಲ್ಲ. ಇದರಿಂದ ಅರಸನು ಕೋಪಗೊಂಡು ಮಲ್ಲಯ್ಯನನ್ನು ಶಿಕ್ಷೆಗೆ ಒಳಪಡಿಸಿದ. ನಂತರ ಅರಸನೇ ಒಂದು ದಿನ ಗೋವಿನೊಂದಿಗೆ ಬೆಟ್ಟಕ್ಕೆ ತನ್ನ ಗಂಡು ಕೊಡಲಿಯೊಂದಿಗೆ ತೆರಳಿದ. ಆ ಸಮಯದಲ್ಲಿ ಹಸು ಹುತ್ತಕ್ಕೆ ಹಾಲನ್ನು ಸುರಿಸುತ್ತಿತ್ತು. ಇದನ್ನು ನೋಡಿದ ಅರಸ ಬೇಸರದಿಂದ ಹಸುವಿನ ಎದೆಗೆ ಗಂಡು ಕೊಡಲಿಯಿಂದ ಹೊಡೆದನು. ಹಸುವಿನ ರಕ್ತ ಹರಿದು ಅಲ್ಲಿಯೇ ಶಿವಲಿಂಗ ಉದಯವಾಯಿತೆಂದು ಜನತೆಯ ನಂಬಿಕೆಯಾಗಿದೆ. ಇದರಿಂದ ಅರಸ ತನ್ನ ಸೇವಕನ ಭಕ್ತಿಯನ್ನು ಗೌರವಿಸಿ ಅವನಿಗೆ ಉನ್ನತ ಸ್ಥಾನ ನೀಡಿದನೆಂದು ಹೇಳುವರು. ಸೇವಕನ ಗೌರವಾರ್ಥವಾಗಿ ದೊಡ್ಡ ಬೆಟ್ಟಕ್ಕೆ ಮಲ್ಲಯ್ಯನ ಬೆಟ್ಟವೆಂದು ಹೆಸರು ಬಂದಿತೆಂದು ಐತಿಹ್ಯವಿದೆ. ಇದಕ್ಕೆ ಅನುಗುಣವಾಗಿ ಇಂದಿಗೂ ತುಂಗದ

ಸ್ಥಳದಲ್ಲಿ ಅರಸರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವರು. ಬಹುತೇಕ ಅರಸರು ಇಂದು ವಲಸೆ ಹೋಗಿರುವರು.

"ಬೆಟ್ಟವು ಪಂಚಾಮುಖಿಕಾರ ಹೊಂದಿದ್ದು. ದಕ್ಷಿಣದ ದಿಕ್ಕಿನಿಂದ ಲಿಂಗಕಾರವಾಗಿ, ಪೂರ್ವ ದಿಕ್ಕಿನಿಂದ ಬಸವ ಮಲಗಿರುವ ರೀತಿಯಲ್ಲಿಯೂ, ಪಶ್ಚಿಮ ದಿಕ್ಕಿನಿಂದ ನಾಗರ ಹಾವಿನಂತೆ ಕಾಣುವುದು. ಮತ್ತು ಉತ್ತರದಲ್ಲಿ ಶಿವ ಜಡೆಯಾಕಾರದ ಶೈಲಿಯಲ್ಲಿದ್ದು, ಹಾಗೆ ಶಂಖಾಕೃತಿಯಲ್ಲಿಯೂ"" ಕಂಡುಬರುವುದು. ದೇವಾಲಯದ ಪುರೋಹಿತ ಕಾರ್ಯವನ್ನು ಬ್ರಾಹ್ಮಣ ಕುಲದವರು ನಿರ್ವಹಿಸಿಕೊಂಡು ಅಂದಿನಿಂದ ಇಂದಿಗೂ ಬರುತ್ತಿರುವರು.

ಪ್ರತಿವರ್ಷ ಫೆಬ್ರುವರಿ ತಿಂಗಳಿನಲ್ಲಿ ಮಲ್ಲಿಕಾರ್ಜುನ ಜಾತ್ರೆ ಅಥವಾ ಗಿರಿಜಾ ಕಲ್ಯಾಣ ಉತ್ಸವ ಜರುಗುವುದೆಂದು ಜನಪದ ಶಿವಪುರಾಣದ ಐತಿಹ್ಯವಿದೆ. ಇದರ ಪ್ರಕಾರ ಶಿವನಿಗೂ ಮತ್ತು ಗಿರಿಜೆಗೂ ಕಲ್ಯಾಣ ನಡೆಯುವುದೆಂಬ ನಂಬಿಕೆ ಸ್ಥಳೀಯ ಜನತೆಯಲ್ಲಿರುವುದು. ಗಿರಿಜೆ ಕಲ್ಯಾಣದ ನಂತರ ಸ್ಥಳೀಯ ಜನತೆ ಅಥವಾ ತಾಲ್ಲೂಕಿನ ಜನತೆ ಕನ್ಯೆಗೆ ವರನನ್ನು ಹುಡುಕುವ ಕಾರ್ಯದಲ್ಲಿ ನಿರತರಾಗುವರು. ಜಾತ್ರೆ ಹಿಂದಿನ ಕಾಲದಲ್ಲಿ ಬೆಟ್ಟದ ಮಧ್ಯದಲ್ಲಿರುವ ಸಂಕ್ರಾಂತಿ ಮೊಳದಲ್ಲಿ ನಡೆಯುತ್ತಿತ್ತು. ಸ್ಥಳೀಯ ಪ್ರಮುಖ ಹಬ್ಬಗಳೆಂದರೆ ಮಲ್ಲಿಕಾರ್ಜುನ ಜಾತ್ರೆ, ಸಂಕ್ರಾಂತಿ ಹಬ್ಬ ಹಾಗೂ ದೀಪಾವಳಿಯನ್ನು ಎಲ್ಲಾ ಜನರು ಸೇರಿ ಉತ್ಸಾಹದಿಂದ ಆಚರಿಸುವರು. ಈ ಅವಧಿಯಲ್ಲಿ ಒಂದು ವಾರಗಳ ಕಾಲ ಧನಗಳ ಜಾತ್ರೆ ನಡೆಯುವುದು. ಸ್ಥಳೀಯ ಧನಗಳನ್ನು ಹಳ್ಳಿಕಾರ್ ಅಥವಾ ಸೀಮೆ ಧನಗಳೆಂದು ಕರೆಯುವರು.

ದೇವಾಲಯಗಳ ನಿರ್ಮಾಣ ಚೋಳ ಮನೆತನದ ಕಾಲಾವಧಿಯಲ್ಲಿ ರಚನೆಗೊಂಡಿವೆ. ಚೋಳ ಅಂದರೆ ಗಟ್ಟಿಯುಳ್ಳವರು ಹಾಗೂ ಶಕ್ತಿಶಾಲಿಯ ಜನತೆ ಎಂದು ಇದಕ್ಕೆ ಅನುಗುಣವಾಗಿ ದೊಡ್ಡ ದೊಡ್ಡ ಬಂಡೆಗಳನ್ನು ಹೊಡೆದು ದೇವಾಲಯಗಳನ್ನು ನಿರ್ಮಿಸಿರುವರು ಎಂಬ ಭಾವನೆ ಸ್ಥಳೀಯ ಜನತೆಯಲ್ಲಿದೆ. ಬೆಟ್ಟದಪುರಕ್ಕೆ ರಾಮಾಯಣ ಕಾಲದಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆ, ರಾವಣ ಮತ್ತು ಹನುಮಂತನು ಬಂದಿದ್ದರೆಂದು ಹೇಳುವರು. ಉದಾಹರಣೆ ಬೆಟ್ಟದ ತಳದಲ್ಲಿ ಹನುಮಂತ ದೇವಾಲಯವಿದೆ. ಇದಕ್ಕೆ ಅನುಗುಣವಾಗಿ ಬೆಟ್ಟದಪುರವು ರಾಮನಾಥಪುರ ಮತ್ತು ಕೃಷ್ಣರಾಜನಗರದಲ್ಲಿ ಶ್ರೀರಾಮ ದೇವಾಲಯವಿರುವುದಾಗಿ ಜನತೆ ಮತ್ತು ಇತಿಹಾಸದಿಂದ ಕಂಡುಬಂದಿದೆ.

ಋಷಿ ಮುನಿಗಳು ತಪಸ್ಸನ್ನು ಆಚಾರಿಸಿದರೆಂದು ದಾಖಲೆ ಮತ್ತು ಮೌಖಿಕ ಕಥೆ ಇದೆ. ಅಂದು ಋಷಿ ಮುನಿಗಳು ಉನ್ನತ ಗೌರವ ಸ್ಥಾನ ಹಾಗೂ ಧಾರ್ಮಿಕ, ಆಧ್ಯಾತ್ಮಿಕ ಗುರುಗಳಾಗಿದ್ದರು. ಭಕ್ತರು ಋಷಿಗಳಿಗೆ ಗುಹೆಗಳನ್ನು ಮತ್ತು ಮಠಗಳನ್ನು ಕಟ್ಟಿಸಿಕೊಟ್ಟಿದ್ದರು. ಇದಕ್ಕೆ ಉದಾಹರಣೆಯಾಗಿ

ಕಂಕಲಾದೇವನು ಬೆಟ್ಟದ ಉತ್ತರ ದಿಕ್ಕಿಗೆ ವೀರಭದ್ರ ಗುಹದೇವಲಾಯದ ಸಮೀಪದಲ್ಲಿ ಒಂದು ಗುಹೆಯನ್ನು ನಿರ್ಮಿಸಿ ದಾನ ನೀಡಿರುವುದಾಗಿದೆ. ಬೆಟ್ಟಕ್ಕೆ ಯಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿ ಭೇಟಿ ನೀಡಿದ್ದು, ಇದೇ ಸಮಯದಲ್ಲಿ ತಪಸ್ಸನ್ನು ಆಚರಿಸಿ ನಂತರ ಯಡಿಯೂರಿಗೆ ಪ್ರಯಾಣ ಬೆಳೆಸಿರುವರು. ಅಂದು ಸಿದ್ಧಲಿಂಗೇಶ್ವರ ಸ್ವಾಮಿ ತಪ್ಪಸ್ಸು ಮಾಡಿದ ಸ್ಥಳವೇ ಇಂದು ಬೆಟ್ಟದಪುರ ಮಠವೆಂದು ಹೆಸರನ್ನು ಹೊಂದಿದೆ. ಇದರ ಗರ್ಭಗೃಹದಲ್ಲಿ ಯಡಿಯೂರ ಸಿದ್ಧಲಿಂಗೇಶ್ವರ ಸ್ವಾಮಿಯ ಮೂರ್ತಿಯಿದ್ದು ಬೆಟ್ಟಕ್ಕೆ ಉತ್ತರ ದಿಕ್ಕಿನಲ್ಲಿ ಎರಡು ಕಿ.ಮೀ.ಗಳ ಅಂತರದಲ್ಲಿದೆ.

ಪ್ರತಿವರ್ಷ ಮಾರ್ಚ್ ತಿಂಗಳಿನಲ್ಲಿ ದೀಪಾವಳಿಯ ದಿನದಂದು ದೀವಟಿಗೆ ಸೇವೆ ನಡೆಯುವುದು. ಈ ಸೇವೆಯನ್ನು ಮಲ್ಲಿಕಾರ್ಜುನ ದೇವರಲ್ಲಿ ಹರಕೆ ಹೊತ್ತ ಮತ್ತು ಹರಕೆಯನ್ನು ಮಾಡಿಕೊಳ್ಳದವರು ಸಹ ಭಾಗವಹಿಸುವರು. ಅಂದು ಸಿಡ್ಲು ಮಲ್ಲಿಕಾರ್ಜುನ, ಭ್ರಮರಾಂಭ ಮತ್ತು ಬೆಳ್ಳಿ ಬಸವನ ಉತ್ಸವ ಮೂರ್ತಿಗಳನ್ನು ಹೊತ್ತು ಬೆಟ್ಟದ ಸುತ್ತ ಹನ್ನೆರಡ ಕಿ.ಮೀ. ಪ್ರದಕ್ಷಣೆ ಹಾಕುತ್ತಾರೆ. ದೀವಟಿಗೆ ಬೆಟ್ಟದಪುರದಲ್ಲಿ ರಾತ್ರಿ ಹನ್ನೊಂದು ಗಂಟೆಗೆ ಪ್ರಾರಂಭವಾಗಿ ಬೆಟ್ಟದ ಸುತ್ತಲಿರುವ ಗ್ರಾಮಗಳಾದ ಬೆಟ್ಟದತುಂಗ, ಕುಡುಕೂರು, ಕೊಪ್ಪಲುಗಳಿಂದ ಮುಂಜಾನೆ ಐದು ಗಂಟೆಗೆ ದೇವಾಲಯಕ್ಕೆ ಬಂದು ಸೇರುವರು. ಬೆಟ್ಟದ ವಿಶೇಷತೆ ಎಂದರೆ ಬೆಟ್ಟದ ಮೇಲೆ ನಿಂತುಕೊಂಡು ನೋಡಿದರೆ ಮೈಸೂರಿನ ಚಾಮುಂಡಿ ಬೆಟ್ಟದ ಗೋಪುರ ಹಾಗೂ ಕೃಷ್ಣರಾಜಸಾಗರದ ಅಣೆಕಟ್ಟು ಕಾಣುವುದೆಂದು ಅಭಿಪ್ರಾಯವಿದೆ. ಮತ್ತು ನವ ದಂಪತಿಗಳು ಬೆಟ್ಟಕ್ಕೆ ಹತ್ತುವುದು ವಿಶೇಷವಾಗಿದೆ.

ಸ್ಥಳೀಯ ದೇವಾಲಯ ಮತ್ತು ಬಸದಿಗಳು ಹೆಚ್ಚು ಕಲಾತ್ಮಕವಾದ ಕೆತ್ತನೆಯಿಂದ ಕೂಡಿರುವುದಿಲ್ಲ. ಸ್ಥಳೀಯ ದೇವಾಲಯಗಳ ಶಿಲ್ಪಗಳನ್ನು ಅಧ್ಯಯನ ಮಾಡಿದ್ದಲ್ಲಿ ಮುಸ್ಲಿಂ ವ್ಯಕ್ತಿಯು ಕುದುರೆಗಳನ್ನು ಹಿಂದೂ ಅರಸನಿಗೆ ವ್ಯಾಪಾರ ಮಾಡುತ್ತಿರುವ ಮತ್ತೀತರ ದೃಶ್ಯದ ಕೆತ್ತನೆ ಇದೆ. ಇದರಿಂದ ಹಿಂದೂ ಮುಸ್ಲಿಂ ಧರ್ಮದವರು ಅನ್ಯೂನತೆಯಿಂದ ಇದ್ದರೆಂದು ಕಂಡುಬರುತ್ತದೆ. ಇವುಗಳಲ್ಲದೇ ಜಾನಪದೀಯವಾಗಿ ಕೋಲಾಟ, ವೀರಭದ್ರನ ಕುಣಿತ, ಲಾವಣಿಯಲ್ಲಿ ಸ್ಥಳೀಯ ಸಾಂಸ್ಕೃತಿಕ ಅಂಶಗಳಿರುವುದು. ಬೆಟ್ಟದ ಹೆಬ್ಬಾಗಿಲಾದ ರಾಯಗೋಪುರದಲ್ಲಿ ಒಂದು ದೊಡ್ಡ ಕೊಳವಿದ್ದು, ಇದನ್ನು ಸೂಳೆಯೊಬ್ಬಳು ನಿರ್ಮಿಸಿದಳೆಂದು ಐತಿಹ್ಯವಿದೆ.

ಜನಪದ ಇತಿಹಾಸದ ಸ್ವರೂಪ ಮತ್ತು ಅಧ್ಯಯನದ ವಿಧಾನ ಭಿನ್ನವಾಗಿರುತ್ತದೆ ಎಂದು ಡಾರ್ಸನ್ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ ಬೆಟ್ಟದಪುರ ಮೌಖಿಕ ಚರಿತ್ರೆಯನ್ನು ಕಟ್ಟಲು ಹಲವು ಐತಿಹ್ಯ, ಕಥೆ, ಪುರಾಣಗಳಿದ್ದು, ಅವುಗಳಲ್ಲಿ ಕೆಲವನ್ನು ವಿಶ್ಲೇಷಣೆಗೆ ಒಳಪಡಿಸಿಕೊಂಡು ಮೌಖಿಕ ಚರಿತ್ರೆಯನ್ನು ಕಟ್ಟಲಾಗಿದೆ.

ಅಡಿಟಿಪ್ಪಣಿಗಳು

೧. ಈ ಮಾಹಿತಿಯನ್ನು ನೀಡಿದವರು, ರವೀಂದ್ರಕುಮಾರ್ ಜೈನ್, ಕೋಣಸೂರು.

೨. ಈ ಮಾಹಿತಿಯನ್ನು ಒದಗಿಸಿದವರು, ಅನಂತರಾಮಯ್ಯ, ಬೆಟ್ಟದಪುರ.

೩. ಈ ವಿಷಯವನ್ನು ತಿಳಿಸಿದವರು, ಚಿಕ್ಕದೇವರಾಜ ಅರಸು, ಬೆಟ್ಟದತುಂಗ.

೪. ಈ ಮಾಹಿತಿಯನ್ನು ಒದಗಿಸಿದವರು, ಮಂಜುನಾಥ.ಬಿ.ವಿ. ಬೆಟ್ಟದಪುರ.

ಅಧ್ಯಾಯ : ನಾಲ್ಕು

ಶಾಸನಗಳು

ಅಧ್ಯಾಯ : ನಾಲ್ಕು

ಶಾಸನಗಳು

ಪ್ರಾಚೀನ ಭಾರತದ ಚರಿತ್ರೆಗೆ ಮೂಲತಳಪಾಯವೆಂದರೆ ಶಾಸನಗಳು. ಶಾಸನ ಎಂಬ ಪದದ ಧಾತುವಾದ 'ಶಾಸ್' ಎಂಬುವುದಕ್ಕೆ ಆಜ್ಞೆ ಮಾಡು, ಶಿಕ್ಷಿಸು, ನಿಯಂತ್ರಿಸು ಎಂದು ಹೇಳಬಹುದು. ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಬಗ್ಗೆ ತಿಳಿಸುವ ಗ್ರಂಥಗಳಾದ ಶುಕ್ರ ನೀತಿಸಾರ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಗ್ರಂಥಗಳು ಶಾಸನ ಎಂಬ ಪದವನ್ನು ರಾಜಾಜ್ಞೆ[೧] ಎಂಬ ಅರ್ಥದಲ್ಲಿ ಪ್ರಯೋಗ ಮಾಡಿರುವರು. ಶಾಸನ ಎಂಬುವುದು ಮೂಲತಃ ದಾನ ಸಂಬಂಧವಾದ ರಾಜಾಜ್ಞೆಯಾಗಿರುವುದಾಗಿದೆ.[೨]

ಇತಿಹಾಸ ರಚನೆಗೆ ಶಾಸನಗಳು ಅಮೂಲ್ಯವಾಗಿವೆ. ಸಾವಿರಾರು ಶಾಸನಗಳು ಅನೇಕ ಭಾಷೆಯಲ್ಲಿ ದೊರೆತಿದ್ದು, ಹಿಂದಿನ ಕಾಲದ ಪ್ರಮುಖ ಘಟನೆ, ಕಾರ್ಯ, ಕಾನೂನು, ದಾನ–ದತ್ತಿ, ವಂಶಾವಳಿಯ ಬಗ್ಗೆ ಮಾಹಿತಿ ನೀಡುತ್ತವೆ. ಶಾಸನಗಳು ರಾಜನ ಆಡಳಿತಾತ್ಮಕ ಮತ್ತು ರಾಜ್ಯದ ವ್ಯಾಪ್ತಿಯನ್ನು ತಿಳಿಸುತ್ತವೆ. ದೊರೆಕಿರುವ ಶಾಸನಗಳಲ್ಲಿ ಅಶೋಕನ ಶಾಸನಗಳೇ ಭಾರತದಲ್ಲಿ ಪ್ರಾಚೀನವಾದವುಗಳಾಗಿದ್ದು ಧಾರ್ಮಿಕ, ರಾಜಕೀಯ ಅಂಶಗಳ ಬಗ್ಗೆ ಮಾಹಿತಿ ನೀಡುತ್ತವೆ. ಒಟ್ಟಾರೆ ದೊರೆಕಿರುವ ಶಾಸನಗಳನ್ನು ಸಮರ್ಪಕವಾಗಿ ಅರ್ಥೈಸುವಲ್ಲಿ ನಮ್ಮ ಇತಿಹಾಸ ತಜ್ಞರು ಸಫಲವಾಗಿಲ್ಲವೆಂದು ಹೇಳಬಹುದು. ಒಂದು ವೇಳೆ ಸಮರ್ಪಕವಾಗಿ ಅರ್ಥೈಸಿದಲ್ಲಿ ಇನ್ನೂ ಹೊಸ ವಿಚಾರಗಳು ಬೆಳಕಿಗೆ ಬರಬಹುದು.

ಪ್ರಸ್ತುತ ಅಧ್ಯಯನವು ಬೆಟ್ಟದಪುರ ಪರಿಸರದ ಅಧ್ಯಯನವಾದ್ದರಿಂದ ಬೆಟ್ಟದಪುರದಲ್ಲಿ ದೊರೆಯುವ ಶಾಸನಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಇಲ್ಲಿಯ ಬಹುತೇಕ ಶಾಸನಗಳನ್ನು ಶಿಲೆ ಮತ್ತು ಕಂಚಿನ ಫಲಕದ ಮೇಲೆ ಕೊರೆಯಲಾಗಿದ್ದು ಇವುಗಳ ಭಾಷೆ ಕನ್ನಡ ಆಗಿದೆ. ಇಲ್ಲಿ ಆಳ್ವಿಕೆಯನ್ನು ಮಾಡಿದ ಚಂಗಾಳ್ವರು, ಗಂಗರು, ಚಾಲುಕ್ಯರು ಮತ್ತು ವಿಜಯನಗರ ಸಾಮ್ರಾಜ್ಯದ ಅಧಿಕಾರಿಗಳು, ನಂತರ ಮೈಸೂರು ಒಡೆಯರು ಆಳ್ವಿಕೆಯನ್ನು ಮಾಡಿ ಶಾಸನಗಳನ್ನು ಹೊರಡಿಸಿರುವರು. ಅಲ್ಲದೇ ಅನ್ನದಾನಿ ಮಲ್ಲಿಕಾರ್ಜುನ ದೇವರ ಭಕ್ತಾಧಿಗಳು ದಾನಗಳನ್ನು ನೀಡುವುದರ ಮೂಲಕ ಶಾಸನ ಕೆತ್ತಿಸಿದ್ದಾರೆ. ದೇವಲಾಯ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಕೆರೆ, ಬಾವಿಯನ್ನು ನಿರ್ಮಿಸಿರುವರು. ಗ್ರಾಮದಲ್ಲಿ ಕಂಡುಬರುವ ಬೆಟ್ಟ ಹಾಗೂ ನಿಸರ್ಗನಿರ್ಮಿತ ಗುಹೆಗಳು ಪ್ರಾಚೀನ ಮಾನವನ ವಾಸಸ್ಥಾನಗಳಾಗಿದ್ದವು ಎಂದು ಕಂಡುಬಂದಿದೆ.

ಬೆಟ್ಟದಪುರದಲ್ಲಿ ಹೆಚ್ಚಿನ ಶಾಸನಗಳನ್ನು ಹೊಂದಿರುವ ದೇವಾಲಯವೆಂದರೆ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ. ಈ ದೇವಾಲಯವನ್ನು ಬಿಟ್ಟರೆ, ಉಳಿದ ಕಡೆ ಚದುರಿದಂತೆ ಗ್ರಾಮದಲ್ಲಿ ಒಟ್ಟು ಇಪ್ಪತ್ತೊಂಬತ್ತು ಶಾಸನಗಳು ಕಂಡುಬಂದಿದ್ದು ಎಲ್ಲಾ ಶಾಸನಗಳು ಕನ್ನಡ ಭಾಷೆಯಲ್ಲಿಯೇ ಬರೆಯಲ್ಪಟ್ಟಿವೆ. ಈ ಹಿನ್ನಲೆಯಲ್ಲಿ ಬೆಟ್ಟದಪುರದ ಶಾಸನಗಳನ್ನು ಗಮನಿಸಿದಾಗ ಧಾರ್ಮಿಕ ವಿವರಗಳನ್ನು ತಿಳಿಸುವ ಶಾಸನಗಳು ಹೆಚ್ಚಾಗಿ ದೊರೆತಿರುವವು. ದೊರಕಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ ಕ್ರಿ.ಶ. ೧೫೦೮ರ ಶಾಸನ. ಕ್ರಿ.ಶ. ೧೮೬೮ರಲ್ಲಿ ರಚಿತವಾದ ಶಾಸನವೇ ಅಂತಿಮ ಶಾಸನವಾಗಿದೆ. ದೊರೆಕಿರುವ ಶಾಸನಗಳಲ್ಲಿ ಅತ್ಯಂತ ದೊಡ್ಡ ಶಾಸನವೆಂದರೆ ೧೫೨೯ರಲ್ಲಿ ಕೆತ್ತಲ್ಪಟ್ಟ ಶಾಸನವಾಗಿದೆ. ಶಾಸನಗಳಲ್ಲಿ ಬರುವ ವಿಷಯಗಳನ್ನು ದೇವತಾಸ್ತುತಿ, ಸ್ಥಳ ಪರಿಸರ, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ದಾನ-ದತ್ತಿಗಳೆಂಬ ವಿಭಾಗಗಳಿಗೆ ವಿಂಗಡಿಸಬಹುದು.

ದೇವತಾಸ್ತುತಿ

ಕ್ರಿ.ಶ. ೧೫೨೯ರ ಶಾಸನದಲ್ಲಿ ಮೊದಲಿಗೆ ಶುಭಮಸ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ! ತ್ರೈಲೋಕ್ಯನಗರರಾಂಭಾ ಮೂಲಸ್ತಂಭಾಯ ಶಂಭವೇ ಎಂದು ಆರಂಭವಾಗುತ್ತದೆ.[೨] ಇದೇ ರೀತಿಯಲ್ಲಿ ಕ್ರಿ.ಶ. ೧೫೦೮ರ ಶಾಸನದಲ್ಲಿ ಸ್ವಸ್ತಿ ಉತ್ತುಂಗವಾದ ಶಿರಸ್ಸನ್ನು ಚುಂಬಿಸುತ್ತಿರುವ ಚಂದ್ರನನ್ನೇ ಚಾಮರವನ್ನಾಗಿರಿಸಿಕೊಂಡಿರುವನು. ಮೂರು ಲೋಕಗಳಿಗೂ ಆಧಾರಸ್ತಂಭವಾಗಿರುವ ಶಂಭುವಿಗೆ ನಮಸ್ಕಾರಗಳು ಎಂದು ದೇವರನ್ನು ಸ್ತುತಿಸುತ್ತ[೩] ಮುಂದಿನ ಸಾಲು ಪ್ರಾರಂಭವಾಗುತ್ತದೆ.

ಸ್ಥಳ ಪರಿಸರದ ಹೆಸರು

ಶಾಸನಗಳಲ್ಲಿ ಊರು ಮತ್ತು ಸುತ್ತಮುತ್ತಲಿನ ಪ್ರದೇಶದ ವರ್ಣನೆ ಸಾಮಾನ್ಯವಾಗಿರುತ್ತದೆ. ಒಂದು ಗ್ರಾಮದ ಹೆಸರನ್ನು ಪರಿಶೀಲಿಸಿದರೆ ಸುತ್ತಮುತ್ತಲಿನ ನಿಸರ್ಗ, ಪೌರಾಣಿಕ ಹಿನ್ನಲೆ, ಐತಿಹಾಸಿಕತೆ, ಪ್ರಮುಖ ದೇವತೆ ಮೊದಲಾದವು ಗ್ರಾಮ ನಾಮವಾಗಲು ಕಾರಣಗಳಾಗಿರುತ್ತವೆ. ಹದಿನಾಲ್ಕನೆಯ ಶತಮಾನದಲ್ಲಿ ದೊರಕಿರುವ ಕುಡುಕೂರಿನ ಶಾಸನದಲ್ಲಿ ಕುಡುಕೂರು[೪] ಎಂಬ ಹೆಸರು ಇತ್ತೆಂದು ಕಂಡುಬಂದಿದೆ. ಅಂದರೆ ಕುಂಟಕ=ಕೊಟ್ಟಿಗೆ, ಊರು, ಕುಟಂಕೂರು, ನಂತರ 'ಟ'ಕಾರಕ್ಕೆ ಡಕಾರ ಆದೇಶವಾಗಿ ಅನುಸ್ವಾರ ಲೋಪವಾಗಿ ಕುಡುಕೂರು ಆಗಿದೆ ಎಂದು ಡಾ.ಪಿ.ಕೆ.ರಾಜಶೇಖರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಗ್ರಾಮವು ಚಂಗಾಳ್ವರ ಗೋಶಾಲೆಯಾಗಿದ್ದು ಕುಟಿಕಪುರ ಎಂಬ ಹೆಸರಿನಲ್ಲಿರುವುದರ ಜೊತೆಗೆ ಇದೇ ಶಾಸನದಲ್ಲಿ ಚಿಕ್ಕಾಪುರ ಎಂದು ಹೆಸರು ಕರೆದಿರುವುದು ಕಂಡುಬಂದಿದೆ.

ಕ್ರಿ.ಶ. ೧೫೦೮ರ ಶಾಸನದಲ್ಲಿ ಶ್ರೀಗಿರಿ ಎಂದು ಈ ಪ್ರದೇಶಕ್ಕೆ ಹೆಸರಿಸಲಾಗಿದೆ. ಶ್ರೀ=ಸಿರಿ, ಸಂಪತ್ತು, ಗಿರಿ=ಬೆಟ್ಟ, ಪರ್ವತ, ಅಂದರೆ ಸಂಪತ್ತನ್ನು ಒಳಗೊಂಡಿರುವ ಬೆಟ್ಟವಾಗಿದ್ದು ಪವಿತ್ರವಾದ ಸ್ಥಳವೇ ಶ್ರೀಗಿರಿ[೬] ಎಂದಾಗುತ್ತದೆ. ಶ್ರೀಗಿರಿಯಲ್ಲಿ ಕ್ರಿ.ಶ. ೧೫೦೮ರ ವೇಳೆಗೆ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿ ಪ್ರಸಿದ್ಧವಾದ ದೇವರಾಗಿದ್ದರಿಂದ ಈ ಬೆಟ್ಟವನ್ನು ಶ್ರೀಗಿರಿ ಎಂದು ಕರೆಯಲಾಗಿದೆ. ಹಾಗಾಗಿ ಶ್ರೀಗಿರಿ ಬೆಟ್ಟ ಧಾರ್ಮಿಕತೆಗೆ ಹೆಸರಾಗಿದ್ದು, ಪ್ರಸ್ತುತ ಗ್ರಾಮಕ್ಕೆ ಹದಿನೇಳನೆಯ ಶತಮಾನದಿಂದಲೂ ಬೆಟ್ಟದಪುರವೆಂದು ಕರೆದಿರುವುದು ಕಂಡುಬಂದಿದೆ. ನೈಸರ್ಗಿಕವಾಗಿ ದೊಡ್ಡದಾದ ಬೆಟ್ಟಗಳಿಂದ ಕೂಡಿದ್ದು, ಕೋಟೆಯನ್ನೊಳಗೊಂಡ ಪಟ್ಟಣವಾಗಿದ್ದರಿಂದ ಬೆಟ್ಟದಪುರವೆಂದು[೭] ಕರೆದಿರುವುದು ಸಮಂಜಸವಾಗಿರುವುದಾಗಿದೆ. ಮತ್ತು ೧೭೪೯ರ ಶಾಸನದಲ್ಲಿಯು ಬೆಟ್ಟದಪುರ[೮] ಎಂಬ ನಾಮ ಉಲ್ಲೇಖಿತವಾಗಿರುವುದು. ಅನ್ನದಾನಿ ಮಲ್ಲಿಕಾರ್ಜುನ ಗರ್ಭಗೃಹಕ್ಕೆ ಸಿಡಿಲು ಹೊಡೆದಿರುವುದರಿಂದ ಹದಿನೆಂಟನೆಯ ಶತಮಾನದಲ್ಲಿ ಸಿಡ್ಲುಮಲ್ಲಿಕಾರ್ಜುನ[೯] ಎಂದು ಹೆಸರಿಸಿರುವರು. ಇದರಿಂದ ಈ ಬೆಟ್ಟವನ್ನು ಸಿಡ್ಲು ಮಲ್ಲಿಕಾರ್ಜುನ ಬೆಟ್ಟವೆಂದು ಇಂದಿಗೂ ಕರೆಯುವರು. ಇದೇ ಗ್ರಾಮಕ್ಕೆ ಕ್ರಿ.ಶ. ೧೫೨೯ರ ಶಾಸನದಲ್ಲಿ ಶ್ರೀಶೈಲವೆಂಬ ಹೆಸರು ಉಲ್ಲೇಖವಿದೆ.

ರಾಜಕೀಯ:

ಚೋಳರ ಮಾಂಡಲಿಕರಾದ ಚಂಗಾಳ್ವರು, ಗಂಗರು, ವಿಜಯನಗರ ಅರಸರುಗಳು, ಮೈಸೂರಿನ ಒಡೆಯರು ಮತ್ತು ಚಾಲುಕ್ಯರ ಆಳ್ವಿಕೆಗೆ ಈ ಗ್ರಾಮ ಒಳಪಟ್ಟಿತ್ತು. ಚಂಗಾಳ್ವ ಅರಸರುಗಳು ಈ ಪ್ರದೇಶವನ್ನು ತಮ್ಮ ರಾಜಕೀಯ ಮತ್ತು ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿ ಹಲವು ಶಾಸನಗಳನ್ನು ಚಂಗಾಳ್ವ ಅರಸರು ಮತ್ತು ಇತರೆ ಅರಸರುಗಳು ಹೊರಡಿಸಿರುವರು. ಇಂತಹ ಶಾಸನಗಳಲ್ಲಿ ಬೆಟ್ಟದಪುರ ರಾಜಕೀಯ ದೃಷ್ಟಿಯನ್ನು ಗಮನಿಸಿದಾಗ ವಿಶೇಷವಾದ ಮಾಹಿತಿ ದೊರೆಯುವುದಿಲ್ಲ. ಕ್ರಿ.ಶ.ಹತ್ತನೆಯ ಶತಮಾನದಲ್ಲಿ ವಿಕ್ರಮರಾಯ ಮತ್ತು ಚಂಗಾಳ್ವರಾಯನ ಕಾಲದಲ್ಲಿ ರಾಜಧಾನಿಯಾಗಿತ್ತು. ಈ ಕಾಲದ ಶಾಸನಗಳು ಸಹ ರಾಜಕೀಯ ವಿಚಾರಗಳನ್ನು ತಿಳಿಸಿರುವುದಿಲ್ಲವೆಂದೆ ಹೇಳಬಹುದಾಗಿದೆ. ಹಾಗೆಂದಾಗ ರಾಜಕೀಯ ವಿವರ ನೀಡುವ ಶಾಸನಗಳು ಸಿಗಲೇ ಇಲ್ಲವೆಂದಲ್ಲ. ಕ್ರಿ.ಶ. ೯೧೯ರಲ್ಲಿ ಚಾಲುಕ್ಯಪರ್ಮಾನಂದಿ ದೇವನ ಮಗಳಾದ ಪಂಪಾದೇವಿಯು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದಳೆಂದು ಕುಡುಕೂರಿನ ವೀರಗಲ್ಲು[೧೦] ಶಾಸನದಿಂದ ತಿಳಿದುಬಂದಿದೆ.

ಸಾಮಾಜಿಕ:

ಪ್ರಾಚೀನ ಕಾಲದ ಸಾಮಾಜಿಕ ಚಿತ್ರಣವನ್ನು ಅರಿಯಲು ಶಾಸನಗಳು ಮೂಲ ಆಧಾರಗಳಾಗಿವೆ. ಪಟ್ಟಣಗಳಲ್ಲಿ ಅರಸರು, ಬ್ರಾಹ್ಮಣರು, ಸೇನಾಪತಿ, ಕುಶಲಕರ್ಮಿಗಳು, ಕೃಷಿಕರು,

ವ್ಯಾಪಾರಸ್ಥರು, ಮೊದಲಾದವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರೆಂದು ಕಂಡುಬಂದಿದೆ. ಧಾರ್ಮಿಕ ಆಚರಣೆ, ಪುಣ್ಯಕಾಲ, ಅಮವಾಸೆಯೆಂದು ಅರಸರುಗಳು, ಭಕ್ತಾಧಿಗಳು ಸಾರ್ವಜನಿಕ ಕಾರ್ಯಗಳನ್ನು ಮಾಡಿರುವ ವಿಷಯಗಳು ಅಂದಿನ ಶಾಸನಗಳಲ್ಲಿ ಉಲ್ಲೇಖವಿದೆ. ಇದರಿಂದ ತಿಳಿದು ಬರುವ ಪ್ರಮುಖ ಅಂಶವೆಂದರೆ, ಇಲ್ಲಿಯೂ ಸಹ ಸಾಮಾಜಿಕ ಬದಲಾವಣೆಗಳಾಗುತ್ತ ಬಂದಿರುವುದು ಕಂಡುಬಂದಿದೆ. ಇದಕ್ಕೆ ಧರ್ಮವು ಕೂಡ ಪ್ರೇರಣೆ ನೀಡಿದೆ ಎಂದರೆ ತಪ್ಪಾಗಲಾರದು. ಅರಸರು, ಭಕ್ತಾಧಿಗಳು ದೇವಾಲಯ, ಮಠ, ಕೆರೆ, ಬಾವಿ, ತೋಟಗಳನ್ನು ನಿರ್ಮಿಸಿ ಅವುಗಳಿಗೆ ದಾನದತ್ತಿಗಳನ್ನು ಬಿಡುವ ಮೂಲಕ ತಮ್ಮ ಔದಾರ್ಯಗಳನ್ನು ಮೆರೆದಿದ್ದಾರೆ. ಇದರಿಂದ ಕೆರೆ–ಬಾವಿಗಳ ಮೂಲಕ ನಾಡಿನ ಸಾಮಾಜಿಕ, ಆರ್ಥಿಕ ಪ್ರಗತಿಯುಂಟಾಗಿದೆ. ಹದಿನಾರನೇ ಶತಮಾನದಲ್ಲಿ ಈಶ್ವರ ಸಂವತ್ಸರದಂದು ...ಒಡೆಯರು, ಕುಡುಕೂರಿನ ಮಲ್ಲಿಕಾರ್ಜುನ ದೇವರಿಗೆ ಮತ್ತು ಚಿಕ್ಕಪುರದಲ್ಲಿರುವ ಸಿಂಗಾರದ ತೋಟದ ನಿರ್ವಹಣೆಗಾಗಿ ಒಂದು ಕೆರೆಯನ್ನು[೧೧] ಮತ್ತು ತೋಟವು ಒಣಗಿ ಹೋಗಬಾರದೆಂದು ಇಪ್ಪತ್ತು ಗದ್ಯಣದಷ್ಟು ಹೊನ್ನುಗಳನ್ನು ಖರ್ಚು ಮಾಡಿ ಕೆರೆಯನ್ನು ನಿರ್ಮಿಸಿದ್ದಾರೆ. ಇದಕ್ಕಾಗಿ ನಾಲ್ಕು ಖಂಡುಗದಷ್ಟು ಒಣ ಭೂಮಿಯನ್ನು ಅಂಕಪ, ಕವನ, ಮಲ್ಲಪ್ಪ, ದೇವಣ್ಣ, ಚೆನ್ನಮಲ್ಲಪ್ಪ ಮತ್ತು ಕಲ್ಲಪ್ಪರಿಂದ ಖರೀದಿಸಿದ್ದಾರೆ. ಹಾಗೂ ಮಲ್ಲಿಕಾರ್ಜುನ ದೇವಾಲಯದ ಆಸ್ಥಾನಿಕರಿಂದಲೂ ಭೂಮಿಯನ್ನು ಖರೀದಿಸಲಾಗಿದೆಂದು ಕಂಡುಬಂದಿದೆ. ಹದಿನೇಳನೇ ಶತಮಾನದಲ್ಲಿ ಬೆಟ್ಟದಪುರದ ಸೇನಬೋವ ದೇವಪ್ಪಯ್ಯನವರ ಪುತ್ರನಾದ ನಂಜಪ್ಪಯ್ಯನು ಬಾವಿಯನ್ನು[೧೨] ಕಟ್ಟಿಸಿರುವನೆಂದು ಶಾಸನದಲ್ಲಿ ಉಲ್ಲೇಖವಿದ್ದು ಪಿರಿಯೊಡೆಯರು ವೀರಾಂಬುಧಿ ಕೆರೆಯನ್ನು[೧೩] ಕಟ್ಟಿಸಿರುವರು.

ಆರ್ಥಿಕ:

ಸಮಾಜದ ಪ್ರಮುಖ ಅಂಗವಾದ ಆರ್ಥಿಕ ವ್ಯವಸ್ಥೆ ಪ್ರಾಚೀನ ಕಾಲದಲ್ಲಿ ಸೈನ್ಯದಷ್ಟೆ ಪ್ರಮುಖವಾಗಿದ್ದು, ಉಳಿದ ಕ್ಷೇತ್ರಗಳು ಆರ್ಥಿಕತೆಯನ್ನು ಅವಲಂಬಿಸಿದ್ದವು. ಇದರಲ್ಲಿ ನೈಸರ್ಗಿಕ ಸಂಪನ್ಮೂಲಗಳಲ್ಲದೆ, ಕೃಷಿ ಮೊದಲಾದ ಅನೇಕ ವೃತ್ತಿಗಳು ಉತ್ಪಾದನೆಯನ್ನು ಒಳಗೊಂಡಿದ್ದವು. ಈ ಹಿನ್ನಲೆಯಲ್ಲಿ ಬೆಟ್ಟದ ಸುತ್ತಮುತ್ತಲಿನ ಪ್ರದೇಶವು ಫಲವತ್ತತೆಯಿಂದ ಕೂಡಿದ್ದು, ಖನಿಜ, ಅರಣ್ಯ ಉತ್ಪನ್ನಗಳು ಮತ್ತು ವಿವಿಧ ಮಣ್ಣಿನ ಸ್ವರೂಪಗಳನ್ನು ಹೊಂದಿರುವುದರಿಂದ ಆರ್ಥಿಕತೆಯ ಮೇಲೆ ಪರಿಣಾಮಗಳನ್ನು ಬೀರುತ್ತದೆ. ಇವುಗಳಿಂದ ಭೂಒಡೆಯರು, ವ್ಯಾಪಾರಸ್ತರು ಪ್ರಬಲರಾದರು. ಕ್ರಿ.ಶ. ೧೭೪೯ನೇ ವರ್ಷದಲ್ಲಿ ಮುತ್ತು ರತ್ನಗಳಿಂದ ಕಂಗೊಳಿಸುತ್ತಿದ್ದ ಸಿಡಿಲು ಮಲ್ಲಿಕಾರ್ಜುನ ದೇವರಿಗೆ ಬೆಟ್ಟದಪುರದ ಮೇಘಲ ಮನೆ ಲಿಂಗಣ್ಣನ ಪುತ್ರನಾದ ಹಾಗೂ ಹಜೂರು ಮೋದಿಖಾನೆಯ ವ್ಯಾಪಾರಿಯಾದ ನಾಗಶೆಟ್ಟಿಯು ವೃಷಭ ವಾಹನವನ್ನು[೧೪] ಅರ್ಪಿಸಿದನೆಂದು ಹಾಗೂ ಇದೇ ವ್ಯಕ್ತಿಯು ಮಯೂರ ವಾಹನವನ್ನು[೧೫] ದೇವಾಲಯಕ್ಕೆ ದಾನ ನೀಡಿದನೆಂದು

ತಿಳಿದುಬರುತ್ತದೆ. ಇದರಿಂದ ಚಂಗಾಳ್ವ ಮನೆತನದ ಹಣಕಾಸು ಪರಿಸ್ಥಿತಿ ಸ್ಥಿರವಾಗಿದ್ದು, ಅಂದು ಆರಂಭಿಸಿದ ವ್ಯಾಪಾರ ಚಟುವಟಿಕೆಯ ಕುರುಹುವಾದ ಸಂತೆ ಇಂದಿಗೂ ನಡೆದುಕೊಂಡು ಬಂದಿದೆ. ಅದಕ್ಕೆ ಅನುಗುಣವಾಗಿ ಸಂತೆಪೇಟೆ, ಕೋಟೆ ಬೀದಿ, ಬ್ರಾಹ್ಮಣರ ಬೀದಿ ಮತ್ತು ಸೂಳೆ ಬೀದಿಗಳಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಧಾರ್ಮಿಕ ದಾನದತ್ತಿಗಳು

ಬೆಟ್ಟದಪುರ ಪರಿಸರದಲ್ಲಿ ಕಂಡುಬಂದಿರುವ ಅವಶೇಷಗಳನ್ನು ಗಮನಿಸಿದರೆ, ಹತ್ತನೆಯ ಶತಮಾನದಲ್ಲಿ ಜೈನಧರ್ಮ ಆಚರಣೆಯಲ್ಲಿತ್ತು ಎಂಬುದು ತಿಳಿದುಬರುತ್ತದೆ. ಇಂದಿನ ಸಿಡ್ಲು ಮಲ್ಲಿಕಾರ್ಜುನ ಬೆಟ್ಟ ಅಂದಿನ ಮಲ್ಲಿನಾಥ ತೀರ್ಥಂಕರ ಬೆಟ್ಟವೆಂದು ಸಾಹಿತ್ಯಿಕ ಮತ್ತು ಜಾನಪದವಾಗಿ ದೊರೆಯುವ ಆಕಾರಗಳಿಂದ ತಿಳಿಯಬಹುದು. ಹಿಂದೂ ಧರ್ಮ ಅಥವಾ ಬ್ರಾಹ್ಮಣ ಧರ್ಮದ ವಿರುದ್ಧ ಸಾಮಾಜಿಕ ಸಮಾನತೆ ಸಾರುವ ಶರಣ ಚಳವಳಿ ಹನ್ನೆರಡನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಉಗಮಗೊಂಡಿತ್ತು. ಈ ಚಳವಳಿಯಿಂದ ಪ್ರಭಾವಿತರಾದ ಸ್ಥಳೀಯ ಜನತೆ ಮತ್ತು ರೈತಾಪಿ ಜನತೆಯಾದ ವಕ್ಕಲಿಗರು ವೀರಶೈವ ಧರ್ಮವಾಗಿ ಬೆಳೆದು ಬಂದ ಧರ್ಮಕ್ಕೆ ಮತಾಂತರಗೊಂಡಿರುವರು. ಇದರಿಂದ ಜೈನಧರ್ಮ ಪ್ರಾಬಲ್ಯವನ್ನು ಕಳೆದುಕೊಂಡು ಶೈವ ಧರ್ಮದ ಪವಿತ್ರ ಧಾರ್ಮಿಕ ಕೇಂದ್ರವಾಗಿ ಕಂಡುಬಂದಿರುವುದರಿಂದ ಶೈವ ಅನುಯಾಯಿಗಳ ಸಂಖ್ಯೆ ಹೆಚ್ಚಾಗಿತ್ತು. ಶೈವ ಧರ್ಮದಿಂದ ಪ್ರಭಾವಿತರಾದ ಅರಸರು ಮತ್ತು ಸಂಪತ್ತನ್ನು ಉಳ್ಳವರು ಧಾರ್ಮಿಕ ಧಾನವನ್ನು ನೀಡಿರುವರು. ದೊರೆತಿರುವ ಯಾವುದೇ ಶಾಸನಗಳು ದೇವಾಲಯ ನಿರ್ಮಾಣ ಮತ್ತು ಅರಸರು ಅಧಿಕಾರಕ್ಕೆ ಬಂಧ ವಿಷಯವನ್ನು ತಿಳಿಸುವಲ್ಲಿ ವಿಫಲವಾಗಿವೆ. ಕ್ರಿ.ಶ. ೧೫೦೮ನೆಯ ವರ್ಷದಲ್ಲಿ ಸೋಮವಂಶದವನಾದ ಮಹಾಮಾಂಡಳಿಕ ಮಂಡಲೇಶ್ವರ, ಕುಲೋತ್ತುಂಗ ಚಂಗಾಳ್ವ ಶ್ರೀವೀರ ಶ್ರೀಕಂಠ ರಾಜಯ್ಯ ದೇವ ಮಹಾಅರಸನ ಪುತ್ರನಾದ ಪಿರಿಯ ರಾಜಯ್ಯದೇವ ಮಹಾಅರಸು ಸಿರಿಗೆರೆಯ ಅನ್ನದಾನಿ ಮಲ್ಲಿಕಾರ್ಜುನ ದೇವರ ಅಂಗ-ರಂಗ-ಭೋಗ ಮತ್ತು ಪೂಜೆಗಳಿಗಾಗಿ ಭಕ್ತಿಯಿಂದ ತನ್ನ ತಂದೆ ತಾಯಿಯಾದ ವಲ್ಲಭಮ್ಮ ಹಾಗೂ ಪುತ್ರನಾದ ಪಿರಿವೊಡೆಯನಿಗೆ ಒಳ್ಳೆಯದಾಗಬೇಕೆಂದು ತಿಳಿಸಿರವನು. ನಂಜರಾಯ ಪಟ್ಟಣದ ಸೀಮೆಯಲ್ಲಿರುವ ತುಂಗದ ಸ್ಥಳವನ್ನು ಮತ್ತು ಅದರ ಹಳ್ಳಿಗಳಾದ ಪಿರಿಯಸಮುದ್ರ, ಆನೆವಾಳು, ಕೌಲನಹಳ್ಳಿ, ಲಕೂರು, ಆಲವೋಮೆ, ಕೊಟ್ಟವಳ್ಳಿ ಮೇಲೂರು, ಮರದೂರು, ಹುಳಿಯನ ಹಳ್ಳಿ, ಹಂದಿಗನಹಳ್ಳಿ, ಉರುಗುವಳ್ಳಿ ಮತ್ತು ಬಿಳುಗಳಿ ಒಟ್ಟು ಹದಿನೈದು ಹಳ್ಳಿಗಳು ರಾವಂದೂರು, ಹೊನ್ನೆಯನಹಳ್ಳಿ, ಅರೆಯನ ಹಳ್ಳಿ, ಹೊಸಹಳ್ಳಿ, ಬೋಗನಹಳ್ಳಿ, ಕೋಡಿಹಳ್ಳಿ, ನಾಗನಹಳ್ಳಿ, ಹಂಡುರಾವಳ್ಳಿ ಒಟ್ಟು ಎಂಟು ಉಪಗ್ರಾಮಗಳು, ಇದರಲ್ಲಿ ಹದಿಮೂರು ಗ್ರಾಮಗಳು ಬಲಸೋಗೆಯ ಸ್ಥಳಕ್ಕೆ ಸೇರಿದ್ದಾಗಿದೆ. ಹಾಗೇ ಮೂವತ್ತ್ಮೂರು ಗ್ರಾಮಗಳು ಮತ್ತು ಮೂರು ಹೋಬಳಿಗಳನ್ನು ದಾನ[೧೬] ಮಾಡಿರುವನು.

ಕ್ರಿ.ಶ. ೧೫೧೧ರಲ್ಲಿ ಪಿರಿಯರಾಜಯ ದೇವ ಮಹಾಅರಸನು, ದೇವರ ದೇವನಾದ ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಒಂದು ದೊಡ್ಡ ಘಂಟೆಯನ್ನು[೧೭] ತನ್ನ ತಂದೆ, ತಾಯಿ ಮತ್ತು ಮಗನಿಗೆ ಹಾಗೂ ವೀರರಾಜ ಒಡೆಯ, ಹಾಗೂ ಚೆಂಗಾಳ್ವ ವಂಶದ ಎಲ್ಲಾ ಸದಸ್ಯರು ಕೈಲಾಸ ಹೊಂದಲ್ಲಿಯೆಂದು ದೇವರಿಗೆ ಅರ್ಪಿಸಿರುವುದಾಗಿದೆ. ಕ್ರಿಶ. ೧೫೪೯ರಲ್ಲಿ ರಾಮರಾಜಯ್ಯನ ಪುತ್ರನಾದ ತಿರುಮಲರಾಜಯ್ಯನ ಮಗನಾದ ಸೋಮರಾಜಯ್ಯನು ತನ್ನ ತಂದೆ ತಾಯಿಯಾದ ರಾಮರಾಜಯ್ಯ ಮತ್ತು ತಿಮ್ಮಾಜಮ್ಮನವರಿಗೆ ಒಳ್ಳೆಯದಾಗಬೇಕೆಂದು ಮಲ್ಲಿಕಾರ್ಜುನ ದೇವರ ಅಂಗ–ರಂಗ–ಭೋಗಕ್ಕಾಗಿ ಮಲವಡಿ ರಾಜ್ಯವನ್ನು ದಾನ ನೀಡುತ್ತಾ ಕಾಶಿ, ಕೇದಾರ, ನೀಲಕಂಠ, ಲೇಪಾಲ, ತುಂಗಾಭದ್ರಾ ಮತ್ತು ವಾರಣಾಸಿ ದೇವರುಗಳನ್ನು ವಂದಿಸುತ್ತಾ, ಅನ್ನದಾನಿ ಮಲ್ಲಿಕಾರ್ಜುನ ದೇವರ ರಥೋತ್ಸವದ ಸಮಯದಲ್ಲಿ ಕಲ್ಲು ಶಾಸನವನ್ನು ಹೊರಡಿದ್ದಾನೆ. ಇದರಲ್ಲಿ ಹತ್ತು ತಲೆಮಾರು ತಂದೆಯವರ ಪಾಲಿಗೂ, ಹನ್ನೊಂದು ತಲೆಮಾರು ತಾಯಿಯವರ ಪಾಲಿಗೂ ಒಳ್ಳೆಯದಾಗಬೇಕೆಂದು ತಿಳಿಸುತ್ತಾ ಈ ಶಿಲಾಶಾಸನವನ್ನು ನಂಜುಂಡರಾಯನ ಪುತ್ರನಾದ ಶ್ರೀಕಂಠರಾಜನ ಮಗನಾಗಿರುವ ರುದ್ರಗಣನ ಆಳ್ವಿಕೆಯ ಕಾಲದಲ್ಲಿ ಹಾಕಿಸಲಾಗಿದೆ. ಚಂಗಾಳ್ವ ವಂಶದ ಪಿರಿಯರಾಜನಿಗೆ ಮೊದಲು ರುದ್ರಗಣನೆಂಬ[೧೮] ಹೆಸರು ಕಂಡುಬಂದಿರುವುದು ಇದೆ ಶಾಸನದಲ್ಲಿದೆ. ಈ ಶಾಸನವನ್ನು ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರ ಮುಂದೆ ದಾನ ನೀಡಲಾಗಿದೆ. ಹದಿನಾರನೇ ಶತಮಾನದ ಒಂದು ಶಾಸನದಲ್ಲಿ ಏತಗೈನೂರಿನ ದಾಸರಿನಾಯಕನು ಬಂಗಾರುವೆಳ್[೧೯] ಎಂಬ ಗ್ರಾಮವನ್ನು ಸಿರಿಗೆರೆಯ ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಲಾಗಿದೆ. ಅನ್ನದಾನಿ ಮಲ್ಲಿಕಾರ್ಜುನ ದೇವರ ಪರಮಭಕ್ತ ಚೆನ್ನವೀರಗೌಡನ ಪುತ್ರ ಗಂಗಾಧರಯ್ಯನು ಸೋಸಲೆ ಗ್ರಾಮದವನಾಗಿದ್ದು, ದೇವಾಲಯವನ್ನು ಹದಿನೇಳನೆಯ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿಸಿ[೨೦] ಶಿಲಾ ಶಾಸನವನ್ನು ಹೊರಡಿಸಿರುವನು. ಇದೇ ವೇಳೆಯಲ್ಲಿ ದೇವಾಲಯದ ಗರ್ಭಗೃಹಕ್ಕೆ ಮುಂದೆ ನಂದಿ ಸ್ಥಂಭವನ್ನು[೨೧] ನಿಲ್ಲಿಸಿರುವುದಾಗಿದೆ. ಮತ್ತು ಹದಿನೇಳನೇಯ ಶತಮಾನದಲ್ಲಿ ಹರದೂರಿನ ಕಂಕಾಲದೇವನು ಋಷಿಗಳು ವಾಸಿಸುವುದಕ್ಕಾಗಿ ಒಂದು ಗುಹೆಯನ್ನು[೨೨] ಧಾರ್ಮಿಕ ಭಕ್ತಿ ಪೂರ್ವಕವಾಗಿ ನಿರ್ಮಿಸಿ ಕೊಟ್ಟಿದ್ದಾಗಿದೆ.

ಶ್ರೀಗಿರಿಯು ಭಕ್ತಾದಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದು, ಶಿರಂಗಾಲದ ಚನ್ನಶೆಟ್ಟಿಯು ಕ್ರಿಶ ೧೮೬೮ರಲ್ಲಿ ಘಂಟೆಯನ್ನು[೨೩] ಮಲ್ಲಿಕಾರ್ಜುನ ದೇವರಿಗೆ ಕೊಡುಗೆಯಾಗಿ ಕೊಟ್ಟಿರುವುದಾಗಿ ಶಾಸನ ತಿಳಿಸುತ್ತದೆ. ಮೈಸೂರು ಪ್ರಾಂತ್ಯದ ವೀರರಾಜ ಒಡೆಯರಯ್ಯರ ಪುತ್ರನಾದ ನಂಜರಾಜನವರು ಅನ್ನದಾನಿ ಮಲ್ಲಿಕಾರ್ಜುನ ದೇವಾಲಯಕ್ಕೆ ತಾಂಡವೇಶ್ವರ ಮತ್ತು ಚಂಡಿಕಾಂಬಗಳೆಂಬ ವಿಗ್ರಹಗಳನ್ನು[೨೪] ದಾನ ಕೊಟ್ಟಿದ್ದಾಗಿದೆ. ಇದೇ ದೇವರಿಗೆ ಹತ್ತೊಂಬತ್ತನೆಯ ಶತಮಾನದಲ್ಲಿ ಯಡತೂರೆಯ ಶಾನುಭೋಗರ ಮಗಳಾದ ಅನ್ನಪೂರ್ಣಮ್ಮಳು ಕಂಚಿನ ಬಿಂದಿಗೆಯನ್ನು[೨೫]

ದಾನವಾಗಿ ನೀಡಿರುವುದಾಗಿದೆ. ಇದರಿಂದ ತಿಳಿದುಬರುವ ವಿಷಯವೇನೆಂದರೆ ಈ ದೇವಾಲಯವು ಚಂಗಾಳ್ವ ಮನೆತನದಲ್ಲಿಯೇ ಅಲ್ಲದೇ ಮಹಿಷಮಂಡಲದಲ್ಲಿಯೂ ಪ್ರಸಿದ್ಧಿಯನ್ನು ಹೊಂದಿದ ಶೈವ ಧಾರ್ಮಿಕ ಕೇಂದ್ರವಾಗಿತ್ತೆಂದು ಕಂಡುಬಂದಿದೆ.

ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು:

ಸ್ಥಳೀಯ ಚರಿತ್ರೆಯನ್ನು ಪುನರ್ ರಚಿಸಲು ಸಾಹಿತ್ಯಿಕ ಮತ್ತು ಪುರಾತತ್ವ ಆಕಾರಗಳಲ್ಲಿ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಸಹಾಯಕವಾಗಿವೆ. ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರ ಶಾಸನ ಅಥವಾ ವೀರಗಲ್ಲು.[೨೬] ಇವುಗಳನ್ನು ಸಮಾಜದ ಒಳಿತಿಗಾಗಿ ಅಥವಾ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಜ್ಞಾಪಕಾರ್ತವಾಗಿ ವೀರಗಲ್ಲುಗಳನ್ನು ಊರಮುಂದೆ ನಡೆಸುವ ಅಥವಾ ನಿಲ್ಲಿಸುವ ಪದ್ಧತಿ[೨೭] ಪ್ರಾಚೀನ ಕಾಲದಲ್ಲಿ ರೂಢಿಯಲ್ಲಿತ್ತು. ಇಲ್ಲಿ ಗಮನಿಸಬಹುದಾದ ವಿಷಯವೇನೆಂದರೆ ಯಾವುದೇ ವೀರಗಲ್ಲುಗಳು ತಳಸಮುದಾಯದ ಕೇರಿಯ ಮುಂದೆ ಅಥವಾ ಜಮೀನುಗಳಲ್ಲಿ ಕಂಡುಬಂದಿರುವುದು ವಿಶೇಷ. ಇದರಿಂದ ತಿಳಿದುಬರುವ ಪ್ರಮುಖ ಅಂಶವೆಂದರೆ ಅಂದಿನ ಸಂದರ್ಭದಲ್ಲಿ ತಳಸಮುದಾಯದ ಜನರೇ ಯುದ್ಧ ಅಥವಾ ಊರಿನ ರಕ್ಷಣಾ ಕಾರ್ಯದಲ್ಲಿ ತೊಡಗುತ್ತಿದ್ದರು ಎಂಬುದಾಗಿದೆ. ಇಂತಹ ವ್ಯಕ್ತಿಗಳ ವಿಚಾರಗಳ ಬಗೆ ಚರಿತ್ರೆಯಲ್ಲಿ ದಾಖಲಾಗದಿರುವುದು ದುಃಖಕರ ಸಂಗತಿ ಎಂದು ಹೇಳಬಹುದು. ಜೈನ ಸಂಪ್ರದಾಯದಲ್ಲಿ ಸಲ್ಲೇಖನ ವೃತದಿಂದ ಪ್ರಾಣತ್ಯಾಗ ಮಾಡಿದ ಮಹನೀಯರ ವಿಷಯವನ್ನು ಹೇಳುವ ನಿಸಿದಿಗಲ್ಲು[೨೮]ಗಳೆಂಬ ಮತ್ತೊಂದು ಬಗೆಯ ಶಾಸನವಿದೆ. ಭಾರತವು ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ರಾಷ್ಟ್ರವಾಗಿದೆ. ಅವನ ಸಾಧನೆ ಕಾರ್ಯಗಳನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಯುದ್ಧಶೌರ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಿರುವರು ಪುರುಷರೇ ಆಗಿದ್ದಾರೆ. ವೀರತ್ವವನ್ನು ಹೊಂದಿದ ವ್ಯಕ್ತಿ ವೈಯಕ್ತಿಕಗಿಂತ ಸಾಮಾಜಿಕ, ಸಮುದಾಯದ ದೃಷ್ಟಿಯಿಂದ ಅಥವಾ ಸಾಮ್ರಾಜ್ಯದ ಹಿತದೃಷ್ಟಿಯಿಂದ ವೀರಾವೇಷದಿಂದ ಹೋರಾಡಿರುವರು. ಕೆಲವು ಸಲ ವೀರಾವೇಶದಿಂದ ಯುದ್ಧ ಮಾಡುವ ವೇಳೆಯಲ್ಲಿ ಕಾಲು, ಕೈಗಳನ್ನು ಕಳೆದುಕೊಂಡು ಮರಣ ಹೊಂದಿರುವ ಬಹಳಷ್ಟು ನಿದರ್ಶನಗಳಿವೆ. ಇದರಿಂದ ನೊಂದ ತನ್ನ ಕುಟುಂಬದ ಸದಸ್ಯರುಗಳು ರಾಜಮನೆತನದವರು ಅಥವಾ ಸಂಪತ್ತನ್ನು ಉಳ್ಳ ಜನತೆ ಸತ್ತ ವ್ಯಕ್ತಿಯ ನೆನಪಿನಾರ್ಥವಾಗಿ ವೀರಗಲ್ಲುಗಳನ್ನು ಹೊರಡಿಸುತ್ತಿದ್ದರು. ವೀರಗಲ್ಲುಗಳನ್ನು ಗುರುತಿಸುವುದು ಸರಳವಾಗಿದ್ದು, ಬೆಟ್ಟದಪುರ ಪರಿಸರದಲ್ಲಿ ಹಲವು ವೀರಗಲ್ಲುಗಳು ಕಂಡುಬಂದಿವೆ. ಇವು ಬೆಟ್ಟದಪುರ, ಜೋಗನಹಳ್ಳಿ, ಅವರ್ತಿ, ಬೆಟ್ಟತುಂಗ ಕೊತ್ತವಳ್ಳಿ ಪ್ರದೇಶಗಳಲ್ಲಿ ಕಂಡುಬಂದಿವೆ. ವೀರಗಲ್ಲಿನ ತಳಭಾಗದಲ್ಲಿ ಕೆಲವೊಂದು ಸಲ ಶಾಸನವಿದ್ದು, ಇದರ ಮೇಲಿನ ಭಾಗದಲ್ಲಿ ವೀರ ತನ್ನ ಶತೃಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧ ಮಾಡಿದ

ಅವನನ್ನು ದೇವತಾ ಸ್ತ್ರೀಯರು ವೀರಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ.

ಸತ್ತ ವ್ಯಕ್ತಿಯು ಶೈವ ಧರ್ಮಕ್ಕೆ ಸೇರಿದ್ದರೆ ಶಿವಲಿಂಗ, ನಂದಿ, ಮತ್ತು ಶಿವಲಿಂಗವನ್ನು ಪೂಜಿಸುತ್ತಿರುವ ವ್ಯಕ್ತಿಯ ಚಿತ್ರವನ್ನು ವೀರಗಲ್ಲುಗಳು ಒಳಗೊಂಡಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ದೊರೆತಂಥಹ ವೀರಗಲ್ಲುಗಳ ಮೇಲೆ ಕುದುರೆ ಸವಾರಿ ಮಾಡುತ್ತಿರುವ, ಬಿಲ್ಲನ್ನು, ಖಡ್ಗವನ್ನು ಹಿಡಿದು ನಿಂತಿರುವುದು ಕಂಡುಬಂದಿದೆ. ಕೆಲವು ಕಡೆ ವೀರನ ಚಿತ್ರವನ್ನೇ ಕೊರೆಯದೆ ಅವನ ಶೌರ್ಯವನ್ನು ಮಾತ್ರ ಕೆತ್ತಿ ಇವುಗಳು ಸಹ ವೀರಗಲ್ಲುಗಳೇ ಆಗಿರುವುದಾಗಿದೆ. ವೀರರಿಗೆ ಕೊಟ್ಟ ದಾನಗಳನ್ನು ನೆತ್ತರುಗೊಡುಗೆ, ರಕ್ತಗೊಡುಗೆ ಎಂದು, ಗೆದ್ದು ಬಂದ ವೀರನ ಕೆಂಪಾದ ಕತ್ತಿಯನ್ನು ರಾಜ ತಾನೇ ಕೈಯಾರ ತೊಳೆದು ದಾನ ಕೊಟ್ಟರೆ, ಅಂತಹ ದಾನವನ್ನು 'ಬಾಳ್ಗಳ್ಚು' ಎಂದು ಕರೆದಿರುವರು. ಬಾಳ್ ಎಂದರೆ ಕತ್ತಿ, ಕಳ್ಚು ಎಂದರೆ ತೊಳೆ ಎಂದರ್ಥ.[೨೯]

ಮಾಸ್ತಿಗಲ್ಲುಗಳು: ವೀರಗಲ್ಲುಗಳಂತೆಯೇ ಮಾಸ್ತಿಗಲ್ಲುಗಳು ಪ್ರಮುಖವಾಗಿವೆ. 'ಮಾಸ್ತಿ' ಎಂಬುವುದು ಸಂಸ್ಕೃತದ ಮಹಾಸತಿ ಎಂಬುವುದರ ರೂಪ. ಗಂಡ ಸತ್ತ ಮೇಲೆ ಅವನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀಯನ್ನು ಮಹಾಸತಿ ಅಥವಾ ಮಾಸ್ತಿ[೩೦] ಎಂದೂ, ವೀರನಂತೆಯೇ ಹೋರಾಡಿ, ಇಲ್ಲವಾದರೆ ಗಂಡನೊಂದಿಗೆ ತನ್ನನ್ನು ಬೆಂಕಿಗೆ ಅರ್ಪಿಸಿಕೊಂಡ ಸತಿಯವರ ನೆನಪಿನಲ್ಲಿ ಮಹಾಸತಿಕಲ್ಲು ಅಥವಾ ಮಾಸ್ತಿಕಲ್ಲುಗಳನ್ನು ಪ್ರತಿಷ್ಠಾಪನೆ ಮಾಡುವ ಪದ್ಧತಿಯು[೩೧] ಹಿಂದಿನಿಂದ ರೂಢಿಯಲ್ಲಿದೆ. ಇಂಥಹ ಗಲ್ಲುಗಳು ಬೆಟ್ಟದತುಂಗ, ಬೆಟ್ಟದಪುರಗಳಲ್ಲಿ ಕಂಡುಬಂದಿವೆ. ಈ ಕಲ್ಲಿನಲ್ಲಿ ಸಣ್ಣ ಕಂಬ, ಅದರ ಮೇಲೆ ಬಲಭಾಗದಿಂದ ಯುದ್ಧಕ್ಕೆ ಹೊರಟಿರುವಂತೆ ಒಂದು ಕೈ ಇದ್ದು, ಕೈಯತುಂಬ ಬಳೆ, ತೋಳ್ಬಳೆಗಳು ಇರುವುದು ಕಂಡುಬಂದಿದೆ. ಇಂಥಹ ಕಲ್ಲುಗಳನ್ನು ಒಂಟಿ ಕೈ ಮಾಸ್ತಿ ಕಲ್ಲುಗಳೆಂದು, ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸನ ತೋಳು ಎಂದು ಕರೆಯುವರು. ಇಂಥಹ ಮಾಸ್ತಿಕಲ್ಲುಗಳಲ್ಲಿ ಪುರುಷನೊಂದಿಗೆ ಸ್ತ್ರೀಯು ವೀರಾವೇಶದಿಂದ ಹೋರಾಡುತ್ತಿರುವ ಶಿಲ್ಪವಿರವುದು ಕಂಡುಬಂದಿವೆ. ಇಲ್ಲಿ ಪುರುಷನ ಚಿತ್ರವಿದ್ದರೂ ಚಿಕ್ಕ ಚಿತ್ರವಿರುತ್ತದೆ. ಒಟ್ಟಿನಲ್ಲಿ ಬೆಟ್ಟದಪುರ ಪರಿಸರವು ವೀರ ಸಂಕೇತದ ಭೂಮಿಯಾಗಿತ್ತು ಎಂಬುವುದಕ್ಕೆ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳೇ ಇಂದಿಗೂ ಮೂಕ ಸಾಕ್ಷಿಯಂತಿದೆ.

ಅಡಿಟಿಪ್ಪಣಿಗಳು:

೧. ಶೇಷಶಾಸ್ತ್ರಿ. ಆರ್., ೨೦೦೫, ಶಾಸನ ಪರಿಚಯ, ಬೆಂಗಳೂರು, ಪುಟ. ೨.

೨. ರಾಜಪ್ಪ ದಳವಾಯಿ, ೨೦೦೩, ಕನ್ನಡ ಸಾಹಿತ್ಯಕೋಶ, ಮೈಸೂರು, ಪುಟ. ೩೬೬.

೩. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ ೪, ಪಿ.ಪ.ಶಾಸನ ಸಂಖ್ಯೆ. ೫೯.

೪. ಅದೇ ಶಾ.ಸಂಖ್ಯೆ. ೭೧

೫. ಅದೇ ೬೦.

೬. ಅದೇ ೭೧.

೭. ಅದೇ ೬೧, ೬೭, ೬೮.

೮. ಅದೇ ೬೩, ೬೪.

೯. ಅದೇ ೮೪.

೧೦. ಅದೇ ೯೨.

೧೧. ಅದೇ ೬೦.

೧೨. ಅದೇ ೬೧.

೧೩. ಅದೇ ೭೨.

೧೪. ಅದೇ ೬೩.

೧೫. ಅದೇ ೬೪.

೧೬. ಅದೇ ೭೧.

೧೭. ಅದೇ ೬೨.

೧೮. ಅದೇ ೫೯.

೧೯. ಅದೇ ೭೦.

೨೦. ಅದೇ ೭೪.

೨೧. ಅದೇ ೭೬.

೨೨. ಅದೇ ೮೧

೨೩. ಅದೇ ೭೭.

೨೪. ಅದೇ ೭೯.

೨೫. ಅದೇ ೭೮

೨೬. ಡಾ. ಚಿದಾನಂದಮೂರ್ತಿ, ೧೯೮೪, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಬೆಂಗಳೂರು, ಪುಟ. ೧

೨೭. ಡಾ. ಮಹದೇವ.ಸಿ., ೨೦೦೨, ಹೊಸಪೇಟೆ ತಾಲ್ಲೂಕು ದರ್ಶನ, ಹಂಪಿ, ಪುಟ ೧೦೭.

೨೮. ಡಾ. ಚಿದಾನಂದ ಮೂರ್ತಿ "ಪೂರ್ವೋಕ್ತ".

೨೯. ಅದೇ.

೩೦. ಅದೇ.

೩೧. ಡಾ. ಮಹದೇವ.ಸಿ. "ಪೂರ್ವೋಕ್ತ".

ಅಧ್ಯಾಯ : ಐದು

ವಾಸ್ತುಶಿಲ್ಪ

ಅಧ್ಯಾಯ : ಐದು

ವಾಸ್ತುಶಿಲ್ಪ

ಪ್ರಾಚೀನ ಕಾಲದಿಂದ ಮಾನವ ಸಮೂಹ ವಾಸಿಸಲು ಮತ್ತು ದೇವರನ್ನು ಪೂಜಿಸಲು ಮಂದಿರವನ್ನು ನಿರ್ಮಿಸುತ್ತಿದ್ದರು. ತಮ್ಮನ್ನು ರಕ್ಷಿಸಿಕೊಳ್ಳಲು ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಂಡಿರುವುದನ್ನು ಪುರಾತತ್ವ ಆಕಾರಗಳಿಂದಲೂ, ಇತಿಹಾಸದಿಂದಲೂ ಕಂಡುಬಂದಿದೆ. ಸಾಮಾನ್ಯವಾಗಿ ವಾಸ್ತುಶಿಲ್ಪಗಳೆಂದರೆ ದೇವಾಲಯಗಳು ಗುಹಾದೇವಾಲಯಗಳು, ಬಸದಿಗಳು ಮತ್ತು ರಕ್ಷಣ ವ್ಯವಸ್ಥೆಯನ್ನು ಉದಾಹರಿಸಬಹುದಾಗಿದೆ. ಮಾನವ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದು ಅವನಿಗೆ ಜ್ಞಾನ ವಿಕಾಸವಾದಂತೆ ಗುಡಿಸಲುಗಳನ್ನು ಕಟ್ಟಲು ಪ್ರಾರಂಭಿಸಿದನು. ಮತ್ತು ಭಯ ಭಕ್ತಿಯಿಂದ ಇರಲು ದೇವರ ಗುಡಿಗಳು ಪ್ರಾರಂಭವಾಗಿ ಮುಂದೆ ದೇವಾಲಯಗಳು ವಿಕಾಸಗೊಳ್ಳಲು ಕಾರಣವಾದವು.

ದೇವಾಲಯವೆಂದರೆ ದೇವರ ಆಲಯ. ದೇವರ ಇರುವಿಕೆಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ. ಮನುಷ್ಯನ ವಾಸಕ್ಕಾಗಿ ಕಟ್ಟಲ್ಪಟ್ಟ 'ಮನೆಕಟ್ಟಡ', ದೇವರ ಮೂರ್ತಿಯನ್ನು ಪೂಜಿಸಲು ಕಟ್ಟಲ್ಪಟ್ಟ ದೇವಾಲಯ ಕಟ್ಟಡ ಎಂಬುದಾಗಿ ಅರ್ಥೈಸಲಾಗಿದೆ.[೧] ವಾಸ್ತುಶಿಲ್ಪ ಕಲೆಯ ಐತಿಹಾಸಿಕ ಅಧ್ಯಯನಕ್ಕೆ ದೊರಕುವ ವಿಶಿಷ್ಟವಾದ ಉದಾಹರಣೆಗಳೆಂದರೆ ದೇವಾಲಯ, ಮಸೀದಿ, ಗೋರಿ, ಬಸದಿ ಮತ್ತು ಚರ್ಚ್, ಬೌದ್ಧ ವಿಹಾರಗಳು, ವಾಸ್ತುಶಿಲ್ಪ ಪ್ರಧಾನವಾಗಿ ಉಳಿದು, ಬೆಳೆದು ಬಂದುದು ಧಾರ್ಮಿಕ ತಳಹದಿಯ ಮೇಲೆನ್ನಬಹುದು! ವಾಸ್ತುಶಿಲ್ಪವನ್ನು, ದೇವಾಲಯ ವಾಸ್ತುಶಿಲ್ಪ ಮತ್ತು ರಕ್ಷಣಾ ವಾಸ್ತುಶಿಲ್ಪವೆಂದು ವಿಂಗಡಿಸಬಹುದು.

ದೇವಾಲಯ ಮತ್ತು ರಕ್ಷಣಾ ವ್ಯವಸ್ಥೆಯನ್ನು ಪ್ರಾರಂಭದಲ್ಲಿ ಮರ ಬಿದಿರು ಹಾಗೂ ಮಣ್ಣಿನಿಂದ ನಿರ್ಮಿಸುತ್ತಿದ್ದರು. ಕ್ರಿ.ಪೂ. ಆರನೇ ಶತಮಾನಕ್ಕಿಂತ ಹಿಂದೆ ಕಟ್ಟಲ್ಪಟ್ಟ ಕಟ್ಟಡಗಳು ಗಟ್ಟಿಯಲ್ಲದ ವಸ್ತುಗಳಾಗಿದ್ದವು. ನಂತರದ ಕಾಲದಲ್ಲಿ ಗಟ್ಟಿಯಾದ ಇಟ್ಟಿಗೆ ಶಿಲೆಗಳಿಂದ ದೇವಾಲಯ ಮತ್ತು ಕೋಟೆಯನ್ನು ಕಟ್ಟಲು ಪ್ರಾರಂಭಿಸಿದರು. ಕಲ್ಲುಗಳಿಂದ ಕಟ್ಟಲ್ಪಟ್ಟ ದೇವಾಲಯ, ಕೋಟೆಗಳು ಇಂದಿಗೂ ಸಹ ಉಳಿದು ಬಂದಿವೆ. ದೇವಾಲಯಗಳು ಹರಪ್ಪ ಸಂಸ್ಕೃತಿಯಿಂದ ಉಗಮವಾಯಿತಾದರೂ ಅಂಥಹ ಯಾವುದೇ ದೇವಾಲಯಗಳು ಈಗ ಕಂಡುಬರುವುದಿಲ್ಲ.

ಕ್ರಿ.ಪೂ. ಆರನೆಯ ಶತಮಾನದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳ ಉಗಮದಿಂದಾಗಿ ದೇವಾಲಯಗಳು ಒಂದು ನಿರ್ದಿಷ್ಟ ಆಕಾರವನ್ನು ಹೊಂದಲು ಸಾಧ್ಯವಾಯಿತು. ಬೌದ್ಧರ

ಪವಿತ್ರ ಕೇಂದ್ರಗಳಾಗಿ ಚೈತ್ಯಲಯಗಳು, ವಿಹಾರಗಳು ಬೆಳೆದವು. ಜೈನರ ಧಾರ್ಮಿಕ ಕೇಂದ್ರಗಳಾಗಿ ಬಸದಿಗಳು ಅಥವಾ ವಸತಿಗಳು ಉಗಮವಾದವು. ಗುಪ್ತರ ಕಾಲದಲ್ಲಿ ಹಿಂದೂ ದೇವಾಲಯಗಳು ಪ್ರಾರಂಭದ ಹಂತವಾಗಿ ಕಾಣಿಸಿಕೊಂಡವು. ಜೈನ ಮುನಿಗಳು ಮತ್ತು ಬೌದ್ಧ ಬಿಕ್ಕುಗಳು ವಾಸಿಸಲು ಗುಹಾಲಯಗಳನ್ನು ಕೊರೆಯಲಾಯಿತು. ಇದರಿಂದಾಗಿ ಗುಹಾದೇವಾಲಯಗಳು ವಿಕಾಸಹೊಂದಲು ಕಾರಣವಾಯಿತು. ಗುಹಾಲಯಗಳು ಜೈನ ಮತ್ತು ಬೌದ್ಧ ಧರ್ಮಗಳ ಪ್ರಗತಿ ಹೊಂದಲು ಕಾರಣವಾದವು. ಇಂತಹ ಗುಹಾಲಯಗಳಲ್ಲಿ ಬುದ್ಧ ಮತ್ತು ತೀರ್ಥಂಕರು ವಾಸಿಸುತ್ತಿದ್ದ ಗುಹಾಲಯಗಳನ್ನು ಇಂದಿಗೂ ಸಹ ಕಾಣಬಹುದಾಗಿದೆ. ಇವುಗಳಿಂದಾಗಿ ಒಂದು ನಿರ್ದಿಷ್ಟ ದೇವಾಲಯ ವಾಸ್ತುಶಿಲ್ಪ ಬೆಳವಣಿಗೆ ಹೊಂದಿತು. ಗುಹಾಲಯಗಳ್ನು ಬೃಹತ್ ಬಂಡೆಗಳಿಂದ ಕೊರೆದವುಗಳಾಗಿವೆ. ಇಂಥಹ ಕೋಟೆ, ದೇವಾಲಯ, ಬಸದಿ, ಗುಹಾಲಯಗಳು ಇಂದಿಗೂ ಪುರಾತತ್ವ ಆಕಾರಗಳಾಗಿ ಸ್ಥಳೀಯ ಚರಿತ್ರೆಯನ್ನು ಕಟ್ಟಲು ಸಹಾಯಕವಾಗಿವೆ.

ಬೆಟ್ಟದಪುರ ಪರಿಸರದಲ್ಲಿ ಕ್ರಿ.ಶ. ಒಂಬತ್ತನೆ ಶತಮಾನದಲ್ಲಿ ಜೈನಧರ್ಮ ಪಾದಾರ್ಪಣೆ ಮಾಡಿತು. ಹತ್ತು, ಹನ್ನೆರಡನೆ ಶತಮಾನದಲ್ಲಿ ಜೈನ ಅನುಯಾಯಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಒಳಗೊಂಡಿತ್ತು ಎಂಬುವುದಕ್ಕೆ ಜೈನ ಬಸದಿಗಳು, ಮೂರ್ತಿಶಿಲ್ಪಗಳು ಇಂದಿಗೂ ಸಾಕ್ಷಿಯಾಗಿವೆ. ಆದರೆ ಹನ್ನೆರಡನೆ ಶತಮಾನದ ನಂತರ ವೀರಶೈವ ಧರ್ಮ ಪ್ರಚಾರಕ್ಕೆ ಬಂದು ಈ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯ ಶೈವ ಅನುಯಾಯಿಗಳನ್ನು ಹೊಂದಿತ್ತು. ಅಲ್ಲದೇ ಶೈವ ದೇವಾಲಯಗಳು ಕಟ್ಟಲ್ಪಟ್ಟಿದ್ದರಿಂದ ಜೈನಧರ್ಮ ಅವನತಿಯ ಹಾದಿ ಹಿಡಿಯಿತು ಎಂದು ಇಲ್ಲಿ ದೊರತಿರುವ ಪುರಾತತ್ವ ಆಧಾರಗಳಿಂದ ಅವಲೋಕಿಸಬಹುದಾಗಿದೆ.

ಬೆಟ್ಟದಪುರ ಪರಿಸರದಲ್ಲಿ ಹಲವು ಮನೆತನಗಳು ಆಳ್ವಿಕೆಯನ್ನು ಮಾಡಿವೆ. ಈ ಪ್ರದೇಶವನ್ನು ಪ್ರಮುಖವಾಗಿ ಚಂಗಾಳ್ವ ಮನೆತನವು ಆಳ್ವಿಕೆಯನ್ನು ಮಾಡಿದೆ. ಚೋಳ, ಗಂಗ, ಕದಂಬ, ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಸಾಮ್ರಾಜ್ಯ ಮತ್ತು ಮೈಸೂರು ಒಡೆಯರು ಆಳ್ವಿಕೆಯನ್ನು ಮಾಡಿದ್ದು ಇವರುಗಳ ಕಾಲದಲ್ಲಿ ಹಲವು ಜಿನ ಮಂದಿರಗಳು, ಶೈವದೇವಾಲಯಗಳು ಮಂಟಪಗಳು ಮತ್ತು ಸ್ಥಂಭಗಳು ಕಂಡುಬಂದಿವೆ. ಇಲ್ಲಿಯ ಬಹುತೇಕ ದೇವಾಲಯಗಳು ದ್ರಾವಿಡ ಶೈಲೀಯ ಲಕ್ಷಣಗಳನ್ನು ಹೊಂದಿವೆ. ಕೆಲವು ಜೈನ ಬಸದಿಗಳು ಶೈವ ದೇವಾಲಯಗಳಾಗಿ ಮಾರ್ಪಟ್ಟಿವೆ.

ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ:

ಅನ್ನದಾನಿ ಮಲ್ಲಿಕಾರ್ಜುನ ದೇವಾಲಯವು ದೊಡ್ಡ ಬೆಟ್ಟದ ತುದಿಯಲ್ಲಿ ಕಟ್ಟಲ್ಪಟ್ಟಿದ್ದು. ಇಪ್ಪತ್ತೈದು ಅಡಿ ಎತ್ತರ ಆಯತಕಾರದ ಗುಡ್ಡದ ಮೇಲೆ ಇದೆ. ಈ ಬೆಟ್ಟವು ಗ್ರಾಮದ

ಆಗ್ನೇಯ ದಿಕ್ಕಿಗಿದ್ದು ೪೩೭೮ ಅಡಿ ಸಮುದ್ರಮಟ್ಟದ ಎತ್ತರದಲ್ಲಿದೆ. ದೇವಾಲಯವು ಉತ್ತರಾಭಿಮುಖವಾಗಿದ್ದು ಗ್ರಾನೈಟ್ಸ್ ಶಿಲೆಯಿಂದ ಕಟ್ಟಲ್ಪಟ್ಟಿದೆ. ಈ ದೇವಾಲಯವು ವಿಜಯನಗರ ಕಾಲದಲ್ಲಿ ಹೆಚ್ಚಿನ ವಿಕಾಸವನ್ನು ಹೊಂದಿದೆ. ನಂತರದ ಕಾಲದಲ್ಲಿ ಚಂಗಾಳ್ವರೂ ಕೂಡಾ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವರು. ದೇವಾಲಯವು ದ್ರಾವಿಡ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ. ಇದು ಮೂಲ ಏಕಕೂಟ ದೇವಾಲಯವಾಗಿದ್ದು ನಂತರ ದ್ವಿಕೂಟವಾಗಿದೆ. ಇದು ಶೈವ ದೇವಾಲಯವಾಗಿದ್ದು ದೇವಾಲಯಕ್ಕೆ ಪ್ರಮುಖವಾಗಿ ರಾಯಗೋಪುರದಿಂದ ಮತ್ತೊಂದು ಬೆಟ್ಟತುಂಗದ ಕಡೆಯಿಂದ ಹತ್ತಲು ಮೆಟ್ಟಿಲುಗಳಿವೆ.

ತಳವಿನ್ಯಾಸ:

ದೇವಾಲಯದ ರಚನಾ ನಿರ್ಮಾಣ ವ್ಯವಸ್ಥೆಯಲ್ಲಿ ಅದಿಷ್ಠಾನವಿದ್ದು ವೇದಿಕೆಯ ಮೇಲೆ ದೇವಾಲಯ ನಿರ್ಮಾಣಗೊಂಡಿದೆ. ಆದರೆ ದೇವಾಲಯದ ಗರ್ಭಗೃಹವನ್ನು ಬಿಟ್ಟು ಉತ್ತರ, ಪೂರ್ವ ಮತ್ತು ಪಶ್ಚಿಮಗಳಲ್ಲಿ ಅಡಿಪಾಯ ಚಪ್ಪಡಿಕಲ್ಲುಗಳಿಂದ ಮುಚ್ಚಿಹೋಗುವುದಾಗಿದೆ. ದೇವಾಲಯವು ಮೂಲತಃ ಗರ್ಭಗೃಹ, ಅಂತರಾಳ, ನವರಂಗ ಮಂಟಪವನ್ನು ಒಳಗೊಂಡಿದೆ. ನವರಂಗ ಮಂಟಪಕ್ಕೆ ಪ್ರವೇಶದ್ವಾರವಿದ್ದು ಇದಕ್ಕೆ ನೇರವಾಗಿ ಎಡ ಮತ್ತು ಬಲಭಾಗದಲ್ಲಿ ಎರಡು ಪ್ರವೇಶ ದ್ವಾರಗಳು ಕಂಡುಬಂದಿವೆ.

ಗರ್ಭಗೃಹ:

ದೇವಾಲಯದ ಗರ್ಭಗೃಹದಲ್ಲಿ ಎರಡೂವರೆ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹವು ಚೌಕಕಾರವಾಗಿದ್ದು ಭುವನೇಶ್ವರಿ ಹೊಂದಿದೆ. ಇದರ ಮೇಲೆ ದ್ರಾವಿಡ ಶೈಲಿಯ ಗೋಪುರವನ್ನು ಹೊಂದಿದೆ. ಗೋಪುರವು ಪಿರಮಿಡ್ಡಿನಾಕಾರದಲ್ಲಿದ್ದು, ಸುಂದರವಾದ ಗಾರೆ ಶಿಲ್ಪದಿಂದ ಅಲಂಕೃತವಾಗಿದೆ. ನಾಲ್ಕು ದಿಕ್ಕುಗಳ ಮೂಲೆಯಲ್ಲಿ ಬಸವನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ಆಯತಕಾರದ ಪಟ್ಟಿಗೆಯ ಆಕಾರದಲ್ಲಿದೆ. ಇದರ ಮೇಲೆಂದು ಗಾರೆಯಿಂದ ಮಾಡಲ್ಪಟ್ಟ ಕಳಸವಿದೆ. ಇಲ್ಲಿಯೂ ಸಹ ನಂದಿಯ ವಿಗ್ರಹವಿದೆ. ಬಾಗಿಲವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಉಬ್ಬುಶಿಲ್ಪವಿರುವುದಿಲ್ಲ. ಮತ್ತು ಬೆಳಕು ಇಲ್ಲದೆ ಕತ್ತಲೆಯಾಗಿರುವುದು. ಇದು ಪ್ರದಕ್ಷಣೆ ಪಥವನ್ನು ಹೊಂದಿರುವುದಿಲ್ಲ. ಬಿತ್ತಿಯು ಚೋಳ ಹೊಯ್ಸಳರ ಲಕ್ಷಣವನ್ನು ಹೊಂದಿದೆ.

ಅಂತರಾಳ:

ಗರ್ಭಗೃಹ ನಂತರದ ಭಾಗ ಅಂತರಾಳವಾಗಿದ್ದು ಯಾವುದೇ ರೀತಿಯ ಕಲಾತ್ಮಕ ಚಿತ್ರವನ್ನು ಹೊಂದಿರುವುದಿಲ್ಲ. ಅಂತರಾಳದಲ್ಲಿ ನಂದಿಯ ಶಿಲ್ಪವಿದ್ದು, ಇದು ಕಪ್ಪು ಶಿಲೆಯಿಂದ

ಕೂಡಿದೆ. ಬಾಗಿಲುವಾಡದಲ್ಲಿ ಸರಳ ರೇಖೆಯಂಥಹ ಚಿತ್ರಹೊಂದಿದ್ದು, ಲಲಾಟಬಿಂಬದಲ್ಲಿ ಪುಷ್ಪಕಾರದ ಚಿತ್ರವನ್ನು ಹೊಂದಿದೆ.

ನವರಂಗ ಮಂಟಪ:

ಅಂತರಾಳದ ಮುಂದಿನ ಭಾಗವೇ ನವರಂಗ ಮಂಟಪ. ನವರಂಗ ಮಂಟಪಕ್ಕೆ ಎರಡು ಪ್ರವೇಶದ್ವಾರಗಳಿವೆ. ಪೂರ್ವದಿಕ್ಕಿನಲ್ಲಿ ಇರುವಂಥಹ ನವರಂಗವ ಮಂಟಪವು ಪ್ರಾಚೀನ ಕಾಲದ್ದಾಗಿದೆ. ಆದರೆ ದಕ್ಷಿಣದಲ್ಲಿರುವ ನವರಂಗವು ಪಾಳೆಯಗಾರರ ಕಾಲದಲ್ಲಿ ನಿರ್ಮಾಣ ಮಾಡಿದ್ದಾಗಿದೆ. ನವರಂಗ ಮಂಟಪದಲ್ಲಿ ನಾಲ್ಕು ಸ್ಥಂಭಗಳಿದ್ದು ಒಂದೇ ರೀತಿಯಲ್ಲಿವೆ. ಸ್ಥಂಭದ ತಳವು ಚಚ್ಚೌಕಕಾರವಾಗಿದ್ದು, ಅದರ ಮೇಲೆ ಎಂಟು ಮುಖಗಳು, ನಂತರ ಸಿಲಿಂಡರಿನ ಆಕೃತಿಯನ್ನು ಹೊಂದಿದೆ. ಸ್ಥಂಭಗಳ ಮೇಲೆ ಶಿಲ್ಪಗಳ ಕೆತ್ತನೆ ಇರುವುದಿಲ್ಲ. ಬಿತ್ತಿ, ಸ್ಥಂಭ ಮತ್ತು ಛಾವಣಿಗಳಿಗೆ ಬಳಸಿದಂತಹ ಎಲ್ಲಾ ಕಲ್ಲುಗಳು ಗ್ರಾನೈಟ್‌ನಿಂದ ಮಾಡಿದ್ದಾಗಿದೆ. ಮಧ್ಯದ ಛಾವಣಿಯು ಆಳವಾಗಿದ್ದು ಎರಡು ಮೂಲೆಗಳಲ್ಲಿ ಉನ್ನತವಾಗಿದೆ. ಪ್ರವೇಶದ್ವಾರದಲ್ಲಿ ಮರದಿಂದ ಮಾಡಿದ ಬಾಗಿಲು ಇದ್ದು ಇದನ್ನು ಅತ್ಯಂತ ಕಲಾತ್ಮಕ ಕೆತ್ತನೆಯಿಂದ ಕೆತ್ತಲಾಗಿದೆ. ಬಾಗಿಲ ಮೇಲಿನ ಭಾಗದಲ್ಲಿ ನಾಲ್ಕು ಗಿಳಿಗಳ ಚಿತ್ರಗಳ ಕೆತ್ತನೆ ಇರುವುದು. ನಾಲ್ಕು ಗಿಳಿಗಳು ಒಂದಕ್ಕೊಂದು ತಲೆಯನ್ನು ಬಂದಿಸಿದಂತೆ ಕಂಡುಬಂದಿದ್ದು, ಹೊಯ್ಸಳರ ಕಾಲದ್ದಾಗಿರುವುದಾಗಿದೆ. ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳ್ಳುಳ್ಳ ಶೈವ ದ್ವಾರಪಾಲಕರ ಮೂರ್ತಿಶಿಲ್ಪಗಳಿವೆ.

ಮೂಲ ದೇವಾಲಯವು ಒಟ್ಟು ಎಂಬತ್ತೊಂದು ಸ್ಥಂಭಗಳನ್ನು ಹೊಂದಿದೆ. ಗರ್ಭಗೃಹಕ್ಕೆ ನೇರವಾಗಿ ಒಂದು ಅಲಂಕೃತ ಕೆತ್ತನೆಯಿಂದ ಕೂಡಿದ ಕಿಂಡಿ ಇರುವುದು. ಇದನ್ನು ಸಿಡಿಲು ಕಿಂಡಿ ಎಂದು ಕರೆಯುವರು. ಇಲ್ಲಿಯೇ ನಂದಿಯ ವಿಗ್ರಹವನ್ನು ಗರ್ಭಗೃಹಕ್ಕೆ ನೇರವಾಗಿ ಇಡಲಾಗಿದೆ. ಇದರ ತಳಭಾಗದಲ್ಲಿ ಐದು ವಿವಿಧ ರೀತಿಯ ನಾಗಶಿಲ್ಪ ಮೂರ್ತಿಗಳನ್ನು ಮತ್ತೆರೆಡು ಅಸ್ಪಷ್ಟ ಮೂರ್ತಿಗಳನ್ನು ಇಡಲಾಗಿದೆ. ಈ ಕಿಟಕಿಯಿಂದಲೇ ಸೂರ್ಯನ ಬೆಳಕು ದೇವಾಲಯಕ್ಕೆ ಪ್ರವೇಶವಾಗಬೇಕಾಗಿರುವುದು. ಕಿಟಕಿಯಲ್ಲಿ ಹದಿನೈದು ಸಣ್ಣ ಸಣ್ಣ ಕಿಂಡಿಗಳರುವುದು. ಇದನ್ನು ಅಧಿಷ್ಠಾನ ಸ್ಥಂಭದ ಮೇಲೆ ಮತ್ತು ಬಿತ್ತಿಯೊಂದಿಗೆ ಸೇರಿಸಿ ಇಡಲಾಗಿದೆ. ಇದರ ಮುಂದೆ ಹಸ್ತ ಕಂಬವಿದ್ದು ಪೀಠದ ಮೇಲೆ ನರ್ತಿಸುತ್ತಿರುವ ಚಿತ್ರವಿದೆ.

ಸಿಡಿಲು ಕಿಂಡಿಗೆ ಒಂದು ಐತಿಹ್ಯವಿದೆ. ಇದರ ಪ್ರಕಾರ ಒಬ್ಬ ಗಂಧರ್ವ ಮಹಾಭಾರತ ಯುದ್ಧ ಸಂದರ್ಭವನ್ನು ಭೀಷ್ಮಾಚಾರ್ಯರ ಮರಣವನ್ನು ಉದ್ಘೋಷಿಸಿದನು. ಮತ್ತು ಆ ಸಂದರ್ಭದಲ್ಲಿ ಸಿಡಿಲಾಗು ಎಂದು ಶಾಪಗ್ರಸ್ತನಾದನು. ಆತನ ಅಣತಿಯ ಮೇರೆಗೆ ಮಲ್ಲಿಕಾರ್ಜುನ ದೇವರ ಸೇವೆಯನ್ನು ಮಾಡಿದರೆ ಶಾಪ ವಿಮೋಚನೆಯಾಗುತ್ತದೆ ಎಂದು ತಿಳಿದು ಅದೇ

ರೀತಿಯಲ್ಲಿ ಪೂಜೆಯನ್ನು ಮಾಡುವನು. ಈ ಪದ್ಧತಿಯನ್ನು ಎರಡು ಅಥವಾ ಮೂರು ವರ್ಷಕ್ಕೆ ಒಂದು ಬಾರಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಭೂಕಂಪಿಸುವುದು ಅಲ್ಲಿರುವ ದೀಪಗಳು ನಂದುವುದು, ಮತ್ತು ಪುರೋಹಿತನು ಪುರೋಹಿತ ಕಾರ್ಯದಲ್ಲಿ ತೊಡಗಿದ್ದರೆ ಜ್ಞಾನತಪ್ಪಿ ಬೀಳುವಂಥಹ ಅನಾಹುತಗಳು ನಡೆಯುತ್ತವೆ. ಇದರಿಂದ ಈ ಪೂಜೆಯನ್ನು ಶಾಂತಿಪೂಜೆ ಅಥವಾ ಶುದ್ಧಿ ಕ್ರಿಯೆಯೆಂದು ಕರೆಯುವರು.

ಶಿವಲಿಂಗಕ್ಕೆ ನೇರವಾಗಿ ಒಂದು ಬೃಹತ್ ಬಂಡೆಯ ಮೇಲೆ ನಂದಿಸ್ಥಂಭವಿದೆ. ಇದು ಹದಿನೈದು ಅಡಿ ಎತ್ತರವಾಗಿದ್ದು ಇದರ ಮೇಲೆ ನಂದಿಯ ಮೂರ್ತಿ ಇರುವುದು. ಕಂಬವು ಸಿಲಿಂಡರಿನ ಆಕೃತಿಯಲ್ಲಿದೆ. ಇದರ ತಳಭಾಗದಲ್ಲಿ ಗಂಗಾಧರಯ್ಯ ಎಂದು ಕೊರೆಯಲಾಗಿದೆ. ಅಲ್ಲದೇ ಭಕ್ತನು ಭಕುತಿಯಿಂದ ನಮಿಸುತ್ತಿರುವುದಾಗಿದೆ. ಇದನ್ನು ಮೂಡಲ ಕಮರಿಬಸವನೆಂದು ಕರೆಯುತ್ತಾರೆ. ಇದರ ಉತ್ತರ ದಿಕ್ಕಿನಲ್ಲಿ ಇನ್ನೊಂದು ನಂದಿ ಸ್ಥಂಭವಿದೆ. ಆದರೆ ಇಂದು ನಂದಿಯ ಮೂರ್ತಿ ಕೆಳಗೆ ಬಿದ್ದಿದೆ.

ಯುಗಾಂತರ ಶಾಸನಶಿಲ್ಪ:

ಈ ಶಾಸನಶಿಲ್ಪವು ಸಿಡಿಲು ಕಿಂಡಿಯ ಸಮೀಪವಿದ್ದು, ಪೂರ್ವದ ಗೋಡೆಯಲ್ಲಿ ಕೆತ್ತಿ ನಿಲ್ಲಿಸಲಾಗಿದೆ. ಶಾಸನ ಶಿಲ್ಪವು ನಾಲ್ಕು ವಿಭಾಗಗಳನ್ನು ಒಳಗೊಂಡಿದ್ದು ಪ್ರತಿಯೊಂದು ವಿಭಾಗದಲ್ಲಿ ಲಿಂಗ ಮತ್ತು ನಂದಿಯ ಶಿಲ್ಪವಿದೆ. ಎಲ್ಲಾ ವಿಭಾಗದಲ್ಲಿ ನಾಲ್ಕು ಕೈಗಳುಳ್ಳ ಮೂರ್ತಿ ಎರಡು ಕೈಗಳುಳ್ಳ ಪುರುಷ ಮೃಗನ ಮೂರ್ತಿ ಶಿಲ್ಪವಿದೆ. ನಾಲ್ಕನೆಯ ವಿಭಾಗದಲ್ಲಿ ಲಿಂಗಕ್ಕೆ ಹಾಲನ್ನೆರೆಯುತ್ತಿರುವ ದೊಡ್ಡ ಆಕಳಿನ ಉಬ್ಬುಶಿಲ್ಪವಿದೆ. ಇದರ ತಳದಲ್ಲಿ ಕೈಮುಗಿದು ನಿಂತಿರುವ ಪುರುಷನ ಚಿತ್ರವಿದೆ. ಈ ಶಿಲೆಯನ್ನು ಬಲಭಾಗದಲ್ಲಿ ಎರಡು ಲಂಭ ಸರಳ ಕಂಭಗಳೊಂದಿಗೆ ಮೇಲೆ ಒಂದು ಕಂಬವನ್ನು ಜೋಡಿಸುವುದರ ಮೂಲಕ ನಿಲ್ಲಿಸಲಾಗಿದೆ. ಇದರ ಮುಂದೆ ನಂದಿಮೂರ್ತಿ ಶಿಲ್ಪವಿದೆ. ಇದಕ್ಕೊಂದು ಶಾಸನವಿದ್ದು ಈ ರೀತಿಯಲ್ಲಿದೆ. "ಕೃತಯುಗದಲ್ಲಿ ದೇವತೆ, ಋಷಿಗಳಿಂದಲೂ, ತ್ರೇತಾಯುಗದಲ್ಲಿ ನಾಗಾರ್ಜುನನಿಂದಲೂ, ದ್ವಾಪರಯುಗದಲ್ಲಿ ಪುರುಷಮೃಗನಿಂದಲೂ ಮತ್ತು ಮಿಂಚಿನಿಂದಲೂ ಹಾಗೇ ಕಲಿಯುಗದಲ್ಲಿ ಆಕಳಿನಿಂದಲೂ ಪೂಜಿತನಾದ ಅನ್ನದಾನಿ ಮಲ್ಲಿಕಾರ್ಜುನವನು. ಶಾಸನ ಶಿಲೆಯನ್ನು ಮಲ್ಲಿಕಾರ್ಜುನನ ಭಕ್ತನಾದ ಸೋಸಲೆಯ ಚೆನ್ನವೀರಗೌಡನ ಪುತ್ರನಾದ ಗಂಗಾಧರಯ್ಯ ಕೆತ್ತಿಸಿದನೆಂದು" ಇದರಿಂದ ತಿಳಿದುಬಂದಿದೆ.

ಮೂಲಗರ್ಭಗೃಹದ ಪಶ್ಚಿಮಕ್ಕೆ ಭ್ರಮರಾಂಭಿಕೆಯ ಗರ್ಭಗೃಹವಿದೆ. ಇದು ಗರ್ಭಗೃಹ, ಅಂತರಾಳ ಮತ್ತು ಸಭಾ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಉದ್ದದ ದೇವಿ ಮೂರ್ತಿ ಇದೆ. ಇದು ಚೌಕಕಾರದಲಿದ್ದು, ಗರ್ಭ ಗೃಹದ ಮೇಲಿನ ಭಾಗ

ಪುಷ್ಪಲಂಕರಾದ ಭುವನೇಶ್ವರಿಯು ಇರುವುದು. ಇದರ ಮೇಲೆ ಚಿಕ್ಕದಾದ ಗೋಪುರವಿದ್ದು ಗಾರೆಯಿಂದ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಬೇರೆ ಯಾವುದೇ ಕೆತ್ತನೆ ಇರುವುದಿಲ್ಲ. ಬಾಗಿಲು ವಾಡವು ಸರಳವಾಗಿದ್ದು ಲಲಾಟ ಬಿಂಬದಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ.

ಗರ್ಭಗೃಹದ ನಂತರದಲ್ಲಿ ಅಂತರಾಳವಿದ್ದು ಅಂತರಾಳವು ಆಯತಕಾರದಲ್ಲಿದೆ. ಯಾವುದೇ ಕೆತ್ತನೆ, ಶಿಲ್ಪಗಳು ಇರುವುದಿಲ್ಲ. ಇದರ ಬಾಗಿಲುವಾಡವು ಅಲಂಕಾರಿಕವಾಗಿದ್ದು ಲಲಾಟಬಿಂಬದ ಮೇಲೆ ಶಿವಲಿಂಗ ಮತ್ತು ನಂದಿಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ತಳಭಾಗ ಮತ್ತು ಪದ್ಮಪಾದವು ಪುಷ್ಪಲಂಕಾರದ ಕೆತ್ತನೆಯನ್ನು ಹೊಂದಿದೆ. ಇದರ ಮುಂದೆ ನೇರವಾಗಿ ಉತ್ತರ ದಿಕ್ಕಿನಿಂದ ದೇವಾಲಯಕ್ಕೆ ಪ್ರವೇಶದ್ವಾರವಿದೆ. ಇಲ್ಲಿ ಸ್ಥಂಬಗಳ ಸಾಲುಗಳು ಇರುವುದು. ಇದರ ಪ್ರವೇಶದ್ವಾರದ ಉತ್ತರ ದಿಕ್ಕಿನಲ್ಲಿ ಒಂದು ಶಾಸನವಿದೆ. ಅಲ್ಲಿರುವ ಶಾಸನವು ಅಸ್ಪಷ್ಟವಾಗಿದ್ದು, ಶಾಸನದ ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬುಶಿಲ್ಪವಿದೆ. ಭ್ರಮರಂಭಿಕೆ ದೇವಾಲಯದ ಎಡಭಾಗದಲ್ಲಿ ಒಂದೂವರೆ ಅಡಿ ಎತ್ತರದ ಜಗುಲಿಯ ಮೇಲೆ ವಿಶಾಲ ಸಭಾ ಮಂಟಪವಿದೆ. ಈ ದೇವಾಲಯದಲ್ಲಿ ಒಟ್ಟು ತೊಂಬತ್ತೆರೆಡು ಮೂಲಸ್ಥಂಭಗಳಿದ್ದವು. ಇಲ್ಲಿಯ ಸ್ಥಂಬಗಳು ಚಚ್ಚೌಕಾರದಲ್ಲಿದ್ದು ವಿಜಯನಗರ ಶೈಲಿಯ ಲಕ್ಷಣಗಳನ್ನು ಹೊಂದಿದೆ. ಇದೊಂದು ವಿಶಾಲ ಪೂಜಾಕಾರ್ಯದ, ವಿವಾಹ ಸಭಾಮಂಟಪವೆಂದು ಹೇಳಬಹುದಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಪ್ರವೇಶದ್ವಾರ ಬಲಭಾಗದಲ್ಲಿ ಸಣ್ಣದೊಂದು ಕೊಠಡಿ ಇದೆ. ಇಲ್ಲಿಯ ಸ್ಥಂಬಗಳು ಚೌಕಕಾರದಲ್ಲಿದ್ದು ನಂತರ ಎಂಟು ಮುಖಗಳನ್ನು ಹೊಂದಿರುವುದು.

ದೇವಾಲಯದಲ್ಲಿ ಒಟ್ಟು ಮೂಲ ೧೭೩ ಸ್ಥಂಬಗಳಿದ್ದು ಹಲವು ಸ್ಥಂಭಗಳು ಬಿದ್ದುಹೋಗಿವೆ. ಸ್ಥಂಬಗಳ ಪ್ರಮುಖ ಉದ್ದೇಶವೆಂದರೆ ದೇವಾಲಯದ ಮೇಲ್ಚಾವಣೆಯನ್ನು ಹೊತ್ತು ನಿಂತಿರುವುದು ಮತ್ತು ದೇವಾಲಯದ ಅಲಂಕಾರವನ್ನು ವೃದ್ಧಿಸುವುದಾಗಿದೆ.

ದೇವಾಲಯದ ಬಿತ್ತಿಯು ಚಪ್ಪಡಿ ಕಲ್ಲುಗಳಿಂದ ಕೂಡಿದ್ದು, ಚಪ್ಪಡಿ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಲಾಗಿದೆ. ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸಿರುವುದಿಲ್ಲ. ಮೂಲ ದೇವಾಲಯದ ಪೂರ್ವ ದಿಕ್ಕಿಗೆ ಒಂದು ಅಡುಗೆ ಮನೆಯಿರುವುದು. ಅಡುಗೆ ಮನೆಯಲ್ಲಿ ಒಂದು ಹಿತ್ತಾಳೆ ಪಾತ್ರೆ, ಬಿಂದಿಗೆ, ಕಡಾಯಿ ಇರುವುದು. ಕಂಚಿನ ಬಿಂದಿಗೆಯನ್ನು ಮಲ್ಲಿಕಾರ್ಜುನ ದೇವರಿಗೆ ಯಡೆತೊರೆಯ ಶಾನುಭೋಗರ ಮಗಳು ಅನ್ನಪೂರ್ಣಮ್ಮ ನೀಡಿರುವ ಉಡುಗೊರೆಯಾಗಿದೆ. ಅಡುಗೆ ಮನೆಯ ಬಿತ್ತಿಯಲ್ಲಿ ಉದ್ದನೆಯ ಸರ್ಪ, ಆಮೆ, ಉಬ್ಬು ಶಿಲ್ಪವಿದೆ. ಇದರ ಸಮೀಪದಲ್ಲಿ ಒಂದು ದೊಡ್ಡ ಶಾಸನವಿದ್ದು ಇಂದು ಬಹುತೇಕ ಅಸ್ಪಷ್ಟವಾಗಿದೆ. ಬೆಟ್ಟದ ತುಂಗಕ್ಕಿರುವ ಮೆಟ್ಟಿಲುಗಳ ದ್ವಾರ ಅಥವಾ ರಾಜಬಾಗಿಲಿನ ಸ್ಥಂಬಗಳು ಅಲಂಕಾರವನ್ನು ಹೊಂದಿವೆ. ಇದರ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರು ನಿಂತಿದ್ದಾರೆ.

ಇಲ್ಲಿಯ ಸ್ಥಂಬಗಳು ಅತ್ಯಂತ ಬಲಿಷ್ಟವಾಗಿದ್ದು ಪೀಠವಿಲ್ಲದೆ ನಿಂತಿವೆ. ಇವುಗಳ ಬೋದಿಗೆಯು ಉನ್ನತ ಮಟ್ಟದಾಗಿದ್ದು, ಒಂದು ನಂದಿಯ ಮೂರ್ತಿ ಶಿಲ್ಪವಿದೆ.

ದೇವಾಲಯದ ಸುತ್ತಲೂ ವಿವಿಧ ಗಾತ್ರದ ನಂದಿಯ ಮೂರ್ತಿ ಶಿಲ್ಪಗಳಿವೆ. ಈ ದೇವಾಲಯಕ್ಕೆ ಪ್ರಮುಖ ಹೆಬ್ಬಾಗಿಲಿದ್ದು, ಮಂಟಪವನ್ನು ಹೊಂದಿದೆ. ೪ + ೪ = ೮ ಸ್ಥಂಬಗಳನ್ನು ಒಳಗೊಂಡಿವೆ. ಇವುಗಳ ಮೇಲೆ ಬಿತ್ತಿ, ನಂತರ ಕಲ್ಲು ಚಪ್ಪಡಿಗಳನ್ನು ಸೇರಿಸಿ ಇಟ್ಟಿಗೆಯಿಂದ ಕಟ್ಟಿಲ್ಪಟ್ಟಿರುವುದಾಗಿದೆ. ಇಲ್ಲಿಯ ಪ್ರವೇಶದ್ವಾರವು ಸುಂದರ ಕಲಾತ್ಮಕ ಕೆತ್ತನೆಯಿಂದ ಕೂಡಿದೆ. ದೇವಾಲಯ ಒಳಭಾಗ ಮತ್ತು ಹೊರಭಾಗದಲ್ಲಿ ಹಲವು ಅವಶೇಷಗಳು ಬಿದ್ದಿರುವುದು. ದೇವಾಲಯದ ಸುತ್ತ ಇಟ್ಟಿಗೆ ಗೋಡೆಗಳಿಂದ ಸುತ್ತುವರಿದ್ದಾಗಿದೆ. ಈ ಗೋಡೆಯ ತಳಭಾಗದಲ್ಲಿ ಕಲ್ಲುಗಳ ಅದಿಷ್ಠಾನವಿರುವುದು. ಕೆಲವು ಭಾಗಗಳಲ್ಲಿ ಗೋಡೆಗಳು ಬಿದ್ದುಹೋಗಿದ್ದು ಕಲ್ಲಿನ ಅದಿಷ್ಠಾನ ಮಾತ್ರವಿದೆ.

ವೀರಭದ್ರ ದೇವಾಲಯ:

ವೀರಭದ್ರ ದೇವಾಲಯವು ಬೆಟ್ಟದಪುರ ಬೆಟ್ಟದ ಮೇಲೆ ಶಿಖರದ ಸಮೀಪದಲ್ಲಿರುವುದು. ಮೆಟ್ಟಿಲುಗಳನ್ನು ಏರುತ್ತಾ ಹೋದಲ್ಲಿ ಬಲಭಾಗಕ್ಕೆ ಕಾಣುವುದಾದು. ದೇವಾಲಯವು ಪೂರ್ವಾಭಿಮುಖವಾಗಿದ್ದು ಇದರ ಎದುರಿಗೆ ಪ್ರಸಿದ್ಧವಾದ ಸಿಡ್ಲುಮಲ್ಲಿಕಾರ್ಜುನ ದೇವಾಲಯವಿದ್ದು ಇಲ್ಲಿನ ಬಹುಪಾಲು ದೇವಾಲಯಗಳಂತೆ ಇದು ಸಹ ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದೆ. ಇದನ್ನು ಸಂಪೂರ್ಣ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯವು ಅದಿಷ್ಠಾನ ರಹಿತ ದೇವಾಲಯಗಳ ಭೂ ವಿನ್ಯಾಸದ ಸಮಾನಾಂತರದಲ್ಲಿ ಅಧಿಷ್ಠಾನ ಸಹಿತ ದೇವಾಲಯಗಳನ್ನೇ ಅನುಸರಿಸಿದೆ. ದೇವಾಲಯದ ಪ್ರದೇಶವನ್ನು ಕಾಡುಗಲ್ಲುಗಳನ್ನು ಉಪಯೋಗಿಸಿ ಸಮತಟ್ಟು ಪ್ರದೇಶದ ಮೇಲೆ ನಿರ್ಮಿಸಲಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹ, ಚಿಕ್ಕ ಅಂತರಾಳ, ನವರಂಗಗಳನ್ನು ಒಳಗೊಂಡಿರುವುದು. ಆದರೆ ವಾಸ್ತುಗ್ರಂಥಗಳಲ್ಲಿ ಹೇಳಿರುವಂತೆ ಲಕ್ಷಣಗಳನ್ನು ಹೊಂದಿರುವುದಿಲ್ಲ. ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳಿಂದ ಗೋಡೆಯನ್ನು ನಿರ್ಮಿಸಿರುವರು. ಬಿತ್ತಿಯನ್ನು ಒಂದರ ಮೇಲೊಂದು ಚಪ್ಪಡಿ ಕಲ್ಲನ್ನು ಜೋಡಿಸಿರುವುದರ ಮೂಲಕ ನಿರ್ಮಿಸಲಾಗಿದೆ. ಕಲ್ಲುಗಳನ್ನು ಜೋಡಿಸಲು ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸಿಲ್ಲ. ಚಾವಣಿಯನ್ನು ಮುಚ್ಚಲು ಕಲ್ಲುಚಪ್ಪಡಿಗಳನ್ನು ಉಪಯೋಗಿಸುವುದರ ಮೂಲಕ ಗಾರೆಯನ್ನು ಉಪಯೋಗಿಸಿದ್ದಾರೆ. ದೇವಾಲಯದ ಒಳಕ್ಕೆ ಬೆಳಕು ಬೀಳಲು ಜಾಲಂದ್ರವು ಇರುವುದೂ ಆದರೂ ದೇವಾಲಯದ ಒಳಭಾಗವು ಕತ್ತಲೆಯಿಂದ ಕೂಡಿದೆ. ದೇವಾಲಯಕ್ಕೆ ಒಳಪ್ರವೇಶ ಮಾಡಿದ ವೇಳೆಯಲ್ಲಿ ಭಯದ ವಾತವರಣವಿದ್ದು ಗರ್ಭಗೃಹದಲ್ಲಿ ವೀರಭದ್ರನ ವಿಗ್ರಹವಿರುವುದು. ಗರ್ಭಗೃದ ಬಾಗಿಲುವಾಡದ ಬಳಿ ಯಾವುದೇ ರೀತಿಯ ಶಿಲ್ಪಗಳಿಲ್ಲದೆ

ಸರಳತೆಯಿಂದ ಕೂಡಿದೆ. ಬಾಗಿಲುವಾಡದ ಮೇಲೆ ಲಾಲಟಬಿಂಬದಲ್ಲಿ ಯಾವುದೇ ಕೆತ್ತನೆ ಇರುವುದಿಲ್ಲ. ಗರ್ಭಗೃಹದ ಮೇಲೆ ಗೋಪುರವಿದ್ದು ದ್ರಾವಿಡ ಶೈಲಿಯನ್ನು ಹೊಂದಿರುವುದು ಅಲ್ಲದೇ ಸರಳತೆಯ ಭುವನೇಶ್ವರಿಯನ್ನು ಹೊಂದಿರುವುದು.

ಅಂತರಾಳ:

ಗರ್ಭಗೃಹ ನಂತರ ಅಂತರಾಳದ ದ್ವಾರವೂ ಅತ್ಯಂತ ಸರಳತೆಯಿಂದ ಕೂಡಿದ್ದು ಮೂರು ಅಡಿ ಎತ್ತರದ ಬಸವನ ಮೂರ್ತಿ ಇರುವುದು. ಬಸವನ ಮೂರ್ತಿಯು ಅತ್ಯಂತ ಸುಂದರವಾಗಿದ್ದು ಕಪ್ಪುಶಿಲೆಯಿಂದ ನಿರ್ಮಿತಗೊಂಡು ಮಲಗಿರುವ ವ್ಯವಸ್ಥೆಯಲ್ಲಿದೆ. ಹಾರ, ಗಂಟೆ ಮತ್ತು ದಾರದಿಂದ ಕೂಡಿದ್ದು ಕೊರಳಿನ ಸುತ್ತ ಅಲಂಕಾರವಿದೆ. ಈ ವಿಗ್ರಹವು ನೋಡುಗರನ್ನು ಹೆಚ್ಚು ಆಕರ್ಷಿಸುತ್ತದೆ. ಅಂತರಾಳವು ವಿಶಾಲವಾಗಿರುವುದಿಲ್ಲ.

ನವರಂಗ: ನವರಂಗ ಮಂಟಪವು ಗರ್ಭಗೃಹ ಮತ್ತು ಅಂತರಾಳ ಮಂಟಪಗಳೆರಡಕ್ಕಿಂತಲೂ ವಿಶಾಲವಾಗಿರುತ್ತದೆ. ಈ ನವರಂಗದ ವೈಶಾಲಕ್ಕೆ ತಕ್ಕಂತೆ ಇದರ ಮಧ್ಯ, ಎಡ ಮತ್ತು ಬಲಭಾಗವನ್ನು ಒಳಗೊಂಡಂತೆ ಹದಿನಾಲ್ಕು ಸ್ಥಂಬಗಳಿರುವುದು. ನವರಂಗವು ಬಿತ್ತಿಯನ್ನು ಒಳಗೊಂಡಂತೆ ಕಂಡುಬರುವುದಲ್ಲದೇ ಇದರಲ್ಲಿ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರದೆ ಸರಳತೆಯಿಂದ ಇರುವುದು. ದೇವಾಲಯದ ನವರಂಗದ ನಂತರ ಪ್ರಾಂಗಣ ಅಥವಾ ಜಗುಲಿ ಕಂಡುಬಂದು ಪ್ರವೇಶದ್ವಾರವನ್ನು ಒಳಗೊಂಡಿರುವುದು. ದೇವಾಲಯದಲ್ಲಿ ಒಟ್ಟು ಇಪ್ಪತ್ತಾರು ಸ್ಥಂಬಗಳು ಕಂಡುಬರುತ್ತವೆ. ಸ್ಥಂಬಗಳು ಚೌಕಕಾರದ ಅಲಂಕಾರವನ್ನು ಒಳಗೊಂಡಿದ್ದು ಏಳು ಅಡಿ ಎತ್ತರವಿದ್ದು, ಸ್ಥಂಬಗಳ ಮೇಲೆ ಯಾವುದೇ ರೀರಿತಯ ಉಬ್ಬುಶಿಲ್ಪಗಳು ಕಂಡುಬರುವುದಿಲ್ಲ. ಪ್ರವೇಶ ದ್ವಾರದ ಲಲಾಟಬಿಂಬದಲ್ಲಿ ನಂದಿಯ ಶಿಲ್ಪವಿರುವುದು. ಗರ್ಭಗೃಹಕ್ಕೆ ನೇರವಾಗಿ ಗರುಡಸ್ಥಂಬವಿದ್ದು ಇದರಲ್ಲಿ ನಂದಿಯ ಶಿಲ್ಪವಿದೆ. ಈ ಸ್ಥಂಬದಲ್ಲಿ ಭಕ್ತನು ಭಕುತಿಯಿಂದ ನಮಿಸುತ್ತಿರುವ ಶಿಲ್ಪವಿರುವುದು. ದೇವಾಲಯದ ಎಡಭಾಗದಲ್ಲಿ ಒಂದು ಮಂಟಪವಿದೆ. ಮತ್ತು ಬಲಭಾಗದಲ್ಲಿ ಹಲವು ಸ್ಥಂಬಗಳುಳ್ಳ ಅವಶೇಷಗಳು ಕಂಡುಬರುತ್ತವೆ. ಇದರಿಂದ ದೇವಾಲಯದ ನಿರ್ಮಾಣ ಕಾರ್ಯವು ಪೂರ್ಣಗೊಂಡಿಲ್ಲವೆಂದು ಹೇಳಬಹುದು. ಈ ದೇವಾಲಯಗಳಲ್ಲಿ ಬಳಸಿರುವ ಸ್ಥಂಬಗಳು ಬಹುತೇಕ ಚೌಕಕಾರವನ್ನು ಹೊಂದಿದ್ದು ಅವುಗಳ ಮೇಲೆ ಯಾವುದೇ ರೀತಿಯ ಅಲಂಕಾರವಾಗಲಿ, ಕೆತ್ತನೆಯಾಗಲಿ ಕಂಡುಬರುವುದಿಲ್ಲ. ಹೊರಗೋಡೆಯಿಂದ ಹಾದು ಬಂದಿರುವ ತೊಲೆಯ ಬಾರವನ್ನು ಹೋರುವುದೇ ಈ ಸ್ಥಂಬಗಳ ಏಕೈಕ ಉದ್ದೇಶ. ಈ ಕಂಬಗಳ ಕೆಳಗೆ ಪೀಠವಿರುವುದಿಲ್ಲ. ದೇವಾಲಯ ಹದಿನಾರನೇ ಶತಮಾನದ ಕಾಲದಲ್ಲಿ ನಿರ್ಮಾಣಗೊಂಡಿದ್ದು ಇಂದು ಅವನತಿಯತ್ತ ಸಾಗುತ್ತಿದೆ.

ಏಣಿ ಹನುಮಂತ ದೇವಾಲಯ:

ಬೆಟ್ಟದಪುರ ದೊಡ್ಡ ಬೆಟ್ಟದ ಇಳಿಜಾರಿನ ಪಶ್ಚಿಮ ದಿಕ್ಕಿನಲ್ಲಿ ಆಂಜನೇಯ ದೇವಾಲಯವಿದೆ. ದೇವಾಲಯ ಗ್ರಾಮದ ಆಗ್ನೇಯ ದಿಕ್ಕಿನಲ್ಲಿದ್ದು ಉತ್ತರಾಭಿಮುಖವಾಗಿದ್ದು ವೈಷ್ಣವ ದೇವಾಲಯವಾಗಿದೆ. ಇದರ ತಳವಿನ್ಯಾಸವು ಚೌಕಕಾರಗಳಾಗಿದ್ದು ಗರ್ಭಗೃಹ ಮತ್ತು ತೆರದ ಮಂಟಪವನ್ನು ಮಾತ್ರ ಹೊಂದಿದೆ. ಹಿಂದೆ ಈ ಪ್ರದೇಶವು ಕೊಪ್ಪಳ ಎಂದು ಕರೆಯಲ್ಪಟ್ಟ ಸಣ್ಣ ಹಳ್ಳಿಯಾಗಿತ್ತೆಂದು ಕಂಡುಬಂದಿದೆ. ಇದು ಸಣ್ಣ ಗುಡಿಸಲಿನಂತಿದ್ದು ದೇವಾಲಯದ ವಾಸ್ತು ಹಾಗೂ ಪುರಾತತ್ವದ ದೃಷ್ಟಿಯಿಂದ ಅಂತಹ ಮಹತ್ವವನ್ನು ಹೊಂದಿರುವುದಿಲ್ಲ. ದೇವಾಲಯಕ್ಕೆ ಭಕ್ತರು ಆಗಮಿಸಲು ಉತ್ತರದಿಕ್ಕಿನಿಂದ ಪ್ರಾಚೀನ ಕಾಲದ ಮೆಟ್ಟಿಲುಗಳಿದ್ದು ಭಕ್ತರಿಂದ ಕಟ್ಟಲ್ಪಟ್ಟಿದೆ.

ಇಂದು ಭಕ್ತರು ಹನುಮಂತನ ಗುಡಿಗೆ ಆಧುನಿಕ ದೇವಾಲಯವನ್ನು ನಿರ್ಮಿಸಿದ್ದು, ಇದರ ಸುತ್ತಲು ಕಲ್ಲಿನಿಂದ ಗೋಡೆಯನ್ನು ನಿರ್ಮಿಸಿರುವರು. ಯಾವುದೇ ರೀತಿಯ ಭುವನೇಶ್ವರಿ ಮತ್ತು ಗೋಪುರವಿರುವುದಿಲ್ಲ. ಇದೊಂದು ಸರಳ ರೀತಿಯ ಗೋಡೆಯಾಗಿದೆ. ಆದರೆ ಇಂದು ದೇವಾಲಯವು ವಿಶಾಲವಾಗಿದ್ದು, ಗರ್ಭಗೃಹಕ್ಕೆ ನೇರವಾಗಿ ಗರುಡ ಸ್ಥಂಬ ಮತ್ತು ಬಲಿಕಂಬವಿದೆ. ದೇವಾಲಯದ ಮುಂಭಾಗದಲ್ಲಿ ಸಿದ್ದಿ ವಿನಾಯಕ ಮೂರ್ತಿಯಿದ್ದು ಇದರ ಬಲ ಮತ್ತು ಎಡಭಾಗದಲ್ಲಿ ಸಿದ್ದಿ ಬುದ್ದಿಯ ವಿಗ್ರಹಗಳನ್ನು ಕೆತ್ತಿರುವುದಾಗಿದೆ.

ಪಾಳು ಬಿದ್ದ ಶೈವ ದೇವಾಲಯ

ಶೈವ ದೇವಾಲಯವು ಬೆಟ್ಟದಪುರ ಬೆಟ್ಟದ ಪಶ್ಚಿಮ ಭಾಗದ ತಳಭಾಗದಲ್ಲಿದ್ದು ಕಲ್ಯಾಣಿಘಟ್ಟ ಕೊಳದ ಎಡಭಾಗದಲ್ಲಿರುವುದು. ಈ ದೇವಾಲಯವು ಪೂರ್ವಾಭಿಮುಖವಾಗಿ ಇದೆ. ಇದರ ತಳವಿನ್ಯಾಸ ಆಯತಕಾರದಲ್ಲಿದ್ದು ಗರ್ಭಗೃಹ ಮತ್ತು ಅಂತರಾಳವನ್ನು ಹೊಂದಿದ್ದು, ಅಧಿಷ್ಠಾನದ ಮೇಲ್ಭಾಗದಲ್ಲಿ ನಿರ್ಮಾಣಗೊಂಡಿರುವುದು, ಆದರೆ ಇಂದು ಅಧಿಷ್ಠಾನವು ಮಣ್ಣಿನಿಂದ ಸ್ವಲ್ಪ ಪ್ರಮಾಣ ಮುಚ್ಚಲ್ಪಟ್ಟಿದೆ. ಗೋಡೆಯು ಇಟ್ಟಿಗೆಯಿಂದ ಕಟ್ಟಲ್ಪಟ್ಟಿದೆ ಮತ್ತು ದೇವಾಲಯದ ಮೇಲ್ಛಾವಣೆಯನ್ನು ಚಪ್ಪಡಿ ಗಾರೆಯನ್ನು ಉಪಯೋಗಿಸುವುದರ ಮೂಲಕ ನಿರ್ಮಾಣಗೊಂಡಿದೆ. ದೇವಾಲಯದ ಮೇಲೆ ನಾಲ್ಕು ದಿಕ್ಕಿಗೂ ಜೋಡಿ ಬಸವನ ವಿಗ್ರಹಗಳು ಇರುವುದು.

ಗರ್ಭಗೃಹ:

ಶೈವ ದೇವಾಲಯವು ಗರ್ಭಗೃಹವನ್ನು ಒಳಗೊಂಡಿದ್ದು ಆಯತಕಾರದಲ್ಲಿದೆ. ಗರ್ಭಗೃಹದ ಮೇಲೆ ಭುವನೇಶ್ವರಿ ಮತ್ತು ಯಾವುದೇ ರೀತಿಯ ಗೋಪುರವಿರುವುದಿಲ್ಲ. ಗರ್ಭಗೃಹ ಅಂತರಾಳದ ನಡುವೇ ಕಲ್ಲು ಚಪ್ಪಡಿಗಳ ಬಿತ್ತಿ ಇರುವುದು. ಈ ಬಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲದೆ ಸರಳ ರೀತಿಯಲ್ಲಿರುವುದು. ಗರ್ಭಗೃಹದ ಬಾಗಿಲುವಾಡವು ಅಲಂಕೃತದಿಂದ

ಕೂಡಿದ್ದು ಸುಂದರವಾಗಿ ಕಾಣುತ್ತದೆ. ಲಾಲಟಬಿಂಬದ ಮೇಲೆ ಶಿವಲಿಂಗ ಮತ್ತು ಹಸುವಿನ ಉಬ್ಬುಶಿಲ್ಪವಿರುವುದು. ಗರ್ಭಗೃಹದ ಪ್ರವೇಶ ದ್ವಾರದಲ್ಲಿ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಎಡಭಾಗದ ದ್ವಾರಪಾಲಕನಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ಗದೆಯನ್ನು ಕೆಳಕ್ಕೆ ಹಿಡಿದು ನಿಂತಿರುವುದು ಮತ್ತೊಂದು ಕೈಯಲ್ಲಿ ತ್ರಿಸೂಲವಿರುವುದು. ಎಡಗೈಯಲ್ಲಿ ತ್ರಿಸೂಲ ಮತ್ತು ತೋರು ಹಸ್ತವಿದೆ. ಈ ದ್ವಾರಪಾಲಕನು ಪೀಠದ ಮೇಲೆ ನಿಂತಿದ್ದು ಆಭರಣಗಳಿಂದ ಅಲಂಕೃತವಾಗಿದ್ದು ತಲೆಯಲ್ಲಿ ಕಿರೀಟವಿದೆ. ಬಲಭಾಗದ ದ್ವಾರಪಾಲಕನಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ತ್ರಿಸೂಲ ಮತ್ತು ಅಭಯ ಹಸ್ತವಿರುವುದು. ಎಡಗೈಯಲ್ಲಿ ಗದೆ ಮತ್ತು ತ್ರಿಸೂಲವನ್ನು ಹೊಂದಿದ್ದು ಪೀಠದ ಮೇಲೆ ನಿಂತಿರುವನು. ಅಲ್ಲದೇ ಎದೆ, ಸೊಂಟದಲ್ಲಿ ಹಲವು ಆಭರಣಗಳು ಇರುವುದಲ್ಲದೆ ತಲೆಯಲ್ಲಿ ಕಿರೀಟವಿದೆ. ಇದರ ಮುಂದಿನ ಭಾಗವೆ ಪ್ರಾಂಗಣ ಅಥವಾ ಜಗುಲಿಯಾಗಿದೆ. ಈ ಜಗುಲಿಯ ಮೇಲ್ಭಾಗದಲ್ಲಿ ನಾಲ್ಕು ಸ್ಥಂಬಗಳು ಪೀಠದ ಮೇಲೆ ನಿಂತಿದ್ದು ದೇವಾಲಯದ ತೊಲೆಗಂಬವನ್ನು ಹೊತ್ತು ನಿಂತಿದೆ. ಈ ಸ್ಥಂಬಗಳು ತಳಭಾಗದಲ್ಲಿ ಚೌಕಕಾರದಲ್ಲಿದ್ದು ಮೇಲ್ಭಾಗಕ್ಕೆ ಹೋದಂತೆ ಕಿರಿದಾಗಿದೆ. ಸ್ಥಂಬದ ಮೇಲ್ಭಾಗದಲ್ಲಿ ಸರಳ ರೀತಿಯ ಬೋದಿಗೆಯನ್ನು ಹೊಂದಿದೆ. ಜಗುಲಿಯ ಮೇಲೆ ನಿಂತಿರುವ ಸ್ಥಂಬಗಳಲ್ಲಿ ವೈಧಿಕ ಧರ್ಮಕ್ಕೆ ಸಂಬಂಧಪಟ್ಟಂತೆ ವಿವಿಧ ರೀತಿಯ ಶಿಲ್ಪಗಳ ಕೆತ್ತನೆಯಿರುವುದು. ಕಂಬಗಳ ಮೇಲ್ಭಾಗದಲ್ಲಿ ಉದ್ದನೆಯ ನೀಲುವಂಗಿ, ನೃತ್ಯಮಾಡುತ್ತಿರುವ ಕನ್ಯೆ, ದೇವಾಲಯದ ಎಡಭಾಗದ ಹೊರ ಸ್ಥಂಬದ ಮೇಲೆ ಹಂಸ ಆದಿಶೇಷನ ಶಿಲ್ಪವಿರುವುದು.

ಸ್ಥಂಬಗಳ ಪೀಠವು ವಿವಿಧ ರೀತಿಯ ಅಲಂಕಾರಗಳನ್ನು ಒಳಗೊಂಡಿದ್ದು ಕಂಬದಲ್ಲಿ ಬಾಣವನ್ನು ಬಿಡುತ್ತಿರುವ, ಮಹಿಳೆಯು ಭಕ್ತಿಯಿಂದ ನಮಿಸುತ್ತಿರುವ ಶಿಲ್ಪ, ವಿನಾಯಕ, ಹನುಮಂತನ ಶಿಲ್ಪ, ನೃತ್ಯ ಮಾಡುತ್ತಿರುವ ಕನ್ಯೆಯ ಶಿಲ್ಪ, ಜಿಂಕೆಯ ಶಿಲ್ಪಗಳಿರುವುದಲ್ಲದೆ ಮುಂದೆ ನಾಲ್ಕು ಸ್ಥಂಬಗಳಿದ್ದು, ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇರುವುದಿಲ್ಲ. ಪ್ರವೇಶದ್ವಾರದಲ್ಲಿ ಮೂರು ಮೆಟ್ಟಿಲುಗಳಿದ್ದು ಆನೆಯ ಸೊಂಡಿಲಾಕಾರದಲ್ಲಿದೆ. ಕಂಬಗಳು ಯಾವುದರ ಹಿಡಿತವಿಲ್ಲದೆ ಸ್ವಾತಂತ್ರ್ಯವಾಗಿವೆ. ಆದರೆ ದೇವಾಲಯದಲ್ಲಿ ಯಾವುದೇ ವಿಗ್ರಹಗಳು ಇರುವುದಿಲ್ಲ. ಇಂದು ದೇವಾಲಯದ ಮೇಲೆ ಗಿಡ-ಬಳ್ಳಿಗಳು ಬೆಳದಿದ್ದು ಅವನತಿಯ ಹಾದಿಯಲ್ಲಿದೆ.

ಶಿವದೇವಾಲಯ:

ಬೆಟ್ಟದ ಬುಡದಲ್ಲಿರುವ ಗೋಪುರದ ಬಲಭಾಗಕ್ಕೆ ಇರುವ ದೇವಾಲಯವೇ ಶಿವ ದೇವಾಲಯುವಾಗಿದೆ. ದೇವಾಲಯವು ಉತ್ತರಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಚೌಕಕಾರದ ಗರ್ಭಗೃಹವನ್ನು, ಪಾಥಾಲಾಂಕನವನ್ನು ಹೊಂದಿದೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ

ಪೀಠದ ಮೇಲೆ ಕಪ್ಪು ಶಿಲೆಯ ಲಿಂಗವಿದೆ. ಗರ್ಭಗೃಹದ ಮೇಲೆ ಪುಷ್ಪಾಲಂಕಾರದ ಭುವನೇಶ್ವರಿ ಇದ್ದು ದ್ರಾವಿಡ ಶೈಲಿಯ ಇಟ್ಟಿಗೆಯಿಂದ ನಿರ್ಮಿತವಾಗಿದ್ದ ಗೋಪುರವನ್ನು ಕಾಣಬಹುದು. ಗೋಪುರ ಇಂದು ಜೀರ್ಣವ್ಯವಸ್ಥೆಯ ಹಂತದಲ್ಲಿರುತ್ತದೆ. ಗರ್ಭಗೃಹದ ಪ್ರವೇಶ ದ್ವಾರವು ಎಡ ಮತ್ತು ಬಲಭಾಗದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರು ಪೀಠದ ಮೇಲೆ ನಿಂತಿದ್ದಾರೆ. ಬಾಗಿಲುವಾಡವು ಸುಂದರವಾಗಿರುವುದು. ಇಡೀ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿತಗೊಂಡಿದ್ದು ಅಧಿಷ್ಠಾನದ ಮೇಲೆ ನಿಂತಿದೆ.

ಗರ್ಭಗೃಹದ ಮುಂದಿನ ಭಾಗವೇ ಪಾಥಾಲಾಂಕ ಅಥವಾ ಜಗುಲಿಯಾಗಿದೆ. ಇಲ್ಲಿ ಚೌಕಕಾರದ ನಾಲ್ಕು ಸ್ಥಂಬಗಳು ಕಂಡುಬಂದಿವೆ. ಇವುಗಳ ಮೇಲೆ ಹೆಚ್ಚಿನ ಶಿಲ್ಪಗಳು ಕಂಡುಬಂದಿಲ್ಲ. ವರಾಂಡದಲ್ಲಿರುವ ಕಂಬಗಳಲ್ಲಿ ಗಣಪತಿ, ಲಿಂಗ, ಕುಳಿತುಕೊಂಡಿರುವ ಸಿಂಹ ಮತ್ತು ಪುಷ್ಪದ ಚಿತ್ರವಿದ್ದು ದೇವಾಲಯದ ಬಿತ್ತಿಯಲ್ಲಿ ಮತ್ಸ ಮತ್ತು ಉದ್ದವಾದ ಸರ್ಪದ ಉಬ್ಬುಶಿಲ್ಪವಿರುವುದು. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವ ವಿಗ್ರಹಗಳು ಕಂಡುಬರುತ್ತವೆ. ಆದರೆ ಇಂದು ಈ ದೇವಾಲಯ ಜೀರ್ಣ ವ್ಯವಸ್ಥೆಗೆ ಒಳಪಟ್ಟಿರುವುದಾಗಿದೆ. ದೇವಾಲಯಕ್ಕೆ ಹತ್ತಲು ಮೂರು ಮೆಟ್ಟಿಲುಗಳಿದ್ದು ಗಜಾಲಂಕಾರವನ್ನು ಹೊಂದಿದೆ. ದೇವಾಲಯ ವಾಸ್ತುದೃಷ್ಟಿಯಿಂದ ಪ್ರಮುಖ್ಯತೆಯನ್ನು ಹೊಂದಿರುವುದಿಲ್ಲ. ದೇವಾಲಯದ ಬಿತ್ತಿಯು ಕೆಂಪು ಬಣ್ಣದ ದೊಡ್ಡ ಚಪ್ಪಡಿಗಳಿಂದ ಕಟ್ಟಲ್ಪಟ್ಟಿದ್ದು, ದ್ರಾವಿಡ ಶೈಲಿಯ ಲಕ್ಷಣಗಳನ್ನು ಹೊಂದಿದೆ.

ಬಸವೇಶ್ವರ ದೇವಾಲಯ:

ದೇವಾಲಯವು ಮುಖ್ಯ ಗೋಪುರಕ್ಕೆ ಹೋಗುವ ಸೋಳೆಕೊಳ ಸಮೀಪದ ಬಲಭಾಗಕ್ಕಿರುವ ಸಣ್ಣ ಗುಡ್ಡದ ಮೇಲೆ ನಿಂತಿದೆ. ದೇವಾಲಯ ಅದಿಷ್ಠಾನದ ಮೇಲೆ ನಿಂತಿದ್ದು ಪಶ್ಚಿಮಾಭಿಮುಖವಾಗಿದೆ. ಇದರ ತಳವಿನ್ಯಾಸವು ಚೌಕಕಾರದ ಗರ್ಭಗೃಹವನ್ನು ಹೊಂದಿದ್ದು, ಮೇಲೆ ಗೋಪುರವು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದೆ. ಗರ್ಭಗೃಹದಲ್ಲಿ ಬಸವೇಶ್ವರನ ವಿಗ್ರಹವಿದ್ದು ಬಾಗಿಲುವಾಡವು ಅಷ್ಟೊಂದು ಸುಂದರವಾಗಿಲ್ಲ, ಗರ್ಭಗೃಹದ ಮುಂದಿನ ಭಾಗವೇ ಪ್ರಾಂಗಣ ಅಥವಾ ಜಗುಲಿಯಾಗಿದೆ. ಇಲ್ಲಿ ಚೌಕಕಾರದ ನಾಲ್ಕು ಸ್ಥಂಬಗಳು ಸ್ವಾತಂತ್ರ್ಯವಾಗಿದ್ದು ದೇವಾಲಯದ ಚಾವಣಿಯನ್ನು ಹೊತ್ತು ನಿಂತಿವೆ. ಕಂಬಗಳು ಯಾವುದೇ ರೀತಿಯ ಶಿಲ್ಪಗಳ ಕೆತ್ತನೆಯನ್ನು ಹೊಂದಿರದೆ ಸರಳವಾಗಿವೆ. ದೇವಾಲಯದ ಬಿತ್ತಿಯು ಕಲ್ಲುಚಪ್ಪಡಿಗಳಿಂದ ನಿರ್ಮಿತವಾಗಿದೆ. ದೇವಾಲಯದ ಮೇಲಿನ ಭಾಗವು ನಾಲ್ಕು ದಿಕ್ಕುಗಳಿಗೂ ಇಟ್ಟಿಗೆಯಿಂದ ನಿರ್ಮಿತಗೊಂಡಂತೆ ಜೋಡಿ ಬಸವನ ವಿಗ್ರಹವಿತ್ತೆಂದು ಕಾಣಬಹುದು. ಈ ಇಟ್ಟಿಗೆಯು ೧೦" X ೧೦" X ೨" ಅಳತೆಯುಳ್ಳದಾಗಿದ್ದು, ಪಾಳೆಯಗಾರರ ಅವಧಿಯಾದ ೧೭ನೇ ಶತಮಾನಕ್ಕೆ ಸೇರಿದ್ದಾಗಿದೆ.

ಆದರೆ ಇಂದು ಸ್ಥಂಬಗಳು ಸಂಪೂರ್ಣ ಅವನತಿಯ ಹಾದಿಯಲ್ಲಿವೆ. ಸ್ಥಂಬಗಳು ಪೀಠದ ಮೇಲಿರದೆ ಮೇಲ್ಛಾವಣೆಯನ್ನು ಹೊತ್ತು ನಿಂತಿವೆ.

ಸಂಕ್ರಾಂತಿ ಮಂಟಪ :

ಸಂಕ್ರಾಂತಿ ಮಂಟಪವು ಬೆಟ್ಟದ ಶಿಖರಕ್ಕೆ ಹೋಗುವ ಅರ್ಧ ಬೆಟ್ಟದ ಎಡಭಾಗದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು, ಮಂಟಪವು ಮೂರು ಅಡಿ ಎತ್ತರದ ಅದಿಷ್ಠಾನದ ಮೇಲೆ ನಿಂತಿದೆ. ಅಧಿಷ್ಠಾನವು ಕಲ್ಲು ಚಪ್ಪಡಿಗಳಿಂದ ಕಟ್ಟಲ್ಪಟ್ಟಿರುವುದು. ಮಂಟಪವು ಒಟ್ಟು ಹದಿನಾಲ್ಕು ಸ್ಥಂಬಗಳಿಂದ ನಿರ್ಮಿತಗೊಂಡಿದೆ. ಮಂಟಪದ ಪಶ್ಚಿಮಾಭಿಮುಖ ಮೂಲ ಗೋಡೆಯನ್ನು ಹೊಂದಿದ್ದು ನಂತರದ ಕಾಲದಲ್ಲಿ ಉತ್ತರದಿಕ್ಕಿನ ಗೋಡೆಯು ಕಟ್ಟಲ್ಪಟ್ಟಿದೆ ಎಂದು ಕಂಡುಬಂದಿದೆ. ಮಂಟಪದ ಮಧ್ಯ ನಾಲ್ಕು ಕಂಬಗಳುಳ್ಳ ಒಂದು ದೊಡ್ಡ ಪೀಠವಿದೆ. ಇದರಲ್ಲಿ ಯಾವುದೇ ವಿಗ್ರಹಗಳು ಇರುವುದಿಲ್ಲ. ಹಿಂದೆ ಸಂಕ್ರಾಂತಿಯ ದಿನದಂದು ಈ ಪೀಠದ ಮೇಲೆ ದೇವರ ಉತ್ಸವ ಮೂರ್ತಿಯನ್ನು ತಾತ್ಕಾಲಿಕವಾಗಿ ಪ್ರತಿಷ್ಠಾಪಿಸಿ ಪೂಜೆ ನಡೆಯುತ್ತಿದ್ದ ಸ್ಥಳವಾಗಿದೆ. ಪೀಠದ ನಾಲ್ಕು ಸ್ಥಂಬಗಳಲ್ಲಿ ಶೈವ ಧರ್ಮಕ್ಕೆ ಸೇರಿದ ಶಿವಲಿಂಗ, ಹಂಸ, ನಂದಿ ಶಿವಲಿಂಗಕ್ಕೆ ಪೂಜೆಮಾಡುತ್ತಿರುವ ದೃಶ್ಯ ಮತ್ತು ಆನೆ, ನವಿಲು, ಹಸು, ಉಗ್ರ ನರಸಿಂಹನ ಉಬ್ಬುಶಿಲ್ಪಗಳ ಕೆತ್ತನೆ ಪೀಠದ ಮೇಲ್ಭಾಗಗಳಿಂದ ಕೂಡಿರುವುದು. ಪುಷ್ಪಾಲಂಕಾರದ ಭುವನೇಶ್ವರಿಯನ್ನು ಹೊಂದಿದ್ದು ಸಂಪೂರ್ಣ ಕಲ್ಲುಚಪ್ಪಡಿಗಳಿಂದ ನಿರ್ಮಿಸಲಾಗಿದೆ. ಛಾವಣಿಯ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಬಸವನ ವಿಗ್ರಹಗಳು ಇದ್ದು ಇಂದು ನಾಶವಾಗುವ ಹಂತದಲ್ಲಿದೆ. ಛಾವಣಿಯ ನಿರ್ಮಾಣಕ್ಕೆ ಗಾರೆಯನ್ನು ಉಪಯೋಗಿಸಲಾಗಿದೆ. ಕಂಬಗಳು ಚೌಕಕಾರದ ಆಕೃತಿಯನ್ನು ಹೊಂದಿದ್ದು ಯಾವುದೇ ಪೀಠದ ಮೇಲೆ ನಿಂತಿರುವುದಿಲ್ಲ ಮತ್ತು ಮಂಟಪಕ್ಕೆ ಹತ್ತಲು ನಾಲ್ಕು ಮೆಟ್ಟಿಲುಗಳು ಇರುವುದಾಗಿದೆ.

ಸಂಕ್ರಾಂತಿಯ ದಿನದಂದು ವಿಶೇಷ ಪೂಜೆ ಪುರಸ್ಕಾರಗಳು, ಜಾತ್ರೆಗಳು ನಡೆಯುತ್ತಿದ್ದ ಸ್ಥಳವಾಗಿರುವುದು. ಆದ್ದರಿಂದ ಈ ಮಂಟಪವನ್ನು ಸಂಕ್ರಾಂತಿ ಮಂಟಪವೆಂದು ಮತ್ತು ಅತಿ ಹೆಚ್ಚು ಗಾಳಿ ಬಿಸುವುದರಿಂದ ಗಾಳಿಮಂಟಪವೆಂದು ಕರೆಯಲಾಗಿದೆ.

ರಾಯಗೋಪುರ :

ಬೆಟ್ಟದಪುರ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಒಂದು ದೊಡ್ಡದಾದ ಬೆಟ್ಟವಿರುವುದರಿಂದ ಈ ಗ್ರಾಮವನ್ನು ಬೆಟ್ಟದಪುರ ಬೆಟ್ಟವೆಂದು ಕರೆಯುತ್ತಾರೆ. ಸಿಡ್ಲು ಮಲ್ಲಿಕಾರ್ಜುನ ದೇವಾಲಯಕ್ಕೆ ಹತ್ತುವ ಮೆಟ್ಟಿಲಿನ ಪ್ರಾರಂಭದಲ್ಲಿಯೇ ಪ್ರವೇಶದ್ವಾರ ಮತ್ತು ಮಹಾಗೋಪುರವಿದೆ. ಇದನ್ನೇ ರಾಯಗೋಪುರವೆಂದು ಕರೆಯಲಾಗಿದೆ. ಮಹಾದ್ವಾರದ ಎರಡು ಕಡೆಯಲ್ಲಿಯೂ ಕಲ್ಲಿನಿಂದ

ಕೆತ್ತಿದ ಎರಡೆರಡು ಆನೆಗಳ ವಿಗ್ರಹವಿದೆ. ಈ ಪ್ರತಿಯೊಂದು ಆನೆಯು ಎಂಟೆಂಟು ಕಾಲುಗಳನ್ನು ಒಳಗೊಂಡಿದ್ದು ಆಭರಣಗಳನ್ನು ಧರಿಸಿ ನಿಂತಿರುವುದು ಕಂಡುಬಂದಿದೆ. ಆನೆಗಳು ಪೀಠದ ಮೇಲೆ ನಿಂತಿದ್ದು ಗೋಪುರ ಮತ್ತು ಇಡೀ ಬೆಟ್ಟವನ್ನೇ ಹೊತ್ತು ನಿಂತಿರುವುದು ಅಲ್ಲದೇ ದೇವಾಲಯದ ಪಟ್ಟಾದಾನೆಗಳಾಗಿವೆ ಎಂದು ಶಾಸನಗಳಿಂದ ಕಂಡುಬಂದಿದೆ.

ಗೋಪುರದ ಉತ್ತರ ದಿಕ್ಕಿನಲ್ಲಿ ಶಿವಲಿಂಗವಿದ್ದು, ಇದನ್ನು ಆವರಿಸಿರುವ ಏಳು ತಲೆಯ ಆದಿಶೇಷನ ವಿಗ್ರಹವುಳ್ಳ ಏಕಶಿಲೆಯಿದೆ. ಎಲ್ಲಾ ಹೆಡೆಗಳಲ್ಲಿ ಕಿರೀಟವಿದ್ದು ಲಿಂಗವನ್ನು ಪೀಠದ ಮೇಲ್ಭಾಗದಲ್ಲಿ ಕೆತ್ತಲಾಗಿದೆ. ಹಾಗೆಯೇ ದಕ್ಷಿಣ ಗೋಪುರದ ತಳಭಾಗದಲ್ಲಿ ದೊಡ್ಡ ಆಮೆಯ ಶಿಲ್ಪವಿದ್ದು ಇದನ್ನು ಸಹ ಪೀಠದ ಮೇಲೆ ಕೆತ್ತಲಾಗಿದೆ. ಗೋಪುರದ ಪೂರ್ವ ಭಾಗದ ಬಿತ್ತಿಯಲ್ಲಿ ಮತ್ಸ್ಯಶಿಲ್ಪವಿದ್ದು, ಉತ್ತರ ದಿಕ್ಕಿನ ಬಿತ್ತಿಯಲ್ಲಿ ಸರ್ಪ ಮತ್ತು ಆಮೆಯ ಶಿಲ್ಪವಿದೆ. ಇಡೀ ಗೋಪುರವು ಭದ್ರವಾದ ಅಧಿಷ್ಠಾನದ ಮೇಲೆ ನಿಂತಿದ್ದು ಅಧಿಷ್ಠಾನ ಮತ್ತು ಬಿತ್ತಿಯು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ಕೂಡಿದ್ದು ಚೌಕಕಾರದ ಸ್ಥಂಬಗಳು ಇರುವುದು. ಸ್ಥಂಬಗಳು ದ್ರಾವಿಡ ಶೈಲಿಯಲ್ಲಿದ್ದು, ಲಿಂಗ, ನಂದಿ ಮತ್ತು ವಿವಿಧ ದೇವತೆಗಳ ಕೆತ್ತನೆಯಿದೆ. ಉತ್ತರದ ಜಗುಲಿಯಲ್ಲಿ ಒಂದು ನಂದಿಮೂರ್ತಿ ಇದ್ದು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ. ಅಲ್ಲದೆ ಗಂಟೆ, ಧಾರ ವಿವಿಧ ರೀತಿಯ ಅಲಂಕಾರಗಳನ್ನು ಒಳಗೊಂಡಿದ್ದು ಅತ್ಯಂತ ಸುಂದರವಾಗಿ ಕಾಣುವುದು. ದಕ್ಷಿಣದ ಜಗುಲಿಯಲ್ಲಿ ಉತ್ತಮ ಕೆತ್ತನೆ ಕೆಲಸವುಳ್ಳ ಒಂದು ಪಾದಪೀಠವಿದೆ. ಪ್ರವೇಶದ್ವಾರದ ಇಕ್ಕೆಲುಗಳ ಹೊರ ಭಾಗದಲ್ಲಿ ಎರಡು ಚಿಕ್ಕದಾದಂತಹ ಶಿಖರಗಳಿದ್ದು ಪರಸ್ಪರ ಮುಖ ಮಾಡಿಕೊಂಡಿವೆ. ಇದರಲ್ಲಿ ಬಲಭಾಗದ ವಿಗ್ರಹವು ಭೈರವ, ಚಂಡಿಕೇಶ್ವರನದಾಗಿದ್ದರೆ, ಇನ್ನೊಂದು ಮಹಿಷಾಸುರ ಮರ್ದಿನಿಯ ವಿಗ್ರಹ ಎಡಭಾಗದಲ್ಲಿರುವುದು ಕಂಡುಬಂದಿದೆ.

ಬಿತ್ತಿಯ ಮೇಲ್ಭಾಗವು ಇಟ್ಟಿಗೆಯಿಂದ ಕಟ್ಟಲ್ಪಟ್ಟಿದ್ದು ಪ್ರವೇಶದ್ವಾರದ ಒಳಗೋಡೆಗಳು ಮತ್ತು ಛಾವಣಿಗಳು ಶಿವಪುರಾಣದಲ್ಲಿ ಉಲ್ಲೇಖಿತವಾದ ಹಲವಾರು ದೇವ-ದೇವತೆಗಳ ಶಿಲ್ಪ ವಿಗ್ರಹಗಳು ಇರುವುದಾಗಿದೆ. ಇದರಲ್ಲಿ ಬ್ರಹ್ಮ, ಬಹುಶಿರವುಳ್ಳ ಮಹದೇವ, ಯೋಗಿ ಸ್ವರೂಪನಾದ ಶಿವ ವೇಣುಗೋಪಾಲ, ಶಿವ ಮತ್ತು ಪಾರ್ವತಿಯರ ವಿವಾಹ, ತಪಸ್ಸಿನಲ್ಲಿ ಕುಳಿತ ತನ್ನ ಒಡೆಯನನ್ನು ಭೇಟಿಯಾಗುವ ಪಾರ್ವತಿ, ಶಿವನಲ್ಲಿ ತನ್ನ ಆತ್ಮಲಿಂಗವನ್ನು ಬೇಡುತ್ತಿರುವ ಹತ್ತು ತಲೆಯ ರಾವಣ ಮತ್ತು ಮಿಥುನ ಶಿಲ್ಪವುಳ್ಳ ಹಲವು ದೇವತೆಯ ವಿಗ್ರಹಗಳು ಕಂಡುಬರುವುದು. ಗೋಪುರವು ಮೂರು ಅಂತಸ್ತನ್ನು ಹೊಂದಿದ್ದು ಸಂಪೂರ್ಣವಾಗಿ ಇಟ್ಟಿಗೆಯಿಂದ ಕಟ್ಟಲ್ಪಟ್ಟು, ಗಾರೆಯನ್ನು ಉಪಯೋಗಿಸಲಾಗಿದೆ. ಗೋಪುರದ ಶಿಖರದಲ್ಲಿ ಮೂರು ಕಲ್ಲಿನ ಕಲಶಗಳಿವೆ. ಗೋಪುರದ ಒಳಭಾಗದಲ್ಲಿ ಶಿವಶರಣೆಯರ ಚಿತ್ರಗಳಿದ್ದು, ವಿಜಯನಗರ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ.

ನಂದಿಮಂಟಪ:

ರಾಯಗೋಪುರದ ಸಮೀಪದಲ್ಲಿಯೇ ಉತ್ತರಕ್ಕೆ ನಂದಿಮಂಟಪವಿದ್ದು, ತಳವಿನ್ಯಾಸ ಚೌಕಕಾರವಾಗಿದೆ. ಭದ್ರವಾದ ಶಿಲೆಯಿಂದ ನಿರ್ಮಿತವಾದ ಅಧಿಷ್ಠಾನದ ಮೇಲೆ ದ್ರಾವಿಡ ಶೈಲಿಯ ಚೌಕಕಾರದ ಸ್ಥಂಬಗಳಿವೆ. ಸ್ಥಂಬಗಳು ಪೀಠದ ವ್ಯವಸ್ಥೆಯಿಲ್ಲದೆ ಬೋದಿಗೆಯನ್ನು ಹೊಂದಿ ತೊಲೆಗಳನ್ನು ಒಳಗೊಂಡಿದ್ದು, ಮೇಲ್ಚಾವಣಿಯನ್ನು ಹೊತ್ತು ನಿಂತಿದೆ. ತಳದಿಂದ ಮೇಲ್ಭಾಗಕ್ಕೆ ಕಿರಿದಾಗಿದ್ದು ಐದು ಪೀಠಗಳ ಮೇಲೆ ನಂದಿಯ ಮೂರ್ತಿಶಿಲ್ಪವಿದ್ದು ಉತ್ತಮ ಸ್ಥಿತಿಯಲ್ಲಿದೆ. ಸ್ಥಂಬಗಳು ಸರಳವಾಗಿದ್ದು ಮೇಲ್ಛಾವಣಿಯಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವನ ವಿಗ್ರಹಗಳು ಇರುವುದಾಗಿದೆ. ನಂದಿಶಿಲ್ಪವು ಕನಿಕಾರನ ಹಳ್ಳಿಯ ಒಡೆಯನೂ, ದೊಡ್ಡಯ್ಯನ ಮಗನೂ, ಆಸ್ಥಾನಿಕನೂ ಆದ ಪುಣ್ಯಸ್ತ್ರೀ ಬಸವಯ್ಯನು ಈ ವಿಗ್ರಹವನ್ನು ಕೊಡುಗೆಯಾಗಿ ನೀಡಿರುವನೆಂದು ಈ ವಿಗ್ರಹದ ಬುಡದಲ್ಲಿ ಕೊರೆಯಲ್ಪಟ್ಟ ಶಾಸನದಿಂದ ತಿಳಿಯಲಾಗಿದೆ. ಈಶಾನ್ಯ ಕಂಬದ ಬುಡದಲ್ಲಿ ದಕ್ಷಿಣಾಭಿಮುಖವಾಗಿ ಕೈಮುಗಿದು ನಿಂತಿರುವ ಸ್ತ್ರೀ ಚಿತ್ರವಿದೆ. ಆಗ್ನೇಯ ಕಂಬದಲ್ಲಿ ಉತ್ತರಾಭಿಮುಖವಾಗಿ ಇದೇ ರೀತಿಯಾಗಿ ಕೆತ್ತನೆಯಿದ್ದು ಸ್ತ್ರೀಯು ತನ್ನ ಮಗುವಿನೊಂದಿಗೆ ಇರುವ ಚಿತ್ರವಿದೆ. ಮತ್ತು ಮಂಟಪದ ಉತ್ತರಕ್ಕೆ ಎತ್ತರವಾದ ಎರಡು ಉಯ್ಯಲೆ ಕಂಬವಿರುವುದು.

ಗೋಪುರದ ಪ್ರವೇಶ ದ್ವಾರದ ಬಲಭಾಗದಲ್ಲಿ ಬಸವೇಶ್ವರ ಗುಡಿಯಿದ್ದು ಎಡಭಾಗದಲ್ಲಿ ವಿನಾಯಕನ ಗುಡಿಯನ್ನು ಒಳಗೊಂಡಿರುವುದು. ಗೋಪುರದ ನಂತರ ಬಲಭಾಗದಲ್ಲಿ ಎರಡು ಗೋಡೆಗಳಿದ್ದು ಒಂದು ಶಿವಲಿಂಗವಾದರೆ ಮತ್ತೊಂದು ಪಾಳುಗೋಡೆಯಾಗಿದೆ. ಶಿವಲಿಂಗದ ಬಿತ್ತಿಯ ಹಿಂದೆ ಮಹಿಳೆಯೊಬ್ಬಳ ಮಿಥುನ ಶಿಲ್ಪವಿದ್ದು, ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದರೆ, ಇದಕ್ಕೆ ನೇರವಾಗಿ ಪಾದಪೀಠ ಮತ್ತು ನಂದಿಯ ಸ್ಥಂಬವಿರುವುದು.

ರಾಮದೇವಾಲಯ :

ರಾಮದೇವಾಲಯ ಬೆಟ್ಟದಪುರ ಗ್ರಾಮದ ಕೇಂದ್ರಭಾಗದಲ್ಲಿದೆ. ಇದು ಉತ್ಸವ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಇದ್ದು ದೇವಾಲಯದ ತಳವಿನ್ಯಾಸವು ಗರ್ಭಗೃಹ, ಅಂತರಾಳ, ನವರಂಗಗಳನ್ನು ಒಳಗೊಂಡು ಪೂರ್ವಾಭಿಮುಖವಾಗಿದೆ. ಅಧಿಷ್ಠಾನದ ಮೇಲೆ ದೇವಾಲಯ ನಿರ್ಮಿತಗೊಂಡಿದ್ದು ಇಂದು ಮಣ್ಣಿನಿಂದ ಮುಚ್ಚಿರುವುದು ಕಂಡುಬಂದಿದೆ. ಇದು ವೈಷ್ಣವ ದೇವಾಲಯವಾಗಿದೆ. ಗರ್ಭಗೃಹದ ಸುತ್ತ ಪ್ರದಕ್ಷಣೆ ಪಥ ಇಲ್ಲದಿರುವುದು ಮತ್ತು ದೇವಾಲಯವನ್ನು ತಕ್ಷಣ ನೋಡಿದಾಗ ವಿಜಯನಗರ ಕಾಲದ ಸ್ಥಂಬಗಳ ಲಕ್ಷಣ, ಗರ್ಭಗೃಹ, ಅಂತರಾಳ ನವರಂಗಗಳು ಕಂಡುಬಂದಿದ್ದು ದೇವಾಲಯದ ಮೇಲ್ಭಾಗದ ಸುತ್ತ ಇಂಡೋ–ಇಸ್ಲಾಮಿಕ

ಶೈಲಿಯ ಗೊಮ್ಮಟಗಳು ಹಾಗೂ ಬಾಗಿದ ಇಸ್ಲಾಮಿಕ್ ಶೈಲಿಯ ಕಂಬಗಳನ್ನು ಒಳಗೊಂಡ ಕಲೆಯಿದ್ದು ಏಕಕೂಟ ದೇವಾಲಯವಾಗಿದೆ.

ಗರ್ಭಗೃಹ:

ಗರ್ಭಗೃಹ ಚಿಕ್ಕದಾಗಿದ್ದು ಮೂಲ ವಿಗ್ರಹವು ಸ್ಥಳಾಂತರಗೊಂಡಿದೆ. ನಂತರದ ಅವಧಿಯಲ್ಲಿ ರಾಮ, ಲಕ್ಷ್ಮಣ ಸೀತೆಯ ವಿಗ್ರಹಗಳನ್ನು ಸ್ಥಳೀಯ ಜನತೆ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿರುವರು. ಗರ್ಭಗೃಹದ ಮೇಲ್ಭಾಗವು ತ್ರಿಭುಜಕಾರದಲ್ಲಿದ್ದು ಮೇಲೆ ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಬಾಗಿಲುವಾಡವು ಸುಂದರವಾಗಿದ್ದು ಲಾಲಟಬಿಂಬದಲ್ಲಿ ಪುಷ್ಪಾಲಂಕಾರವನ್ನು ಒಳಗೊಂಡಿರುವುದಲ್ಲದೇ ಯಾವುದೇ ರೀತಿಯ ದ್ವಾರಪಾಲಕರ ಶಿಲ್ಪಗಳಿರುವುದಿಲ್ಲ.

ಅಂತರಾಳ:

ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಇದು ಚಚೌಕಕಾರವಾಗಿದ್ದು ಚಿಕ್ಕದಾಗಿದೆ. ಅಂತರಾಳದಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಮತ್ತು ಇದರ ಬಾಗಿಲುವಾಡವು ಅಲಂಕೃತದಿಂದ ಕೂಡಿದ್ದು ಲಲಾಟಬಿಂಬದಲ್ಲಿ ಪುಷ್ಪಾಲಂಕಾರದ ಚಿತ್ರವನ್ನು ಒಳಗೊಂಡಿದೆ.

ನವರಂಗ ಮಂಟಪ:

ಅಂತರಾಳದ ಮುಂದಿನ ಭಾಗವೇ ನವರಂಗ ಮಂಟಪ. ಇದರಲ್ಲಿ ೨೫ X ೨೫ ಅಡಿ ಚದುರ ಸುತ್ತಳತೆ ಹೊಂದಿದ್ದು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಎರಡು ಕಂಬಗಳ ಸಾಲುಗಳಿವೆ. ಒಂದೊಂದು ಸಾಲಿನಲ್ಲಿ ನಾಲ್ಕು ಕಂಬಗಳಂತೆ ಒಟ್ಟು ಹದಿನಾರು ಕಂಬಗಳು ಕಂಡುಬಂದಿವೆ. ಆದರೆ ಈ ಕಂಬಗಳ ಮೇಲೆ ಯಾವುದೇ ರೀತಿಯ ಚಿತ್ರಗಳ ಕೆತ್ತನೆ ಇರುವುದಿಲ್ಲ. ಮತ್ತು ಮೇಲ್ಛಾವಣೆಯನ್ನು ಹೊತ್ತು ನಿಂತಿವೆ. ಅಲ್ಲದೆ ಸ್ಥಂಬಗಳ ಬೋಧಿಗೆಗಳು ಸರಳವಾಗಿರುವುದಾಗಿದೆ.

ಬಸವೇಶ್ವರ ದೇವಾಲಯ:

ದೇವಾಲಯವು ಬೆಟ್ಟದಪುರ ಗ್ರಾಮದ ಒಳಭಾಗದಲ್ಲಿದ್ದು, ಉತ್ಸವ ಮಲ್ಲಿಕಾರ್ಜುನ ದೇವಾಲಯದ ಎದುರುಗಡೆ ಇರುವುದು. ದೇವಾಲಯ ತಳವಿನ್ಯಾಸವು ಗರ್ಭಗೃಹ, ಅಂತರಂಗ, ನವರಂಗವನ್ನು ಒಳಗೊಂಡಿರುವುದು. ಇದು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹದಲ್ಲಿ ಬಸವೇಶ್ವರ ವಿಗ್ರಹವಿದ್ದು, ಪಶ್ಚಿಮಾಭಿಮುಖವಾಗಿದೆ. ಇದರ ಗರ್ಭಗೃಹದ ಮೇಲಿನ ಭಾಗವು ಗೋಪುರವನ್ನು ಒಳಗೊಂಡಿದ್ದು ದೇವಾಲಯದ ಬಿತ್ತಿಯು ಕಲ್ಲು ಚಪ್ಪಡಿಗಳಿಂದ ಜೋಡಿಸಲ್ಪಟ್ಟು ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇಲ್ಲದೇ ಸರಳವಾಗಿ ಕಂಡುಬಂದಿದೆ. ನವರಂಗದಲ್ಲಿ ಒಟ್ಟು ಹನ್ನೆರಡು ಸ್ಥಂಬಗಳು ಕಂಡುಬಂದಿದ್ದು ಚೌಕಕಾರದಲ್ಲಿವೆ. ಗರ್ಭಗೃಹದ ಬಾಗಿಲುವಾಡವು

ಸರಳವಾಗಿದ್ದು ಎರಡು ಕಡೆಯಲ್ಲಿಯೂ ದ್ವಾರಪಾಲಕರು ಮತ್ತು ಸಪ್ತಮಾತೃಕೆಯ ಸಣ್ಣ ಸಣ್ಣ ಶಿಲ್ಪಗಳು ಕಂಡುಬಂದಿವೆ. ದೇವಾಲಯದ ಒಟ್ಟು ಉದ್ದ ೩೫ ಅಡಿ ಇರುವುದು. ದೇವಾಲಯದ ಪ್ರವೇಶದ್ವಾರದ ಮೇಲೆ ದೊಡ್ಡದಾದ ಬಸವೇಶ್ವರ ವಿಗ್ರಹವಿದೆ. ಗರ್ಭಗೃಹದ ನಂತರ ಅಂತರಾಳವು ವಿಶಾಲವಾಗಿಲ್ಲದೆ ಚಿಕ್ಕದಾಗಿರುವುದಾಗಿದೆ. ಇದು ಹಲವು ಭಾರಿ ಜೀರ್ಣ ವ್ಯವಸ್ಥೆಯನ್ನು ಹೊಂದಿದ್ದು ಗೋಪರವು ವಿಮಾನಕಾರದಲ್ಲಿದೆ. ಈ ದೇವಾಲಯವನ್ನು ಪವಾಡ ಬಸವೇಶ್ವರ ದೇವಾಲಯವೆಂದು ಸ್ಥಳೀಯರು ಕರೆಯುತ್ತಿರುವರು.

ಕಾಳಿಕಾ ದೇವಾಲಯ:

ದೇವಾಲಯವು ಗ್ರಾಮದ ಒಳಭಾಗದಲ್ಲಿದ್ದು ಉತ್ಸವ ಮಲ್ಲಿಕಾರ್ಜುನ ದೇವಾಲಯದ ಎಡಭಾಗದಲ್ಲಿದೆ. ಮತ್ತು ಪೂರ್ವಾಭಿಮುಖವಾಗಿದ್ದು ದೊಡ್ಡ ದೇವಾಲಯವಾಗಿದೆ. ಇದರ ನೇರಕ್ಕೆ ಗರುಡ ಸ್ಥಂಬವಿದೆ. ಇಲ್ಲಿನ ಬಹುಪಾಲ ದೇವಾಲಯಗಳಂತೆ ಇದು ಸಹ ದ್ರಾವಿಡ ಶೈಲಿಯಲ್ಲಿ ರಚಿತವಾಗಿದ್ದು ಗ್ರಾನೈಟ್ ಶಿಲೆಯಿಂದ ಕೂಡಿದೆ. ದೇವಾಲಯದ ತಳವಿನ್ಯಾಸವು ಅದಿಷ್ಠಾನದ ಮೇಲ್ಭಾಗದಲ್ಲಿ ನಿರ್ಮಿತಗೊಂಡಿದೆ. ಗರ್ಭಗೃಹ, ಅಂತರಾಳ, ಮತ್ತು ನವರಂಗವನ್ನು ಹೊಂದಿದ್ದು ಗರ್ಭಗೃಹದ ಮೇಲ್ಭಾಗದಲ್ಲಿ ತ್ರಿಭುಜಕಾರದ ಭುವನೇಶ್ವರಿಯಿರುವುದು. ಇದರ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಗೋಪುರವಿರುವುದು, ದೇವಾಲಯವು ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ದ್ವಾರವನ್ನು ಗಜಾಮುಖಕಾರದ ಮೆಟ್ಟಿಲನ್ನು ಹೊಂದಿದೆ. ಇತರೆ ದೇವಾಲಯಗಳಂತೆ ಬಿತ್ತಿಯು ಕಲ್ಲು ಚಪ್ಪಡಿಯಿಂದ ಕಟ್ಟಲ್ಪಟ್ಟಿದೆ. ದ್ರಾವಿಡ ಶೈಲಿಯ ಸ್ಥಂಬಗಳು ಒಳಭಾಗದಲ್ಲಿದ್ದು ದೇವಾಲಯ ಛಾವಣಿಯನ್ನು ಹೊತ್ತು ನಿಂತಿವೆ. ಮೇಲ್ಛಾವಣಿಯ ಸುತ್ತಲೂ ಅಲಂಕೃತವಾಗಿದೆ. ಬಿತ್ತಿಯಲ್ಲಿ ಸರ್ಪ, ನಂದಿ ಮತ್ತು ಶೈವ ಲಿಂಗಕ್ಕೆ ಸೇರಿದ ಚಿತ್ರಗಳನ್ನು ಹೊಂದಿದೆ.

ಬಸವೇಶ್ವರ ದೇವಾಲಯ:

ಮಲ್ಲಿಕಾರ್ಜುನ ಬೆಟ್ಟದ ಆಗ್ನೇಯ ದಿಕ್ಕಿಗೆ ಇರುವ ಗ್ರಾಮ ಕುಡುಕುರು. ಈ ಗ್ರಾಮದ ಮಧ್ಯದಲ್ಲಿ ಬಸವೇಶ್ವರ ದೇವಾಲಯವಿದ್ದು ಉತ್ತರಾಭಿಮುಖವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಚೌಕಕಾರದ ಗರ್ಭಗೃಹವಿದ್ದು ಪಾಥಾಲಂಕನವನ್ನು ಒಳಗೊಂಡಿದೆ. ಇಪ್ಪತ್ತಾರು ಇಂಚು ಶಿಲೆಯಿಂದ ನಿರ್ಮಿತವಾದ ಅದಿಷ್ಠಾನದ ಮೇಲೆ ಇದ್ದು ಏಕಕೂಟ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗಕಾರದ ಪೀಠದ ಮೇಲೆ ಎರಡುವರೆ ಅಡಿ ಎತ್ತರದ ಬಸವೇಶ್ವರ ವಿಗ್ರಹವಿದ್ದು ಮೂಲ ವಿಗ್ರಹ ಸ್ಥಳಾಂತರಗೊಂಡಿದೆ. ಇದರ ಮೇಲೆ ತ್ರಿಭುಜಕಾರದ ಭುವನೇಶ್ವರಿ ಇದ್ದು ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಬಾಗಿಲುವಾಡವು

ಸುಂದರವಾಗಿದ್ದು ಲಾಲಟಬಿಂಬದಲ್ಲಿ ಜೈನಮೂರ್ತಿಯ ಅಸ್ಪಷ್ಟ ಚಿತ್ರವಿರುವುದು. ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ದ್ವಾರಪಾಲಕರ ಮೂರ್ತಿಶಿಲ್ಪವಿದೆ. ಗರ್ಭಗೃಹದ ಮುಂದಿನ ಭಾಗವೇ ಪಾಥಲಂಕನಾವಿದೆ. ಬಿತ್ತಿಯು ಕೆಂಪುಗಲ್ಲಿನ ಚಪ್ಪಡಿಗಳನ್ನು ಒಳಗೊಂಡಿದ್ದು ಜಗುಲಿಯ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಸ್ಥಂಬಗಳಿದ್ದು, ಸರಳವಾದ ಬೋಧಿಗೆಯನ್ನು ಹೊಂದಿದ್ದು ದೇವಾಲಯದ ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ಮೇಲ್ಛಾವಣಿಯ ನಾಲ್ಕು ದಿಕ್ಕಿಗೂ ಜೋಡಿಬಸವನ ವಿಗ್ರಹಗಳನ್ನು ಮುಭಾಗದಲ್ಲಿ ಆದಿಶೇಷನ ಮೂರ್ತಿ ಇದೆ. ಇದರ ಅಕ್ಕಪಕ್ಕದ ವಿಗ್ರಹಗಳು ಅಸ್ಪಷ್ಟವಾಗಿದ್ದು ಇಂಡೋ-ಇಸ್ಲಾಮಿಕ್ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ. ದೇವಾಲಯವು ಮೂರು ಮೆಟ್ಟಿಲುಗಳನ್ನು ಹೊಂದಿದ್ದು ಗಜಾಕಾರದ ಮೂರ್ತಿಗಳನ್ನು ಎರಡು ದಿಕ್ಕಿನಲ್ಲಿಯೂ ಕಾಣಬಹುದು. ಗರ್ಭಗೃಹದ ಮುಂದೆ ಜಗುಲಿಯ ಮೇಲೆ ವಿವಿಧ ರೀತಿಯ ಚಿತ್ರಗಳನ್ನು ಒಳಗೊಂಡಂತೆ ನಾಲ್ಕು ಸ್ಥಂಬಗಳು ಇರುವುದು. ಬಲಭಾಗದ ಸ್ಥಂಬದಲ್ಲಿ ನಂದಿಯ ಚಿತ್ರ, ಇದರ ತಳಭಾಗದಲ್ಲಿ ಸರ್ಪಗಳು ಸರಸದಲ್ಲಿರುವ ಚಿತ್ರ, ಇದರ ಕೆಳಗೆ ಮಹಿಳೆಯು ಗದೆಯನ್ನು ಹಿಡಿದು ತನ್ನ ತಲೆಯ ತುರುಬನ್ನು ಕಟ್ಟಿ ನಿಂತಿರುವಂತಿದೆ. ಇದರಲ್ಲಿ ಮಹಿಳೆಯು ಕಂಚಿನ ಕನ್ನಡಿಯನ್ನು ಹಿಡಿದು ಸೌಂದರ್ಯವನ್ನು ನೋಡುವ ರೀತಿಯಲ್ಲಿದ್ದು, ಇದರ ಮೇಲೆ ಶಿವಲಿಂಗವನ್ನು ಲಿಂಗವನ್ನು ಸರ್ಪವು ಸುತ್ತುವರಿದಿರುವುದಾಗಿದೆ.

ಬಲಭಾಗದ ಎರಡನೇ ಕಂಬದಲ್ಲಿ ಮಹಿಳೆಯ ವಿಭಿನ್ನ ರೀತಿಯ ಚಿತ್ರಗಳು ಮತ್ತೊಂದು ಭಾಗದಲ್ಲಿ ಗಣೇಶನ ಶಿಲ್ಪವಿರುವುದು. ಮೂರನೇ ಕಂಬದ ತಳಭಾಗದಲ್ಲಿ ವ್ಯಕ್ತಿಯು ಗದೆಯನ್ನು ಹಿಡಿದು ನಿಂತಿರುವ ನಾಲ್ಕು ಕೈಗಳಿರುವುದು, ಇದರ ಮೇಲ್ಭಾಗದಲ್ಲಿ ಪರ್ಶಿಯಾದ ಮುಸ್ಲಿಂ ಚಿತ್ರಗಳ ಕೆತ್ತನೆಯಿರುವುದು ಮತ್ತು ಮುಸ್ಲಿಂನು ಕುದುರೆಯೊಂದಿಗೆ ಶಿವಲಿಂಗವನ್ನು ನಾಶಪಡಿಸುತ್ತಿರುವುದು ಚಿತ್ರ, ಇದರ ಮೇಲೆ ಹಂಸದ ಶಿಲ್ಪವಿರುವುದು. ನಾಲ್ಕನೆಯ ಕಂಬದ ಮೇಲ್ಭಾಗದಲ್ಲಿ ಹಂಸ, ಮಹಿಳೆಯ ವಿವಿಧ ರೀತಿಯ ಚಿತ್ರಗಳನ್ನು ಒಳಗೊಂಡಂತೆ ಓಲಗವನ್ನು ಊದುತ್ತಿರುವ ಚಿತ್ರ, ಇದರ ತಳಭಾಗದಲ್ಲಿ ಆನೆಯ ಚಿತ್ರವಿದ್ದು ಅರಸನು ಕುಳಿತ್ತಿರುವುದು ಕಂಡುಬಂದಿದೆ.

ಗರ್ಭಗೃಹಕ್ಕೆ ನೇರವಾಗಿ ನಾಲ್ಕು ಅಡಿ ಪೀಠದ ಮೇಲೆ ಇಪ್ಪತ್ತು ಅಡಿ ಎತ್ತರದ ಬ್ರಹ್ಮಸ್ಥಂಬವುರುವುದು. ಇದರ ಸುತ್ತ ತಳಭಾಗದಲ್ಲಿ ಗಣೇಶ, ವೀರಭದ್ರ ಮತ್ತು ಉದ್ದನೆಯ ನೀಲುವಂಗಿಯನ್ನು ಧರಿಸಿರುವ ಕೆತ್ತನೆಯಿರುವುದು.

ಆರ್ಕೇಶ್ವರ ದೇವಾಲಯ: ಆರ್ಕೇಶ್ವರ ದೇವಾಲಯವು ಕುಡುಕುರು ಗ್ರಾಮದ ಕೆರೆಯ ದಂಡೆಯ ಮೇಲಿದೆ. ಇದು ಪೂರ್ವಾಭಿಮುಖವಾಗಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪವನ್ನು ಹೊಂದಿದೆ. ದೇವಾಲಯದ ಅದಿಷ್ಠಾನವಿದ್ದರೂ ಸಂಪೂರ್ಣವಾಗಿ

ಮಣ್ಣಿನಿಂದ ಮುಚ್ಚಲ್ಪಟ್ಟಿರುವುದಾಗಿದೆ ಮತ್ತು ಗರ್ಭಗೃಹ ಚಿಕ್ಕದಾಗಿದ್ದು ತ್ರಿಭುಜಕಾರದ ಭುವನೇಶ್ವರಿಯನ್ನು ಒಳಗೊಂಡು ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಪ್ರವೇಶದ್ವಾರವು ಸರಳವಾಗಿದ್ದು ಲಲಾಟಬಿಂಬದ ಮೇಲೆ ಯಾವುದೇ ರೀತಿಯ ಕೆತ್ತನೆ ಕಾಣದಷ್ಟು ಸುಣ್ಣವನ್ನು ಬಳಿದಿರುವರು. ಅಂತರಾಳವು ತುಂಬಾ ಚಿಕ್ಕದಾಗಿದ್ದು ಯಾವುದೇ ವಿಗ್ರಹಗಳಿರುವುದಿಲ್ಲ. ನಂತರ ನವರಂಗದಲ್ಲಿ ಯಾವುದೇ ಶಿಲ್ಪವಿರುವುದಿಲ್ಲ ಮತ್ತು ಸ್ವಲ್ಪ ಪ್ರಮಾಣದಲ್ಲಿ ವಿಶಾಲವಾಗಿದ್ದು ಕತ್ತಲೆಯಿಂದ ಕೂಡಿರುವುದಾಗಿದೆ. ನಂದಿ, ಪಾರ್ವತಿ, ವಿನಾಯಕನ ವಿಗ್ರಹಗಳು ಕಂಡುಬಂದಿದ್ದು ಮೂಲ ಗರ್ಭಗೃಹದ ವಿಗ್ರಹವು ಸ್ಥಳಾಂತರಗೊಂಡಿದ್ದು ನೂತನ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿರುವರು. ನವರಂಗದಲ್ಲಿ ನಾಲ್ಕು ಸ್ಥಂಬಗಳು ಪೀಠವಿಲ್ಲದೆ ದೇವಾಲಯದ ತೊಲೆಯನ್ನು ಹೊತ್ತು ನಿಂತಿವೆ. ಸ್ಥಂಬವು ತಳಭಾಗದಲ್ಲಿ ಚೌಕಕಾರವಿದ್ದು, ಅದರ ಮೇಲೆ ಆರು ಕೋನಗಳು, ನಂತರ ಕುಂಬ, ಅದರ ಮೇಲೆ ಸ್ವಾತಂತ್ರವಾದ ವೃತ್ತದಕಾರ ಶಿಲೆ, ನಂತರ ತೊಲೆ ಇರುವುದಾಗಿದೆ. ಸಂಪೂರ್ಣ ಕಲ್ಲು ಚಪ್ಪಡಿಗಳಿಂದ ಬಿತ್ತಿ ಮತ್ತು ಮೇಲ್ಛಾವಣಿಯಿರುವುದು. ಸ್ಥಂಬಗಳ ಮೇಲೆ ಯಾವುದೇ ಕೆತ್ತನೆ ಇರುವುದಿಲ್ಲ. ಮತ್ತು ನವರಂಗವು ತೆರದ ಮಂಟಪವಾಗಿದ್ದು ನಂತರದ ದಿನಗಳಲ್ಲಿ ಬಿತ್ತಿಯನ್ನು ಕಟ್ಟಿರುವ ಲಕ್ಷಣ ಕಂಡುಬಂದಿದೆ. ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿಬಸವನ ವಿಗ್ರಹವಿರುವುದು. ದೇವಾಲಯವು ಎಪ್ಪತ್ತು ಇಂಚು ಎತ್ತರವಾಗಿದ್ದು ೧೭೦ ಇಂಚು ಅಗಲ ಮತ್ತು ೩೫೦ ಇಂಚು ಉದ್ದವಾಗಿದೆ. ಮೂಲತಃ ಜಿನ ಬಸದಿಯ ಲಕ್ಷಣಗಳನ್ನು ಒಳಗೊಂಡಿದೆ.

ಬಸವೇಶ್ವರ ದೇವಾಲಯ: ದೇವಾಲಯವು ಬಾರ್ಸೆ ಗ್ರಾಮದಲ್ಲಿದ್ದು ಮಲ್ಲಿಕಾರ್ಜುನ ಬೆಟ್ಟದ ತಳಭಾಗದಲ್ಲಿರುವ ದಕ್ಷಿಣ ದಿಕ್ಕಿನಲ್ಲಿದೆ. ಇದು ಶೈವ ದೇವಾಲಯವಾಗಿದ್ದು, ಉತ್ತರಾಭಿಮುಖವಾಗಿದೆ. ದೇವಾಲಯವು ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ತಳವಿನ್ಯಾಸವು ಚೌಕಕಾರದ ಗರ್ಭಗೃಹ, ವೇದಿಕೆ ಅಥವಾ ಜಗುಲಿಯನ್ನು ಒಳಗೊಂಡು ಸಂಪೂರ್ಣ ಕೆಂಪು ಬಣ್ಣದ ಗ್ರಾನೈಟ್ ಶಿಲೆಯಿಂದ ನಿರ್ಮಿಸಿರುವುದು ಕಂಡುಬಂದಿದೆ. ದೇವಾಲಯದ ಬಿತ್ತಿಯು ಕಲ್ಲು ಚಪ್ಪಡಿಗಳಿಂದ ಒಂದರ ಮೇಲೆ ಒಂದನ್ನು ಜೋಡಿಸುವುದರ ಮೂಲಕ ರಚಿಸಲಾಗಿದೆ. ಒಳಬಿತ್ತಿಯಲ್ಲಿ ಯಾವುದೇ ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ. ಮತ್ತು ದೇವಾಲಯದ ಗರ್ಭಗೃಹ ಚಿಕ್ಕದಾಗಿದ್ದು ಮೂರು ಅಡಿ ಎತ್ತರದ ಶಿವಲಿಂಗ ಆಕಾರದ ಪೀಠಗಳ ಮೇಲೆ ಬಸವೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮೂಲ ವಿಗ್ರಹವು ಸ್ಥಳಾಂತರಗೊಂಡಿದ್ದು, ಗರ್ಭಗುಡಿಯ ಮೇಲೆ ತ್ರಿಭುಕಾರದ ಭುವನೇಶ್ವಯಿರುವುದು ಮತ್ತು ಅದರ ಮೇಲೆ ದ್ರಾವಿಡ ಶೈಲಿಯ ಗೊಮ್ಮಟಾಕಾರದ ಗೋಪುರವಿದೆ. ಬಿತ್ತಿಯ ಹೊರಭಾಗದ ಬಲಭಾಗದಲ್ಲಿ ಸರ್ಪ. ಎರಡು ಮತ್ಸ್ಯಗಳ ಚಿತ್ರಣ, ಗರ್ಭಗೃಹದ ಹಿಂದಿನ

ಬಿತ್ತಿಯಲ್ಲಿ ಚಿಕ್ಕ ಆಮೆ, ವರಹ, ಹುಲಿಯ ಉಬ್ಬು ಶಿಲ್ಪ ಮತ್ತು ಇದರ ಮೇಲೆ ಸರ್ಪ, ಆನೆಯ ಶಿಲ್ಪಗಳ ಕೆತ್ತನೆಯಿರುವುದು. ದೇವಾಲಯದ ಪಶ್ಚಿಮ ಹೊರ ಬಿತ್ತಿಯಲ್ಲಿ ದಂಪತಿಗಳಿಬ್ಬರು ಲೈಂಗಿಕ ಕ್ರೀಡೆಯಲ್ಲಿ ತೊಡಗಿರುವ ಉಬ್ಬುಶಿಲ್ಪವಿರುವುದು.

ಗರ್ಭಗೃಹ ಪ್ರವೇಶದ್ವಾರದ ಬಾಗಿಲುವಾಡವು ಸುಂದರವಾಗಿದ್ದು ಲಲಾಟಬಿಂಬದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಎರಡು ಕಡೆಯು ದ್ವಾರಪಾಲಕರು ನಿಂತಿದ್ದಾರೆ. ಬಲಭಾಗದ ದ್ವಾರಪಾಲಕನು ನಾಲ್ಕು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ತ್ರಿಶೂಲ, ಮತ್ತೊಂದರಲ್ಲಿ ಆಭಯ ಹಸ್ತವಿರುವುದು. ಎಡಗೈಯಲ್ಲಿ ಗದೆ, ಡಮರುಗವಿರುವುದು. ಗರ್ಭಗೃಹದ ಎಡಭಾಗದ ಶಿಲ್ಪದಲ್ಲಿ ಬಲಗೈಯಲ್ಲಿ ತ್ರಿಶೂಲ, ಮತ್ತೊಂದರಲ್ಲಿ ಗದೆ, ಎಡಗೈಯಲ್ಲಿ ಡಮರುಗ ಮತ್ತೊಂದರಲ್ಲಿ ಅಭಯ ಹಸ್ತವಿರುವುದಾಗಿದೆ. ಈ ಎರಡು ಶಿಲ್ಪಗಳು ಪೀಠದ ಮೇಲೆ ನಿಂತಿದ್ದು ನಲವತ್ತು ಇಂಚುಗಳಿರುವುದು.

ದೇವಾಲಯದ ಜಗುಲಿಯ ಮೇಲೆ ಮೂಲ ನಾಲ್ಕು ಸ್ಥಂಬಗಳಿದ್ದು, ಐದನೆಯ ಸ್ಥಂಬವನ್ನು ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ, ಮೇಲ್ಛಾವಣೆಯ ಭದ್ರತೆಯ ದೃಷ್ಟಿಯಿಂದ ನಿಲ್ಲಿಸಲಾಗಿದೆ. ಎಲ್ಲ ಸ್ಥಂಬಗಳ ಮೇಲೆ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯ ಉಬ್ಬುಶಿಲ್ಪಗಳ ಕೆತ್ತನೆಯನ್ನು ಕೆತ್ತಲಾಗಿದೆ. ಇಲ್ಲಿಯ ಪ್ರತಿಯೊಂದು ಸ್ಥಂಬವು ಅರವತ್ತಾರು ಇಂಚು ಎತ್ತರ ಮತ್ತು ಅರವತ್ತಾರು ಇಂಚು ದಪ್ಪವಿರುವುದು. ಗರ್ಭಗುಡಿಯ ಬಲಭಾಗದ ಮೊದಲನೆಯ ಕಂಬದಲ್ಲಿ ವ್ಯಕ್ತಿಯೊಬ್ಬ ಓಲಗ ಊದುತ್ತಿರುವ, ಮಹಿಳೆ ಡಮರುಗವನ್ನು ತಮಟೆಯನ್ನು ಬಾರಿಸುತ್ತಿರುವ ಚಿತ್ರವಿರುವುದು. ನಂತರದ ಭಾಗದಲ್ಲಿ ಭಕ್ತ ಬಾಣವನ್ನು ಹುಡುಕುತ್ತಿರುವ ಇದರ ಮೇಲೆ ಮುನಿಯು ತಪಸ್ಸು ಮಾಡುತ್ತಿರುವ ವ್ಯಕ್ತಿಯಬ್ಬನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಭೂಮಿಯನ್ನು ಹಿಡಿದು ಶಕ್ತಿ ಪದರ್ಶಿಸುತ್ತಿರುವ ಚಿತ್ರವಿರುವುದು. ನಂತರದ ಬದಿಯಲ್ಲಿ ಮಹಿಳೆಯೊಬ್ಬಳು ನಮಿಸುತ್ತಿರುವ, ಭಕ್ತನೊಬ್ಬ ಸರ್ಪದ ಮೇಲೆ ನಿಂತು ಎಡಗಾಲನ್ನು ಬಾಲದ ಮೇಲೆ, ಹೆಡೆಯ ಮೇಲೆ ಬಾಲಕನ ಮೂರ್ತಿ, ಮತ್ತು ಬಲಗೈಯಲ್ಲಿ ಗುಂಡನ್ನು ಹಿಡಿದಿರುವುದಾಗಿದೆ. ಮಹಿಳೆಯು ಡಮರುಗವನ್ನು ಭಾರಿಸುತ್ತಿರುವ ಶಿಲ್ಪವಿದ್ದು, ಮಹಿಳೆಯೊಬ್ಬಳು ಕೈಮುಗಿದು ನಿಂತಿರುವ ದೃಶ್ಯ, ಮಹಿಳೆ ಶಂಕವನ್ನು ಊದುತ್ತಿರುವ, ವೀಣೆಯನ್ನು ಕುಳಿತು ಭಾರಿಸುತ್ತಿರುವ ದೃಶ್ಯವಿದೆ.

ಬಲಭಾಗದ ಎರಡನೇ ಸ್ಥಂಬದಲ್ಲಿ ಭಕ್ತೆಯೊಬ್ಬಳು ಕೈಮುಗಿದು ನಿಂತಿರುವ ದೃಶ್ಯ, ಉದ್ದನೆಯ ನಿಲುವಂಗಿಯನ್ನು ಧರಿಸಿರುವ, ಪರ್ಶಿಯದ ವ್ಯಕ್ತಿಯೊಬ್ಬ ನಾಲ್ಕು ಕೈಗಳನ್ನು ಹೊಂದಿರವನು. ಉದ್ದನೆಯ ದಾಡಿಯನ್ನು ಬಿಟ್ಟಿರುವ, ತ್ರಿಶೂಲ, ಹಸ್ತಚಾಚಿರುವ, ಡಮರುಗವನ್ನು

ಎಡಗೈಯಲ್ಲಿ ಹಿಡಿದು ಕುಳಿತ್ತಿರುವ ದೃಶ್ಯವಿದೆ. ಇದರ ಮೇಲೆ ಶಿವಲಿಂಗಕ್ಕೆ ಹಸುವು ಹಾಲು ಸುರಿಸುತ್ತಿರುವ ಶಿಲ್ಪವಿದೆ. ಕನ್ಯೆಯು ನೃತ್ಯ ಮಾಡುತ್ತಿರುವ, ವ್ಯಕ್ತಿಯೊಬ್ಬ ಮಗಳನ್ನು ತೊಡೆಯ ಮೇಲೆ ಕುರಿಸಿಕೊಂಡಿರುವ ಶಿಲ್ಪವಿದ್ದು, ವಿವಿಧ ರೀತಿಯ ವೈಧಿಕ ಧರ್ಮಗಳಿಗೆ ಅನುಗುಣವಾಗಿ ವಿಭಿನ್ನ ಶಿಲ್ಪಗಳ ಕೆತ್ತನೆ ಇರುವುದಲ್ಲದೆ ಮಿಥುನ ಶಿಲ್ಪಗಳ ಕೆತ್ತನೆಯು ಕಂಬಗಳ ಮೇಲಿರುವುದಾಗಿದೆ.

ದೇವಾಲಯದ ನಾಲ್ಕು ದಿಕ್ಕಿಗೂ ಜೋಡಿ ಬಸವನ ವಿಗ್ರಹಗಳಿದ್ದು ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಮೂರು ಗೂಡುಗಳು ಇವೆ. ಪ್ರವೇಶದ್ವಾರದ ಮೆಟ್ಟಿಲುಗಳಲ್ಲಿ ಎರಡು ಆನೆಗಳಿದ್ದು ದೇವಾಲಯವನ್ನು ಹೊತ್ತು ನಿಂತಿರುವಂತೆ ಕಾಣುವುದು. ಮತ್ತು ಜಗುಲಿಯಲ್ಲಿ ಮರದಿಂದ ಮಾಡಲ್ಪಟ್ಟ ಪ್ರಾಚೀನ ಶಿಥಿಲವಾದ ರಥವಿದೆ. ಇತರೆ ಎಲ್ಲಾ ಸ್ಥಳೀಯ ದೇವಾಲಯಗಳಿಗಿಂತ ಅತ್ಯಧಿಕ ಸಂಖ್ಯೆಯ ಶೈವ ಚಿತ್ರಗಳ ಕೆತ್ತನೆಯಿದ್ದು ಶಿಥಿಲವಾಗುತ್ತಿದೆ. ಗರ್ಭಗುಡಿಯ ಮುಂದೆ ಇಪ್ಪತ್ತು ಅಡಿ ಎತ್ತರದ ಗರುಡ ಸ್ಥಂಬವಿದ್ದು, ವಿಜಯನಗರ ಶೈಲಿಯ ಲಕ್ಷಣಗಳನ್ನು ಹೊಂದಿದೆ.

ಈಶ್ವರ ದೇವಾಲಯ:

ಮಲ್ಲಿಕಾರ್ಜುನ ಬೆಟ್ಟ ಪಶ್ಚಿಮ ದಿಕ್ಕಿಗೆ ಆರು ಕಿ.ಮೀ. ದೂರದಲ್ಲಿರುವ ಗ್ರಾಮವೇ ದೊಡ್ಡನೆರ್ಲೆ. ಇದು ಶೈವ ದೇವಾಲಯವಾಗಿದ್ದು ಉತ್ತಾರಾಭಿಮುಖವಾಗಿರುವುದು ಮತ್ತು ಏಕಕೂಟ ದೇವಾಲಯವಾಗಿದೆ. ದೇವಾಲಯದ ತಳವಿನ್ಯಾಸವು ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ದೇವಾಲಯ ನಿರ್ಮಾಣಗೊಂಡಿದೆ. ಹಾಗೆಯೇ ಗರ್ಭಗೃಹ, ವೇದಿಕೆಯನ್ನು ಒಳಗೊಂಡಿದ್ದು ಬಿತ್ತಿಯು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದೆ. ಗರ್ಭಗೃಹದಲ್ಲಿ ಇಂದು ಯಾವುದೇ ಮೂಲವಿಗ್ರಹಗಳಿಲ್ಲದೆ, ಶಿವಲಿಂಗಾಕಾರದ ಅವಶೇಷಗಳಿವೆ. ಗರ್ಭಗೃಹದ ಮೇಲೆ ಪುಷ್ಪಾಲಂಕಾರದ ಭುವನೇಶ್ವರಿಯಿದ್ದು ದ್ರಾವೀಡ ಶೈಲಿಯ ಗೋಪುರವಿದೆ. ಈ ಗೋಪುರದಲ್ಲಿ ವೈಧಿಕ ಧರ್ಮಕ್ಕೆ ಅನುಗುಣವಾಗಿ ವಿವಿಧ ರೀತಿಯ ಇಟ್ಟಿಗೆಗಳಿಂದ ಮಾಡಲ್ಪಟ್ಟ ಅವಶೇಷಗಳ ಮೂರ್ತಿಗಳಿವೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರಿದ್ದಾರೆ. ಬಾಗಿಲುವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಶಿವನ ಲಿಂಗವಿದೆ. ಇದರ ಮುಂದಿನ ಭಾಗವೇ ಜಗತಿಯಾಗಿದ್ದು ಬಿತ್ತಿಗೆ ಸೇರಲ್ಪಟ್ಟ ನಾಲ್ಕು ಸ್ಥಂಬಗಳು ಇವೆ. ಸ್ಥಂಬಗಳು ಚೌಕಕಾರವಾಗಿದ್ದು ಸರಳವಾದ ಬೋಧಿಗೆಯನ್ನು ಒಳಗೊಂಡಿದ್ದು, ತೊಲೆ ಮತ್ತು ಮೇಲ್ಛಾವಣೆಯನ್ನು ಹೊತ್ತು ನಿಂತಿವೆ. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕೂಗಳಿಗೂ ಅನುಗುಣವಾಗಿ ಗಾರೆಯಿಂದ ನಿರ್ಮಿಸಲ್ಪಟ್ಟ ಎಂಟು ಜೋಡಿ ನಂದಿವಿಗ್ರಹಗಳು ಇರುವುದು. ದೇವಾಲಯದ ಮೆಟ್ಟಿಲುಗಳು ಗಜಾಕಾರದ ವಿಗ್ರಹಗಳನ್ನು ಹೊಂದಿದ್ದು, ಗರ್ಭಗೃಹಕ್ಕೆ ನೇರವಾಗಿ ಮೂರವರೆ ಅಡಿ ಪೀಠದ ಮೇಲೆ ಹದಿನೈದು ಅಡಿ ಎತ್ತರದ ಸ್ಥಂಬವಿದೆ. ಈ ಸ್ಥಂಬದಲ್ಲಿ ನೃತ್ಯಮಾಡುತ್ತಿರುವ, ಡಮರುಗವನ್ನು ಬಾರಿಸುತ್ತಿರುವ ಕನ್ಯೆಯ ಚಿತ್ರಗಳಲ್ಲದೆ ವೀರಭದ್ರನ ಅಸ್ಪಷ್ಟ ಚಿತ್ರವಿದೆ.

ಜಗತ್ತಿಯ ಮೇಲಿರುವ ಕಂಬಗಳಲ್ಲಿ ವೃಷಭ, ಉಗ್ರನರಸಿಂಹ, ಶಿವಲಿಂಗ, ನಂದಿ ಮತ್ತು ಗಣೇಶನ ಉಬ್ಬುಶಿಲ್ಪಗಳಿದ್ದು ದೇವಾಲಯ ಇಂದು ಅತ್ಯಂತ ಶಿಥಿಲ ವ್ಯವಸ್ಥೆಯಲ್ಲಿದೆ. ಹಾಗೂ ವಿಜಯನಗರ ಕಾಲಕ್ಕೆ ಸೇರಲ್ಪಟ್ಟಿದ್ದು ಒಟ್ಟು ಹತ್ತು ಸ್ಥಂಬಗಳನ್ನು ಹೊಂದಿದೆ.

ಪಾಪನಾಶಿನಿ ಗುಹೆ:

ಪಾಪನಾಶಿನಿ ಗುಹೆಯು ಮಲ್ಲಿಕಾರ್ಜುನ ಬೆಟ್ಟದ ಪಶ್ಚಿಮಕ್ಕಿರುವ ಆಂಜನೇಯ ದೇವಾಲಯದ ತಳಭಾಗದಲ್ಲಿದೆ. ಗುಹೆಗೆ ಪಶ್ಚಿಮಾಭಿಮುಖ ದ್ವಾರವಿದ್ದು, ಪೂರ್ವ ಭಾಗದಲ್ಲಿ ವ್ಯಕ್ತಿಯು ನುಸುಳಿಕೊಂಡು ಬರುವಂತಹ ಸ್ವಾಭವಿಕ ಮೆಟ್ಟಿಲುಗಳ ಕಿಂಡಿಯಿರುವುದು. ಪ್ರವೇಶದ್ವಾರವು ತುಂಬ ಚಿಕ್ಕದಾಗಿದ್ದು ೨' x ೩' ರಷ್ಟು ಅಗಲವಾಗಿದೆ. ಸಭಾಪ್ರಾಂಗಣವೆಂದು ಕರೆಯುವಷ್ಟು ವಿಶಾಲವಾಗಿದ್ದು ೧೫' x ೨೦' ರಷ್ಟು ವಿಸ್ತೀರ್ಣವುಳ್ಳದ್ದಾಗಿದೆ. ಈ ಪ್ರಾಂಗಣದಿಂದ ಉತ್ತರಕ್ಕೆ ಹೋದಂತೆ ಒಂದು ಸ್ವಾಭಾವಿಕ ಬಾಗಿಲು ಇದ್ದು ಇನ್ನೊಂದು ಗುಹೆಗೆ ದಾರಿಯನ್ನು ಕಲ್ಪಿಸುತ್ತದೆ. ಇದರಲ್ಲಿ ಕಲ್ಲಿನಿಂದ ನಿರ್ಮಿಸಿದ ಒಂದು ಸಮತಟ್ಟಾದ ಪ್ರದೇಶವಿದ್ದು ಪೀರಾಮಿಡ್ ಆಕಾರವನ್ನು ಹೊಂದಿದೆ. ಈ ಸಮತಟ್ಟಿನ ಬಲಭಾಗದಲ್ಲಿ ಒಂದು ಸಣ್ಣ ಕಿಂಡಿಯಿದ್ದು ಅಲ್ಲಿ ಇನ್ನೊಂದು ಗುಹೆಯಿರುವುದು. ಮತ್ತು ವಿಸ್ತೀರ್ಣದಲ್ಲಿ ಮೊದಲನೆಯದಕ್ಕಿಂತ ಚಿಕ್ಕದಾಗಿದೆ. ಈ ಸಮತಟ್ಟಿನ ತುದಿಯಲ್ಲಿ ಎರಡು ಶಿವಲಿಂಗಗಳಿದ್ದವು ಎಂದು ಮೈಸೂರು ಸರ್ಕಾರದ ಪುರಾತತ್ವ ಇಲಾಖೆಯ ವರದಿಯಲ್ಲಿ ಹೇಳಿದೆ. ಆದರೆ ಯಾವುದೇ ಲಿಂಗಗಳು ಇಂದು ಗುಹೆಯಲ್ಲಿ ಕಂಡುಬರುವುದಿಲ್ಲ. ಲಿಂಗದ ಪೀಠಮಾತ್ರ ಉಳಿದಿದ್ದು ಪೀಠದ ಅಳತೆಯು ೧° ರಿಂದ ೯' x ೧' – ೦° ವಿಸ್ತೀರ್ಣವಿದೆ. ಪುರಾತತ್ವ ವರದಿಯು ದೊಡ್ಡ ಲಿಂಗದ ಸುತ್ತಳತೆಯು ನಾಲ್ಕೂವರೆ ಅಡಿ ಅಗಲವಿದ್ದರೆ ಏಳೂವರೆ ಅಡಿ ಉದ್ದವಿತ್ತು ಎಂದಿದೆ. ಇದು ಚಿಕ್ಕಲಿಂಗದ ಹಿಂಭಾಗದಲ್ಲಿದ್ದು, ಅದರ ಸುತ್ತಳತೆ ಮೂರುವರೆ ಅಡಿ ಅಗಲ ಮತ್ತು ಐದೂವರೆ ಅಡಿ ಎತ್ತರವಿತ್ತೆಂದು ವರದಿಯಲ್ಲಿ ತಿಳಿಸಿದೆ. ಆದರೆ ಲಿಂಗಗಳು ಇಂದು ಕಾಣದೆ ತಳಭಾಗದ ಪೀಠ ಮಾತ್ರವಿರುವುದು. ಇದರ ತುದಿಯಲ್ಲಿ ಒಂಬತ್ತು ಶಿವಲಿಂಗಗಳಿದ್ದು ಸರ್ಪದಿಂದ ಸುತ್ತುವರಿಯಲ್ಪಟ್ಟಿದೆ. ಇದು ಬಹುತೇಕ ಕಪ್ಪು ಕಾಡುಗಲ್ಲಿನಿಂದ ಕೆತ್ತನೆಗೊಂಡಿದ್ದು ವೃತ್ತಾಕಾರವಾಗಿದೆ. ಚಿಕ್ಕ ಲಿಂಗದಲ್ಲಿ ಪಾರ್ವತಿಯ ಚಿತ್ರವಿದ್ದು, ಪೀಠದ ನಾಲ್ಕು ತುದಿಗಳಲ್ಲೂ ಒಂದೊಂದು ಚಿತ್ರವಿದೆ. ಪಂಚಪಾಂಡವರು, ರಾಮ ಲಕ್ಷ್ಮಣ, ಲವ, ಕುಶ, ಗರುಡ, ವೀರಭದ್ರ, ಭೈರವ, ಹರಿ, ಹರ, ಬ್ರಹ್ಮ, ವಿಭೀಷಣ, ಬಲಿಚಕ್ರವರ್ತಿ, ಚನ್ನಬಸವ, ನೀಲಲೋಚನೆ ಮತ್ತು ಗಣಪತಿ, ಹರಿಶ್ಚಂದ್ರ, ಚಂದ್ರಮತಿ ಮೊದಲಾದ ಚಿತ್ರಗಳ ಕೆತ್ತನೆ ಇರುವುದು. ಅಲ್ಲದೇ ನರಿ, ನಾಯಿ, ಆನೆ, ಇಲಿ, ಸಿಂಹ, ಪ್ರಾಣಿ ಮುಂತಾದ ಪಕ್ಷಿಗಳ ಕೆತ್ತನೆ ಇರುವುದು. ಲಿಂಗಕ್ಕೆ ಅಭಿಷೇಕ ಮಾಡಿದ ನೀರು ಹರಿದು ಹೋಗುವ ಭಾಗದಲ್ಲಿ ಪೀಠದ ಎರಡು ಬದಿಗಳಲ್ಲಿ ಏಳು ಹೆಡೆಯ ನಾಗದೇವರನ್ನು ತಲೆಯ ಭಾಗದಲ್ಲಿ

ಹೊಂದಿರುವ ಕಿವಿಯೋಲೆ, ಸರ, ಮತ್ತೀತರ ಆಭರಣಗಳುಳ್ಳ ಒಂದು ಸ್ತ್ರೀಯ ಚಿತ್ರವಿದ್ದು ಪೀಠದ ಮೇಲೆ 'ಸುಬ್ರಮಣ್ಯದೇವ'ವೆಂದು ಕೊರೆಯಲಾಗಿದೆ.

ಪೀಠದಲ್ಲಿರುವ ನಾಗದೇವರ ಹೆಡೆಗಳ ಎಡಭಾಗದಲ್ಲಿ ಉಚ್ಛಿಷ್ಠ ಗಣಪತಿ ಅಥವಾ ಶಕ್ತಿಗಣಪತಿಯ ಚಿತ್ರವಿದ್ದು, ತೊಡೆಯ ಮೇಲೆ ನಗ್ನ ಮಹಿಳೆಯ ಚಿತ್ರವಿದೆ. ಇದರ ಕೆಳಗೆ ಜಿನ ಎಂದು ಕೆತ್ತಲ್ಪಟ್ಟಿರುವುದರಿಂದ ಹಿಂದೂ ಮತ್ತು ಜೈನರ ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ. ಪ್ರಾಣಿ-ಪಕ್ಷಿಗಳ ಚಿತ್ರವಿರುವುದು ಅಸ್ಪಷ್ಟವಾದರೂ, ಜೈನ ಧರ್ಮದ ಪ್ರಭಾವವನ್ನು ಸೂಚಿಸುತ್ತದೆ. ಈ ರೀತಿಯಾದ ಕೆತ್ತನೆಯು ನಮ್ಮ ರಾಜ್ಯದಲ್ಲಿ ಬೇರೆ ಎಲ್ಲಿಯೂ ಕಂಡುಬಂದಿಲ್ಲ ಮತ್ತು ಆಗಮ ಶಾಸ್ತ್ರಗಳಲ್ಲಿಯೂ ಈ ರೀತಿಯ ಶಿಲ್ಪಗಳ ಉಲ್ಲೇಖವಿಲ್ಲವೆಂದು ಕಂಡುಬಂದಿದೆ.

ಗುಹಾಲಯವನ್ನು ದೊಡ್ಡಕಾಡುಗಲ್ಲಿನಿಂದ ಮಣ್ಣು ಜಾರದಂತೆ ಮತ್ತು ನೈಸರ್ಗಿಕವಾಗಿ ಕೊರೆದಿರುವಂತೆ ಕಾಣುವುದು. ಗುಹಾಲಯವು ಇತರೆ ಎಲ್ಲಾ ಗುಹೆಗಳಿಗಿಂತ ವಿಭಿನ್ನವಾಗಿದ್ದು ವಾಸ್ತುಶೈಲಿಯ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲಾ, ಮತ್ತು ಪ್ರವೇಶದ್ವಾರದ ಸಮೀಪದಲ್ಲಿ ಒಂದು ಸ್ಥಂಬವಿದ್ದು, ತಳಭಾಗದಲ್ಲಿ ಮಿಥುನ ಶಿಲ್ಪವಿರುವುದು.

ಏಣಿ ಹನುಮಂತ ದೇವಾಲಯದ ಬಲಬದಿಗೆ ಮತ್ತೊಂದು ಗುಹಾಲಯವಿದ್ದು, ದೊಡ್ಡ ಬಂಡೆಯ ತಳಭಾಗದಲ್ಲಿ ನಿರ್ಮಿತಗೊಂಡಿದೆ. ಹತ್ತು ಅಡಿ ಉದ್ದ, ಅಗಲ, ಐದು ಅಡಿ ವಿಸ್ತೀರ್ಣ ಉಳ್ಳಂತಹ ಗುಹೆಯಾಗಿದೆ. ಇದರಲ್ಲಿ ೪'x೫' ಮತ್ತು ೬' x ೫' ಸುತ್ತಳತೆಯ ಎರಡು ಕವಾಟಗಳಿದ್ದು, ತುಂಬಾ ಕತ್ತಲೆಯಿಂದ ಕೂಡಿರದೆ ಸ್ವಲ್ಪ ಪ್ರಮಾಣದ ಬೆಳಕಿರುವುದು ಕಾಡುಪ್ರಾಣಿಗಳಿಂದ ರಕ್ಷಿಸಕೊಳ್ಳಲು ಉತ್ತಮ ಪ್ರದೇಶವೆಂದು ಹೇಳಬಹುದು.

ಮೂಡಲ ಗವಿ:

ಮೂಡಲದಿಕ್ಕಿಗೆ ಇರುವುದರಿಂದ ಮೂಡಲ ಗವಿಯೆಂದು, ಗವಿಯ ಒಳಗೆ ವೀರಭದ್ರನ ವಿಗ್ರಹವಿರುವುದರಿಂದ ವೀರಭದ್ರನ ಗವಿಯೆಂದು ಕರೆಯಲಾಗಿದೆ. ಬೆಟ್ಟದ ತುಂಗದಿಂದ ಮಲ್ಲಿಕಾರ್ಜುನ ಬೆಟ್ಟಕ್ಕೆ ಮೆಟ್ಟಿಲು ಹತ್ತುವ ಸಮೀಪದಲ್ಲಿದೆ. ಇದೊಂದು ಬೃಹತ್ ಬಂಡೆಯಾಗಿದ್ದು ಒಳಪ್ರವೇಶಿಸಲು ಭಯವಾಗುತ್ತದೆ. ಬೆಳಕಿಲ್ಲದೆ ಸಂಪೂರ್ಣ ಕತ್ತಲೆಯಿರುವ ಗುಹೆಯಾಗಿದೆ. ಪ್ರಾರಂಭದ ಎರಡು ಕೋಣೆಯಲ್ಲಿ ಸ್ವಲ್ಪ ಪ್ರಮಾಣದ ಬೆಳಕಿರುವುದು, ಮತ್ತು ಪ್ರವೇಶದ್ವಾರ ಬಾಗಿಲುವಾಡವು ಸಾಮಾನ್ಯ ಕಂಬಗಳಂತೆ ಇದ್ದು ಲಲಾಟಬಿಂಬದಲ್ಲಿ ಶಿವಲಿಂಗವಿದೆ. ಪ್ರಾರಂಭದ ಕೋಣೆಯ ಬಲಬದಿಗೆ ನಂದಿ ವಿಗ್ರಹವಿರುವುದು. ಗುಹೆಯು ಹದಿನೇಳು ಅಡಿ ಉದ್ದ ಮತ್ತು ಹನ್ನೆರಡು ಅಡಿ ಅಗಲದ ವಿಸ್ತೀರ್ಣದ ವಿಶಾಲದ ಸ್ಥಳವನ್ನು ಹೊಂದಿದೆ. ಬಲಬದಿಯಲ್ಲಿ ೬' x ೬' ಮತ್ತು ೮' x ೭' ವಿಸ್ತೀರ್ಣದ ಎರಡ ಗುಹೆಗಳಿವೆ. ಈ ವಿಶಾಲ ಪ್ರಾಂಗಣವು ೧೭' x

೧೮' ವಿಸ್ತೀರ್ಣದ ಇನ್ನೊಂದು ಗುಹೆಗೆ ಹೋಗುತ್ತದೆ. ಈ ದಾರಿಯಲ್ಲಿ ವಿಶಾಲವಾದ ಬಂಡೆಗಳು ಕಂಡುಬರುತ್ತವೆ. ಮೂರನೆಯ ಪ್ರಾಂಗಣವು ೮' x ೮' ವಿಸ್ತೀರ್ಣವಿದ್ದು, ವೀರಭದ್ರ ದೇವರ ಮೂರ್ತಿಯಿದೆ. ಇದರ ಕೋಣೆಯ ಎಡಬದಿಗೆ ಮುಂಭಾಗದಲ್ಲಿ ೧೫' x ೧೦' ಮತ್ತು ಹಿಂಬದಿಗೆ ೬' x ೭' ವಿಸ್ತೀರ್ಣವುಳ್ಳ ಇನ್ನೊಂದು ಕೋಣೆಯಲ್ಲಿ ಒಂದು ಲಿಂಗವಿದೆ. ಮತ್ತು ದ್ವಾರದ ಎಡಭಾಗದಲ್ಲಿರುವ ಪೀಠದಲ್ಲಿ ಹಲವು ಶೈವ ಧರ್ಮದ ಮೂರ್ತಿಗಳಿವೆ.

ಗವಿಗೆ ಬೆಟ್ಟದಿಂದ ತಲುಪಲು ಬಹಳಷ್ಟು ಕಷ್ಟವುಂಟಾಗುವುದು ಅಲ್ಲದೇ ಸ್ವಳೀಯ ಜನತೆ ಇದನ್ನು ಹುಲಿ ಗವಿಯೆಂದು ಸಹ ಕರೆಯುತ್ತಾರೆ. ಗವಿಯ ಮುಂದೆ ಸ್ವಲ್ಪ ಸಮತಟ್ಟಾದ ಪ್ರದೇಶವಿದೆ.

ಕನಕ ಗವಿ:

ಮೂಡಲ ಗವಿಯ ದಕ್ಷಿಣ ದಿಕ್ಕಿಗೆ ನೂರು ಅಡಿ ಎತ್ತರದಲ್ಲಿರುವ ಗವಿಯೇ ಕನಕನ ಗವಿಯೆಂದು ಕರೆಯಲಾಗಿದೆ. ಪ್ರವೇಶದ್ವಾರದಲ್ಲಿ ಒಂದುವರೆ ಅಡಿ ಕಿಂಡಿಯಿದ್ದು ಕಿಂಡಿಯ ಒಳಗೆ ಹೋಗಬೇಕಾದರೆ ನಿಧಾನವಾಗಿ ಹೆಜ್ಜೆಯನ್ನಿಡುತ್ತಾ ಕಲ್ಲುಗಳ ಮೇಲೆ ನಡೆಯಬೇಕು. ಇಲ್ಲಿರುವ ಒಂದು ಶಾಸನದ ಪ್ರಕಾರ ಕೃತಕ ಗುಹೆಗಳನ್ನು ಹರದೂರಿನ ಕಂಕಾಲದೇವನು ಋಷಿಮುನಿಗಳ ವಾಸ್ತವ್ಯಕ್ಕಾಗಿ ನಿರ್ಮಿಸಿದನೆಂದು ಶಾಸನದಿಂದ ತಿಳಿದುಬಂದಿದೆ.

ಕಲ್ಲದೇವರ ಗವಿ:

ಮಲ್ಲಿಕಾರ್ಜುನ ಬೆಟ್ಟಕ್ಕೆ ಹತ್ತುವ ರಾಯಗೋಪುರದ ಸಮೀಪದಲ್ಲಿದ್ದು, ಈ ಗವಿಯು ಪಶ್ಚಿಮ ದಿಕ್ಕಿನಲ್ಲಿರುವ ಚಿಕ್ಕ ಗವಿ ೩' x ೬' ವಿಸ್ತೀರ್ಣ ಹೊಂದಿದ್ದು, ಇನ್ನೊಂದು ಗುಹೆಗೆ ದಾರಿಯನ್ನುಂಟು ಮಾಡಿದೆ. ಇದನ್ನು ಸ್ತ್ರೀಯರು ಮಕ್ಕಳನ್ನು ಮತ್ತು ಬೆಲೆಬಾಳುವ ವಸ್ತುಗಳನ್ನು ಎರಡುನೂರು ವರ್ಷಗಳ ಹಿಂದೆ ಶತೃಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ನಿರ್ಮಿಸಲಾಗಿತೆಂದು ಕಂಡುಬಂದಿದೆ.

ಬಂಡೆ ಗವಿ:

ಗವಿಯು ವೀರಭದ್ರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿದ್ದು ಪಶ್ಚಿಮಾಭಿಮುಖವಾಗಿರುವುದು. ಮತ್ತು ಬಂಡೆಯ ಒಳಭಾಗದಲ್ಲಿದ್ದು ಎರಡು ಕೋಣೆಗಳನ್ನು ಹೊಂದಿದೆ. ಮೊದಲನೆ ಕೋಣೆಯ ಪ್ರವೇಶದ್ವಾರವು ಚಿಕ್ಕದಾಗಿದ್ದು ಒಳಹೋದಂತೆ ಕತ್ತಲೆಯಾಗಿರುವುದಲ್ಲದೆ ದಕ್ಷಿಣದಿಕ್ಕಿಗೆ ವಿಶಾಲವಾಗಿರುವುದು. ಈ ಕೋಣೆಯಿಂದ ಉತ್ತರಕ್ಕೆ ಹೋದಂತೆ ಮತ್ತೊಂದು ಗವಿ ಇದೆ. ಇದು ಮೊದಲನೆಯದಕ್ಕಿಂತ ಚಿಕ್ಕದಾಗಿದ್ದು, ಎರಡು ಕೋಣೆಗಳ ನಡುವೆ ಮಣ್ಣಿನಿಂದ ಕಟ್ಟಿದ ಗೋಡೆಯಿದೆ.

ಜೈನ ಬಸದಿ:

ಬಸದಿಯು ಗ್ರಾಮದ ಮುಖ್ಯ ಭಾಗದಲ್ಲಿದ್ದು ಪೂರ್ವಾಭಿಮುಖವಾಗಿದೆ. ಇದು ಇಂದು ಉತ್ಸವ ಮಲ್ಲಿಕಾರ್ಜುನ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ತೆರೆದ ಗರ್ಭಗೃಹದ ಪೀಠಿಕೆ, ತೆರೆದ ಸಭಾಂಗಣವನ್ನು ಒಳಗೊಂಡಿದೆ. ಪ್ರವೇಶದ್ವಾರದ ಎರಡು ಬದಿಯಲ್ಲಿ ಚಿಕ್ಕದಾದ ಕೊಠಡಿಗಳಿದ್ದು ವಾಸ್ತುಶೈಲಿ ದೃಷ್ಟಿಯಿಂದ ಪ್ರಮುಖ್ಯತೆ ಇಲ್ಲದಿರುವುದಾಗಿದೆ. ಚೆಂಗಾಳ್ವ ಮನೆತನ ಅರಸರುಗಳು ಪ್ರಾರಂಭದಲ್ಲಿ ಜೈನರಾಗಿದ್ದರಿಂದ ವಿಕ್ರಮರಾಯ ಅಥವಾ ಚಂಗಲರಾಯನ ಕಾಲದಲ್ಲಿ ಅಂದರೆ ಹನ್ನೊಂದನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎಂದು ಕಂಡುಬರುವುದು. ಇದು ದ್ರಾವಿಡ ಶೈಲಿಯ ಲಕ್ಷಣಗಳನ್ನು ಹೊಂದಿದ್ದು ಗರ್ಭಗೃಹದ ಮೇಲ್ಭಾಗದಲ್ಲಿ ಗೋಪುರವಿದೆ. ಗರ್ಭಗೃಹದ ವೇದಿಕೆಯು ಎರಡುವರೆ ಅಡಿ ತರದ ಸಭಾಂಗಣಕ್ಕಿಂತ ಎತ್ತರವಾಗಿದ್ದು ಗರ್ಭಗೃಹದಿಂದ ಮುಖಮಂಟಪದವರೆಗೆ ಒಟ್ಟು ನಲವತ್ತು ಸ್ಥಂಬಗಳನ್ನು ಒಳಗೊಂಡಿದೆ.

ಬಸದಿಯು ಉಪಾನ, ಗಂಟೆ, ಮತ್ತು ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಆದರೆ ಇದು ಮಣ್ಣಿನಿಂದ ಮುಚ್ಚಲ್ಪಟ್ಟಿರುವುದು ಬಸದಿಯ ಪ್ರವೇಶ ದ್ವಾರದ ಬಾಗಿಲುವಾಡವು ಸರಳವಾಗಿದ್ದು ಲಲಟಾಬಿಂಬದಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಬಸದಿಯ ಬಿತ್ತಿಯು ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳಿಂದ ಜೋಡಿಸಿರುವುದಾಗಿದೆ. ಬಿತ್ತಿಯ ಒಳ ಮತ್ತು ಹೊರ ಭಾಗದಲ್ಲಿ ಹೆಚ್ಚಿನ ಕಲಾತ್ಮಕ ಕೆತ್ತನೆ ಇರುವುದಿಲ್ಲ. ಗರ್ಭಗೃಹದ ದಕ್ಷಿಣ ದಿಕ್ಕಿನ ಹೊರ ಭಾಗದಲ್ಲಿ ಬಿತ್ತಿಯ ಮೇಲೆ ಮತ್ಸ್ಯ, ಚಂದ್ರ, ಸೂರ್ಯ ಮತ್ತು ಉತ್ತರ ದಿಕ್ಕಿನಲ್ಲಿ ಹನುಮಂತ, ಬಸವನ ಶಿಲ್ಪಗಳ ಕೆತ್ತನೆಯಿರುವುದು. ಬಸದಿಯು ಒಂದನೂರ ಎರಡು ಅಡಿ ಉದ್ದ ಮತ್ತು ಮೂವತ್ತೈದು ಅಡಿ ಅಗಲವನ್ನು ಹೊಂದಿ ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ ಎರಡು ಪ್ರವೇಶದ್ವಾರವಿದ್ದು ಗಾಳಿ ಬೆಳಕು ಬರಲು ಏಳು ಕಿಟಕಿಗಳಿದ್ದು ಮೇಲ್ಭಾಗದಲ್ಲಿ ಜೋಡಿ ಬಸವ ವಿಗ್ರಹಗಳಿವೆ.

ಸ್ಥಂಬಗಳು:

ಬಸದಿಯಲ್ಲಿರುವ ಎಲ್ಲ ಸ್ಥಂಬಗಳು ಒಂದೇ ರೀತಿಯಲ್ಲಿದ್ದು ಹದಿನೈದು ಅಡಿ ಎತ್ತರದಲ್ಲಿವೆ. ಈ ಕಂಬಗಳು ಚಂಗಾಳ್ವ ಮತ್ತು ಗಂಗ ಕಾಲದ ಲಕ್ಷಣಗಳನ್ನು ಒಳಗೊಂಡು ಮೇಲ್ಭಾಗದಲ್ಲಿ ಆಧುನಿಕ ಶೈಲಿಯ ಟೈಲ್ಸ್‌ಗಳನ್ನು ಹಾಕಿರುವುದರಿಂದ ಮೂಲ ವಿಷಯವನ್ನು ಅರಿಯುವುದಕ್ಕೆ ಕಷ್ಟಕರವಾಗಿದೆ. ಕಂಬಗಳು ಚೌಕಕಾರವಾಗಿದ್ದು ಸರಳವಾದ ಬೋದಿಗೆಯನ್ನು ಒಳಗೊಂಡಿರುವುದು ಮತ್ತು ಇವುಗಳ ಮುಖ್ಯ ಉದ್ದೇಶ ಮೇಲ್ಛಾವಣಿಯ ತೊಲೆಯನ್ನು ಹೊತ್ತು ನಿಂತಿರುವುದಾಗಿದೆ.

ಶಾಂತಿನಾಥ ಬಸದಿ:

ಶಾಂತಿನಾಥ ಬಸದಿ ಕುಣಸೂರು ಗ್ರಾಮದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು ಬೆಟ್ಟದಪುರದಿಂದ ಪಶ್ಚಿಮಕ್ಕೆ ಎಂಟು ಕಿ.ಮೀ.ಗಳ ಅಂತರದಲ್ಲಿದೆ. ಏಕಕೂಟ ಬಸದಿಯಾಗಿದ್ದು,

ಇಪ್ಪತ್ತು ಅಡಿ ಎತ್ತರ ಗುಡ್ಡದ ಮೇಲಿದೆ. ಈ ಗ್ರಾಮವನ್ನು ಪ್ರಾಚೀನ ಕಾಲದಲ್ಲಿ ವಿಶ್ವನಾಥ ಪುರವೆಂದು ಕರೆಯುತ್ತಿದ್ದರು. ಬಸದಿಯನ್ನು ಕ್ರಿ.ಶ. ೧೫೨೦ರಲ್ಲಿ ವಿಜಯನಗರದ ಸಂಗಮ ವಂಶದ ದೊರೆ ವಿರೂಪಾಕ್ಷ ಎಂಬುವನ ಕಾಲದಲ್ಲಿ ನಿರ್ಮಾಣಗೊಂಡಿದ್ದು ೧೬ನೇ ತೀರ್ಥಂಕರನಾದ ಶಾಂತಿನಾಥ ಬಸದಿಯಾಗಿದೆ.

ಬಸದಿಯ ತಳಲಕ್ಷಣವು ಉಪಾನ, ಪೀಠ, ವೇದಿಕೆಯನ್ನು ಒಳಗೊಂಡಂತೆ ಗರ್ಭಗೃಹ, ಅಂತರಾಳ, ನವರಂಗ ಮಂಟಪದೊಂದಿಗೆ ತೆರದ ಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಾಂತಿನಾಥ ಖಡ್ಗಸನದಲ್ಲಿದ್ದು ಪುಷ್ಪಲಂಕಾರದ ಅಥವಾ ತ್ರಿಭುಜಕಾರದ ಭುವನೇಶ್ವರಿಯಿದ್ದು, ಉತ್ತರ ಭಾರತದ ನಾಗರ ಶೈಲಿಯ ಗೋಪುರವನ್ನು ಹೊಂದಿದ್ದು ಕಳಸವಿದೆ. ಗರ್ಭಗೃಹದ ಸುತ್ತ ಪ್ರದಕ್ಷಣೆ ಪಥವಿಲ್ಲದೆ ಹೊರಭಾಗದ ಜಗುಲಿಯೇ ಪ್ರದಕ್ಷಣಾ ಪತವಾಗಿದೆ. ಬಸದಿಯ ಬಿತ್ತಿಯು ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳ ಜೋಡಣೆಯಾಗಿದ್ದು ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸದೇ ನಿಲ್ಲಿಸಲಾಗಿದೆ. ಆದರೆ ಗೋಪುರದ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಮೂರು ರೀತಿಯ ಹಾರಗಳಿದ್ದು ದ್ರಾವಿಡ ಶೈಲಿಯನ್ನು ಒಳಗೊಂಡಿದ್ದು, ಮಧ್ಯದಲ್ಲಿ ಶಾಂತಿನಾಥ, ಬಲಭಾಗದಲ್ಲಿ ಚಂದ್ರನಾಥ ಮತ್ತು ಎಡಭಾಗದಲ್ಲಿ ಆದಿನಾಥನ ವಿಗ್ರಹಗಳಿವೆ. ಅಂತರಾಳ ಚಿಕ್ಕದಾಗಿದ್ದು ಯಾವುದೇ ರೀತಿಯ ಕಲಾತ್ಮ ಚಿತ್ರಗಳು, ವಿಗ್ರಹಗಳು ಇಲ್ಲಿ ಕಂಡುಬರುವುದಿಲ್ಲ.

ಶಾಂತಿನಾಥ ಬಸದಿ ಉತ್ತಮವಾದ ಗರ್ಭಗೃಹವನ್ನು ಹೊಂದಿದ್ದು ತ್ರಿಭುಜಾಕಾರದ ಭುವನೇಶ್ವರಿ ಮತ್ತು ದ್ರಾವೀಡ ಶೈಲಿಯ ಗೋಪುರವನ್ನು ಒಳಗೊಂಡಿದೆ. ಪೀಠವು ಎರಡುವರೆ ಅಡಿ ಎತ್ತರವಾಗಿದ್ದು ಇದರ ಮುಂದೆ ಪಾಣಿಬಟ್ಟಲು ಇರುವುದು. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ಪದ್ಮಸನದಲ್ಲಿ ಕುಳಿತಿರುವ ಜನ ತೀರ್ಥಂಕರನ ಶಿಲ್ಪವಿದ್ದು ಬಾಗಿಲುವಾಡವು ಸುಂದರ ಕಲಾತ್ಮಕ ಕೆತ್ತನೆಯಿಂದ ಕೂಡಿರುವುದು. ನವರಂಗದಲ್ಲಿ ನಾಲ್ಕು ಸ್ಥಂಬಗಳು ಇದ್ದು ಪೀಠದ ಮೇಲೆ ನಿಂತಿವೆ. ಸ್ಥಂಬಗಳು ಎಪ್ಪತ್ತು ಇಂಚು ಉದ್ದ ಐವತ್ತೈದು ಇಂಚು ದಪ್ಪವನ್ನು ಹೊಂದಿ ತಳಭಾಗದಲ್ಲಿ ಚೌಕಕಾರ ಹೊಂದಿ ವೃತ್ತವನ್ನು ಒಳಗೊಂಡಿದೆ. ಈ ಸ್ಥಂಬಗಳು ತೊಲೆಯನ್ನು ಹೊತ್ತು ನಿಂತಿವೆ. ಪ್ರವೇಶದ್ವಾರದ ಬಾಗಿಲುವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಪುಷ್ಪಾಲಂಕಾರವನ್ನು ಹೊಂದಿದ್ದು, ೨೦೦೦ನೇ ವರ್ಷದಲ್ಲಿ ಶ್ರೀಧರ್ಮಸ್ಥಳ ಮಂಜುನಾಥ ಟ್ರಸ್ಟ್ ವತಿಯಿಂದ ಪುನಾರುಜ್ಜೀವನಗೊಂಡಿದೆ.

ಆಧಿನಾಥ ತೀರ್ಥಂಕರ ಬಸದಿ:

ಬಸದಿಯು ಬೂವನಹಳ್ಳಿ ಗ್ರಾಮದಲ್ಲಿದ್ದು ಮಲ್ಲಿಕಾರ್ಜುನ ಬೆಟ್ಟದ ಪಶ್ಚಿಮಕ್ಕೆ ಆರು ಕಿ.ಮೀ. ಅಂತರದಲ್ಲಿದೆ. ಬಸದಿಯು ಪೂರ್ವಾಭಿಮುಖವಾಗಿದ್ದು ಗುಡ್ಡದ ಮೇಲಿದೆ. ಚಂಗಾಳ್ವ

ವಂಶದ ಮಂಗರಸನ ಕಾಲದಲ್ಲಿ ಇದು ಕಟ್ಟಲ್ಪಟ್ಟಿದ್ದು ಸ್ಥಳೀಯ ದೇವಾಲಯಗಳಂತೆ ದ್ರಾವೀಡ ಶೈಲಿ ಹೊಂದಿದ್ದು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದ್ದು, ತಳವಿನ್ಯಾಸದಲ್ಲಿ ಉಪಾನ, ಕಂಠ, ಉಪಪೀಠ ಒಳಗೊಂಡು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ಮತ್ತು ಗರ್ಭಗೃಹ, ಅಂತರಾಳ, ನವರಂಗ ಮಂಟಪವನ್ನು ಹೊಂದಿರುವುದಲ್ಲದೇ ತೆರದ ಮಂಟಪವನ್ನು ಹೊಂದಿದೆ. ಉತ್ತಮವಾದ ಗರ್ಭಗೃಹವನ್ನು ಹೊಂದಿದ್ದು ತ್ರಿಭುಜಾಕಾರದ ಭುವನೇಶ್ವರಿ ಮತ್ತು ದ್ರಾವಿಡ ಶೈಲಿಯ ಗೋಪುರವನ್ನು ಒಳಗೊಂಡಿದೆ. ಪೀಠವು ಎರಡುವರೆ ಅಡಿ ಎತ್ತರವಾಗಿದ್ದು ಇದರ ಮುಂದೆ ಪಾಣಿಬಟ್ಟಲು ಇರುವುದು. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನ ತೀರ್ಥಂಕರನ ಶಿಲ್ಪವಿದ್ದು ಬಾಗಿಲುವಾಡವು ಸುಂದರ ಕಲಾತ್ಮಕ ಕೆತ್ತನೆಯಿಂದ ಕೂಡಿರುವುದು. ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಇದು ಉತ್ತಮವಾಗಿದ್ದು ಬಾಗಿಲುವಾಡದ ಮೇಲೆ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇಲ್ಲಿ ಇರುವುದಿಲ್ಲ.

ನವರಂಗದಲ್ಲಿ ನಾಲ್ಕು ಸ್ಥಂಬಗಳಿದ್ದು ಉತ್ತಮವಾದ ಕಲಾತ್ಮಕ ಚಿತ್ರಗಳಿಂದ ಕೂಡಿರುವುದು. ಎರಡು ಇಂಚು ನವರಂಗ ಮಂಟಪ ಎತ್ತರವಾಗಿರುವುದಲ್ಲದೇ ಇಲ್ಲಿಯ ಪ್ರವೇಶ ದ್ವಾರವು ಸುಂದರವಾದ ಚಿತ್ರಗಳಿಂದ ಕೂಡಿದ್ದು ಲಲಾಟಬಿಂಬದ ಮೇಲೆ ಜಿನ ಮೂರ್ತಿಯ ಕೆತ್ತನೆ ಇರುವುದು. ಇದು ವಿಶಾಲವಾಗಿದ್ದು ಉತ್ತಮ ಬೆಳಕಿನಿಂದ ಕೂಡಿದೆ. ತೆರೆದ ಮಂಟಪದಲ್ಲಿ ಎರಡು ಸ್ತಂಬಗಳಿದ್ದು, ಇದರ ಬಾಗಿಲುವಾಡವು ಬಳ್ಳಿಯಾಕಾರದ ಕೆತ್ತನೆಯಿದ್ದು ಲಲಾಟಬಿಂಬದ ಮೇಲೆ ಜಿನ ಶಿಲ್ಪವಿದೆ.

ಸ್ಥಂಬಗಳು:

ನವರಂಗ ಮಂಟಪದಲ್ಲಿ ನಾಲ್ಕು ಸ್ಥಂಬಗಳಿದ್ದು ಉತ್ತಮ ಚಿತ್ರಗಳ ಕೆತ್ತನೆಯಿದ್ದು ಸ್ಥಂಬಗಳ ಮೇಲೆ ಮಂಗವು ಬಾಳೆ ಹಣ್ಣನ್ನು ತಿನ್ನುತ್ತಿರುವ ಹಂಸ, ಕಳಸದ ಚಿತ್ರ, ನವಿಲು, ಆನೆಯ ಶಿಲ್ಪ, ಮತ್ತು ಇದರ ಕೆಳಗೆ ಮಹಿಳೆಯ ಶಿಲ್ಪವಿದ್ದು ಎರಡು ಕೈಯಲ್ಲಿ ತಾವರೆಯ ಮೊಗ್ಗನ್ನು ಹಿಡಿದು ಕುಳಿತಿರುವ ಮತ್ತೊಂದರಲ್ಲಿ ಹಸು ಎಂಟು ಕರುವಿನ ಕೆತ್ತನೆಯಿರುವುದಲ್ಲದೇ, ಕುದುರೆಯ ಮೇಲೆ ಅರಸನು ಕುಳಿತಿರುವ ದೃಶ್ಯದ ಉತ್ತಮ ಕಲಾತ್ಮಕ ಕೆತ್ತನೆಯಿದೆ. ಇಲ್ಲಿಯ ಎಲ್ಲ ಸ್ಥಂಬಗಳು ಒಂದೇ ರೀತಿಯಲ್ಲಿದ್ದು ಚೌಕಕಾರದಲ್ಲಿವೆ. ಕಂಬಗಳು ಪೀಠದ ಮೇಲೆ ನಿಂತಿದ್ದು ಮೇಲ್ಭಾಗದಲ್ಲಿ ಬೋಧಿಗೆ, ತೊಲೆಯಿದ್ದು ಇಡಿ ಮೇಲ್ಚಾವಣಿಯನ್ನು ಹೊತ್ತು ನಿಂತಿವೆ.

ಪ್ರವೇಶದ್ವಾರದ ಎಡ ಮತ್ತು ಬಲಭಾಗದಲ್ಲಿ ಸಿಂಹದ ಮೂರ್ತಿಗಳಿದ್ದು ಸುತ್ತಲೂ ಬಳ್ಳಿಯಾಕಾರದ ಅಲಂಕಾರವನ್ನು ಹೊಂದಿದೆ. ನವರಂಗ ಮಂಟಪದ ಲಲಾಟಬಿಂಬದಲ್ಲಿ

ಜಿನ ಮೂರ್ತಿಯ ಸಮೀಪ ಎರಡು ಕಡೆಯು ಭಕ್ತರ ಗಮನ ಸೆಳೆಯುವಂತಿದೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಹಾರವಿದೆ ಮತ್ತು ಪೀಠದ ಮುಂದೆ ಆನೆಯ ಶಿಲ್ಪವಿದ್ದು ಜಿನಾ ಸಂಪ್ರದಾಯದ ಸರ್ವಾಣ್ಹಕ್ಷ ನಿಂತಿರುವುದಾಗಿದೆ. ಬಸದಿಯು ನಲವತ್ತೊಂಬತ್ತು ಅಡಿ ಉದ್ದವಾಗಿದ್ದು ಹದಿನೆಂಟು ಅಡಿ ಅಗಲವಿರುವುದು. ಮತ್ತು ಬಸದಿಯು ನಾಲ್ಕು ಮೆಟ್ಟಿಲುಗಳನ್ನು ಹೊಂದಿದ್ದು ಗರ್ಭಗೃಹಕ್ಕೆ ನೇರವಾಗಿ ಮೂರು ಅಡಿ ಎತ್ತರದ ಬಲಿಪೀಠವಿರುವುದು ಮತ್ತು ಎಂಟು ದಿಕ್ಕಿಗೂ ಎಂಟು ಬಲಿಪೀಠ ಇರುವುದಾಗಿದೆ. ಮತ್ತು ಶ್ರೀ ಧರ್ಮಸ್ಥಳ ಮಂಜುನಾಥ ಟ್ರಸ್ಟ್‌ವತಿಯಿಂದ ೨೦೦೮ ಜೂನ್ ತಿಂಗಳಿನಲ್ಲಿ ಪುನರುಜ್ಜೀವನಗೊಂಡಿದೆ.

ಆದಿನಾಥ ಬಸದಿ:

ಆದಿನಾಥ ಬಸದಿಯು ಆನಿವಾಳ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿದೆ. ಇದು ಇಪ್ಪತ್ತು ಅಡಿ ಎತ್ತರದ ವೃಷಭಗಿರಿ ಬೆಟ್ಟದ ಮೇಲಿದ್ದು ಪೂರ್ವಾಭಿಮುಖವಾಗಿದೆ. ಬಸದಿಯು ಗ್ರಾನೈಟ್ ಶಿಲೆಯಿಂದ ಕೆತ್ತಲ್ಪಟ್ಟಿದ್ದು, ಬಸದಿಯ ತಳವಿನ್ಯಾಸದಲ್ಲಿ ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ನಿರ್ಮಾಣಗೊಂಡಿರುವುದು. ಇದು ದ್ವಿಕೂಟ ಬಸದಿಯಾಗಿದ್ದು ಪ್ರದಕ್ಷಣೆ ಪಥ ಮತ್ತು ನವರಂಗ ಮಂಟಪ, ಇದರ ದಕ್ಷಿಣಕ್ಕೆ ಮತ್ತೊಂದು ಗರ್ಭಗೃಹ ಹಾಗೆ ತೆರೆದ ಮಂಟಪ ಅಥವಾ ಜಗುಲಿಯನ್ನು ಒಳಗೊಂಡಿರುವುದು. ಬಸದಿಯ ಬಿತ್ತಿಯು ಮತ್ತು ಚಾವಣಿಯು ಕಲ್ಲುಚಪ್ಪಡಿಗಳಿಂದ ನಿರ್ಮಾಣಗೊಂಡಿದೆ.

ಬಸದಿಯ ಗರ್ಭಗೃಹದಲ್ಲಿ ಆದಿನಾಥನ ವಿಗ್ರಹ ಪದ್ಮಾಸನದಲ್ಲಿದ್ದು ಕುಳಿತಿರುವ ಗರ್ಭಗೃಹದ ಸುತ್ತ ವಿಶಾಲ ಪ್ರದಕ್ಷಣೆ ಪಥವಿರುವುದಾಗಿದೆ. ಈ ರೀತಿಯ ಪ್ರದಕ್ಷಣೆ ಪಥವಿರುವುದು ಇಡೀ ತಾಲ್ಲೂಕಿನಲ್ಲಿಯೇ ಒಂದಾಗಿದ್ದು, ಗರ್ಭಗೃಹಕ್ಕೆ ಬಿತ್ತಿಯೇ ಬಾಗಿಲವಾಡವಾಗಿದ್ದು ಸರಳವಾಗಿದೆ. ಇದರ ಮುಂದೆ ನವರಂಗ ಮಂಟಪವಿದ್ದು, ಇದರಲ್ಲಿ ನಾಲ್ಕು ಸ್ಥಂಬಗಳಿರುವುದಾಗಿದೆ. ಈ ಸ್ಥಂಬಗಳು ಪೀಠವಿಲ್ಲದೇ ಚೌಕಕಾರ, ಹದಿನಾಲ್ಕು ಮುಖ ಮತ್ತು ಬೋಧಿಗೆಯನ್ನು ಒಳಗೊಂಡಿದ್ದು, ತೊಲೆ ಮೇಲ್ಚಾವಣಿಯನ್ನು ಹೊತ್ತು ನಿಂತಿವೆ. ಇಲ್ಲಿಯ ಪ್ರತಿಯೊಂದು ಕಂಬವು ಅರವತ್ತೈದು ಇಂಚು ಉದ್ದವಾಗಿದ್ದು ಐವತ್ತೈದು ಇಂಚು ದಪ್ಪವಿರುವುದಾಗಿದೆ. ಕಂಬದಲ್ಲಿ ಒಂದು ಶಾಸನವಿದ್ದು ಅಸ್ಪಷ್ಟವಾಗಿದೆ.

ಬಸದಿಯ ಬಲಭಾಗದ ಕಂಬದಲ್ಲಿ ಇಬ್ಬರು ಕೈಮುಗಿಯುತ್ತಿರುವ ಭಕ್ತರ ಶಿಲ್ಪವಿರುವುದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ದಕ್ಷಿಣ ಗರ್ಭಗೃಹದಲ್ಲಿ ಮೂಲ ವಿಗ್ರಹ ಸ್ಥಳಾಂತರಗೊಂಡಿರುವುದು. ಇದರ ಮುಂದೆ ಒಂದು ಶಾಸನವಿದ್ದು ಇದು ಸಹ ಅಸ್ಪಷ್ಟವಾಗಿದೆ. ಈ ಶಾಸನದಲ್ಲಿ ಸೂರ್ಯ, ಚಂದ್ರರ ಕೆತ್ತನೆ ಇರುವುದು ಇದರಿಂದ ಈ ಬಸದಿಯು ಚಂಗಾಳ್ವ ಮನೆತನಕ್ಕೆ ಸೇರಲ್ಪಟ್ಟ ಬಸದಿಯಾಗಿರುವುದಾಗಿದೆ.

ಬಸದಿಯಲ್ಲಿ ಒಂದು ಹಾರವಿದ್ದು ಪೀಠದ ಮೇಲೆ ಜಿನ ಮೂರ್ತಿ ಪದ್ಮಾಸನದ ಸಿಮೆಂಟಿನ ಶಿಲ್ಪವಿರುವುದು. ಅಲ್ಲದೆ ತೆರದ ಮಂಟಪವನ್ನು ಅಥವಾ ಜಗುತ್ತಿಯನ್ನು ಹೊಂದಿದ್ದು ಐದು ಮೆಟ್ಟಿಲುಗಳನ್ನು ಒಳಗೊಂಡಿದ್ದು ಗರ್ಭಗೃಹಕ್ಕೆ ನೇರವಾಗಿ ಒಂದು ಮಂಟಪವನ್ನು ಒಳಗೊಂಡಿರುವುದಾಗಿದೆ.

ಬಸದಿಯ ಆಗ್ನೇಯ ದಿಕ್ಕಿಗೆ ಒಂದು ಚಿಕ್ಕಮಂಟಪವಿದೆ. ಬಸದಿಯ ಉತ್ತರಕ್ಕೆ ಸ್ಥಂಬಗಳುಳ್ಳ ಅವಶೇಷಗಳು ಅಧಿಕ ಸಂಖ್ಯೆಯಲ್ಲಿ ಬಿದ್ದಿರುವುದಾಗಿದೆ. ಇದರ ಜೊತೆಗೆ ಯಾವುದೇ ರೀತಿಯ ಅವಶೇಷಗಳು ಕಂಡುಬರುವುದಿಲ್ಲ. ಬಸದಿಯ ಉತ್ತರಕ್ಕೆ ದ್ವಾರವಿದ್ದು ಗಜಾಕಾರದ ಮೆಟ್ಟಿಲುಗಳನ್ನು ಹೊಂದಿರುವುದಾಗಿದೆ. ಬಸದಿಯನ್ನು ೨೦೦೫ನೇ ವರ್ಷದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥ ಟ್ರಸ್ಟ್ ವತಿಯಿಂದ ಜೀರ್ಣೋದ್ಧಾರ ಕಾರ್ಯವನ್ನು ಮಾಡಿರುವರು.

ಆದಿತೀರ್ಥಂಕರ ಬಸದಿ:

ಬಸದಿಯು ಬೆಟ್ಟದಪುರ ಗ್ರಾಮಕ್ಕೆ ಪೂರ್ವದಿಕ್ಕಿಗಿರುವ ಬೆಟ್ಟದ ತುಂಗ ಗ್ರಾಮದಲ್ಲಿದೆ. ಏಕಕೂಟ ಬಸದಿಯಾಗಿದ್ದು ಪೂರ್ವಾಭಿಮುಖವಾಗಿದೆ. ಮತ್ತು ಬೆಟ್ಟದ ತಳಭಾಗದಲ್ಲಿದ್ದು, ಗ್ರಾನೈಟ್ ಶಿಲೆಯಿಂದ ರಚಿತವಾಗಿದೆ. ಇದೊಂದು ಜೈನರ ದೊಡ್ಡ ಬಸದಿಯಾಗಿದ್ದು ತಳವಿನ್ಯಾಸವನ್ನು ನೋಡಿದಾಗ ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಅತ್ಯಂತ ಪ್ರಾಚೀನ ಬಸದಿಗಳಲ್ಲಿ ಇದು ಒಂದಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಮಂಟಪ, ಸಭಾಮಂಟಪ ಮತ್ತು ತೆರದ ಮಂಟಪಗಳನ್ನು ಒಳಗೊಂಡಿದೆ.

ಗರ್ಭಗೃಹ:

ಬಸದಿಗಳಲ್ಲಿ ಅತ್ಯಂತ ಪ್ರಮುಖವಾದ ಭಾಗವೆಂದರೆ ಗರ್ಭಗೃಹ. ಈ ಬಸದಿಗೂ ಗರ್ಭಗೃಹವಿದ್ದು ಚೌಕಕಾರವಾಗಿದೆ. ಗರ್ಭಗೃಹದಲ್ಲಿ ಮೂಲ ಆದಿತೀರ್ಥಂಕರನ ವಿಗ್ರಹ ಸ್ಥಳಾಂತರಗೊಂಡಿದ್ದು ಪ್ರಸ್ತುತ ವೀರಭದ್ರನ ಮೂರ್ತಿ ಇರುವುದು. ಇದರ ಮೇಲ್ಭಾಗದಲ್ಲಿ ವೃತ್ತಾಕಾರದ ಭುವನೇಶ್ವರಿ ಇದ್ದು, ಮೇಲೆ ಹತ್ತು ಅಡಿ ದ್ರಾವಿಡ ಶೈಲಿಯ ಗೋಪುರವಿರುವುದು. ಸರಳವಾದ ಬಾಗಿಲುವಾಡ ಹೊಂದಿದ್ದು ಲಲಾಟಬಿಂಬದಲ್ಲಿ ರೇಖೆಯಾಕಾರದ ಕೆತ್ತನೆಯಿದ್ದು ಬಾಗಿಲವಾಡದ ಮಧ್ಯಭಾಗದಲ್ಲಿ ಯಾವುದೇ ಉಬ್ಬು ಶಿಲ್ಪಗಳು ಕಂಡುಬರುವುದಿಲ್ಲ ಮತ್ತು ಗರ್ಭಗೃಹವು ೧೦ x ೧೦ ಅಡಿ ಚದುರ ಸುತ್ತಳತೆಯನ್ನು ಹೊಂದಿದೆ.

ಅಂತರಾಳ:

ಗರ್ಭಗೃಹದ ನಂತರ ಭಾಗ ಅಂತರಾಳ. ಇದು ಚಿಕ್ಕದಾಗಿದ್ದು ಅಂತರಾಳದ ಲಲಾಟಬಿಂಬದಲ್ಲಿ ಆದಿನಾಥನ ಉಬ್ಬುಶಿಲ್ಪವಿರುವುದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ.

ನವರಂಗ ಮಂಟಪ:

ನವರಂಗಮಂಟಪ ಅಂತರಾಳಗಿಂತ ವಿಸ್ತೀರ್ಣವಾಗಿದ್ದು ನಾಲ್ಕು ಸ್ಥಂಬಗಳನ್ನು ಒಳಗೊಂಡಿರುವುದಾಗಿದೆ. ಇದರ ಪ್ರವೇಶ ದ್ವಾರವು ವಿಸ್ತೀರ್ಣವಾಗಿದ್ದು, ಬಾಗಿಲುವಾಡ ಮತ್ತು ಲಲಾಟಬಿಂಬಗಳನ್ನು ಒಳಗೊಂಡಂತೆ ನೇರ ರೇಖೆಯನ್ನು ಒಳಗೊಂಡಿದ್ದು ಲಲಾಟಬಿಂಬದಲ್ಲಿ ಜಿನಮೂರ್ತಿಯ ಶಿಲ್ಪವನ್ನು ಒಳಗೊಂಡಿರುವುದು. ಈ ಭಾಗದಲ್ಲಿ ಇಂದು ವಿವಿಧ ರೀತಿಯ ವಿನಾಯಕ, ಆದಿಶೇಷ ಶಿಲ್ಪಗಳು ಕಂಡುಬಂದು ಕಮಲದಕಾರದ ಭುವನೇಶ್ವರಿಯನ್ನು ಹೊಂದಿದೆ.

ಸಭಾ ಮಂಟಪ:

ನವರಂಗ ಮಂಟಪಕ್ಕಿಂತ ವಿಸ್ತೀರ್ಣದಲ್ಲಿ ಸಭಾಮಂಟಪ ವಿಶಾಲವಾಗಿರುವುದಾಗಿದೆ. ಇದರ ದ್ವಾರವು ಎರಡು .ಮೆಟ್ಟಿಲುಗಳನ್ನು ಹೊಂದಿದ್ದು ಬಾಗಿಲುವಾಡವು ಸರಳವಾಗಿದ್ದು ರೇಖಾ ಚಿತ್ರಗಳನ್ನು ಹೊಂದಿದೆ. ಆದರೆ ಲಲಾಟಬಿಂಬದಲ್ಲಿ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಇದರಲ್ಲಿ ವಿವಿಧ ರೀತಿಯ ಕೆತ್ತನೆಯ ಚಿತ್ರವನ್ನು ಒಳಗೊಂಡಂತೆ ಆರು ಸ್ಥಂಬಗಳು ಇರುವುದು. ಬಸದಿಯ ಉತ್ತರ ದಿಕ್ಕಿನಲ್ಲಿಯು ಸಹ ಪ್ರವೇಶ ದ್ವಾರವಿದ್ದು, ಇದು ಪೂರ್ವ ಪಶ್ಚಿಮಾಭಿಮುಖವಾಗಿ ನಲವತ್ತು ಅಡಿ ಉದ್ದವನ್ನು, ಉತ್ತರ ದಕ್ಷಿಣವಾಗಿ ಇಪ್ಪತ್ತೈದು ಅಡಿ ಅಗಲವನ್ನು ಹೊಂದಿದೆ.

ತೆರದ ಮಂಟಪ:

ತೆರದ ಮಂಟಪವು ನಾಲ್ಕು ಸ್ಥಂಬಗಳನ್ನು ಒಳಗೊಂಡಿದ್ದು ವಿವಿಧ ರೀತಿಯ ಕೆತ್ತನೆ ಇರುವುದು. ಈ ಮಂಟಪಕ್ಕೆ ಇತ್ತೀಚಿಗೆ ಬಿತ್ತಿಯನ್ನು ಕಟ್ಟಿದ್ದು, ಪ್ರವೇಶ ದ್ವಾರದ ಮೇಲೆ ಮೂರು ಕೋಷ್ಟಕಗಳು ಇದ್ದು ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ.

ಕಂಬಗಳು:

ಕಂಬಗಳ ಪ್ರಮುಖ ಉದ್ದೇಶ ತೊಲೆಯನ್ನು ಹೊತ್ತಿಕೊಂಡಂತೆ ಮೇಲ್ಛಾವಣೆಯನ್ನು ಹೊತ್ತಿರುವುದೇ ಆಗಿದೆ. ನವರಂಗದಲ್ಲಿ ಎರಡು ಸ್ಥಂಬಗಳು ಮಾತ್ರ ಪೀಠದ ಮೇಲೆ ನಿಂತಿದ್ದು, ಚೌಕಾಕಾರ ಒಳಗೊಂಡಂತೆ ಎಂಟು ಕೋನಗಳು ಇದ್ದು, ಬೋಧಿಗೆಯನ್ನು ಹೊಂದಿದ್ದು, ತೊಲೆಯನ್ನು ಹೊಂದಿರುವುದಾಗಿದೆ. ಮತ್ತು ನವರಂಗ, ಸಭಾಮಂಟಪಗಳಲ್ಲಿ ಸ್ಥಂಬಗಳು ಸ್ವಲ್ಪ ಪ್ರಮಾಣದಲ್ಲಿ ಭಿನ್ನವಾಗಿವೆ. ಇಲ್ಲಿಯ ಕಂಬಗಳು ಚೌಕಕಾರದ ಪೀಠದ ಮೇಲೆ ನಿಂತಿದ್ದು ತಳಭಾಗ ಚೌಕಕಾರವಾಗಿದ್ದು ಇದರ ಮೇಲ್ಭಾಗದಲ್ಲಿ ಹದಿನಾಲ್ಕು ಕೋನಗಳು ಇದ್ದು, ಇದರ ಮೇಲೆ ವೃತ್ತ ನಂತರ ಬೋಧಿಗೆಯನ್ನು ಹೊಂದಿದ್ದು ತೊಲೆಯನ್ನು ಹೊತ್ತು ನಿಂತಿವೆ. ಇಲ್ಲಿಯ ಸ್ಥಂಬಗಳ ಮೇಲೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಆದರೆ ನವರಂಗ ಮಂಟಪದ

ತೊಲೆಯ ಮೇಲೆ ವಿವಿಧ ರೀತಿಯ ಉಬ್ಬು ಶಿಲ್ಪಗಳಿರುವುದು. ಅವುಗಳಲ್ಲಿ ಆನೆ, ಟಗರು, ಹಸು, ಜಿಂಕೆಯ ಮೇಲೆ ಕುತಿರುವುದಲ್ಲದೆ, ಪೀಠ, ಆನೆಯ ಮೇಲೆ ಮಹಿಳೆಯು ಕುಳತಿರುವ ಉಬ್ಬುಶಿಲ್ಪವಿದೆ.

ಬಸದಿಯ ಬಿತ್ತಿ ಮತ್ತು ಮೇಲ್ಛಾವಣಿಯು ಕಲ್ಲು ಚಪ್ಪಡಿಯಿಂದ ನಿರ್ಮಿತವಾಗಿದೆ. ಮೂಲಬಿತ್ತಿಯಲ್ಲಿ ಕಲ್ಲುಚಪ್ಪಡಿಗಳನ್ನು ಜೋಡಿಸಲು ಯಾವುದೇ ವಸ್ತುವನ್ನು ಉಪಯೋಗಿಸಿಲ್ಲ. ಗರ್ಭಗೃಹದಿಂದ ಮುಖಮಂಟಪದವರೆಗ ತೊಂಬತ್ತು ಅಡಿ ಉದ್ದವಾಗಿದ್ದು ಬಸದಿಯ ಸುತ್ತಲೂ ಏಕರೀತಿಯ ಕಪೋತವನ್ನು ಹೊಂದಿರುವುದಾಗಿದೆ. ಅಲ್ಲದೇ ಗರ್ಭಗೃಹಕ್ಕೆ ನೇರ ಮೂವತ್ತು ಅಡಿ ಎತ್ತರದ ಗರುಡ ಸ್ಥಂಬವನ್ನು ಹೊಂದಿರುವುದು. ಇದರ ತಳಭಾಗದ ಸುತ್ತ ವೀರಭದ್ರ, ಗಣಪತಿ, ತೀರ್ಥಂಕರ ಶಿಲ್ಪಗಳಿರುವುದು ಈ ಬಸದಿಯನ್ನು ಹಲವು ಬಾರಿ ಜೀರ್ಣೋದ್ಧಾರ ಮಾಡಿರುವ ವೇಳೆಯಲ್ಲಿ ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವನ ನಾಲ್ಕು ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿರುವರು.

ಬಸದಿಯ ಉತ್ತರ ದಿಕ್ಕಿಗೆ ಮತ್ತೊಂದು ಚಿಕ್ಕದಾದ ಜಿನ ಮಂದಿರವಿದೆ. ಆದರೆ ಜಿನ ಮೂರ್ತಿಯನ್ನು ಸ್ಥಳಾಂತರಿಸಿ ನಾಲ್ಕು ಅಡಿ ಪೀಠದ ಮೇಲ್ಭಾಗದಲ್ಲಿ ಬಸವನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಹೊರ ಭಾಗವು ಸ್ಥಂಬಗಳಿಂದ ಕೂಡಿದ್ದು ಆಧುನಿಕ ಶೈಲಿಯ ಲಕ್ಷಣ ಒಳಗೊಂಡಿದೆ.

ರಕ್ಷಣಾ ವಾಸ್ತುಶಿಲ್ಪ:

ಪ್ರಾಚೀನ ಮಾನವನು ಪ್ರಾರಂಭದಲ್ಲಿ ಅಲೆಮಾರಿ ಜೀವನವನ್ನು ನಡೆಸುತ್ತಿದ್ದರು. ಹಲವು ಶತಮಾನಗಳ ನಂತರ ಅಲೆಮಾರಿ ಜೀವನದಿಂದ ಒಂದು ಕಡೆ ನೆಲೆನಿಂತು ಜೀವಿಸಲು ಮತ್ತು ತನ್ನ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನಾಗರಿಕ ಜೀವನದತ್ತ ಅಂಬೆಗಾಲನಿಡುತ್ತಾ ಹೆಜ್ಜೆಹಾಕಿದನು. ವಾಸಿಸಲು ಒಂದು ನಿರ್ದಿಷ್ಟ ನೆಲೆ, ವಾಸ್ತು ಮತ್ತು ಪ್ರಾಕೃತಿಕ ಸಂಪತ್ತುಗಳ ಕೇಂದ್ರವಾದ ಬೆಟ್ಟ-ಗುಡ್ಡಗಳಲ್ಲಿ ನೆಲೆಸಲು ಪ್ರಾರಂಭಿಸಿ ಇಲ್ಲಿಯ ಜನತೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ನಾಯಕತ್ವವನ್ನು ಹೊಂದಿದ, ನಾಯಕತ್ವನ ಬುದ್ಧಿವಂತಿಕೆ, ಆಲೋಚನೆ, ಜನಸಂಘಟನಾ ಕಾರ್ಯದಲ್ಲಿ ತನ್ನ ನೈಪುಣ್ಯತೆಯನ್ನು ತೋರಿಸುತ್ತ ಮತ್ತು ಜನಸಮುದಾಯದಲ್ಲಿ ನಾಯಕನಾದನು. ಇಂಥಹ ವ್ಯಕ್ತಿ ಶತೃಗಳಿಂದ ಅಥವಾ ಕಾಡು ಮೃಗಗಳಿಂದ ತನ್ನನ್ನು, ತನ್ನ ರಾಜಕುಟುಂಬದವರನ್ನು ಹಾಗೂ ಜನತೆಯನ್ನು ರಕ್ಷಿಸಲು ರಕ್ಷಣಾ ವ್ಯವಸ್ಥೆಯಾದ ಕೋಟೆಕೊತ್ತಲಗಳನ್ನು ಕಟ್ಟಲು ಪ್ರಾರಂಭಿಸಿದರೆಂದು ಪುರಾತತ್ವ ಮತ್ತು ಚರಿತ್ರೆಯ ಆಕಾರಗಳಿಂದ ಕಂಡುಬಂದಿದೆ.

ಕೋಟೆಗಳ ನಿರ್ಮಾಣದ ಪೂರ್ವಘಟನೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಭಾರತದ್ಯಾಂತ ಹಲವು ಕಥೆಗಳು, ಐತಿಹ್ಯಗಳು, ಪ್ರಚಲಿತದಲ್ಲಿವೆ. ಇಂಥಹ ಮೌಖಿಕ ಆಕರಗಳು ಸಣ್ಣಪುಟ್ಟ ಕೋಟೆಗಳಿಂದ ಹಿಡಿದು ದೊಡ್ಡ ಸಾಮ್ರಾಜ್ಯದವರೆಗೆ ಹರಡಿವೆ. ಇವುಗಳ ಸ್ಥಾಪನೆಯ ಸಂದರ್ಭದಲ್ಲಿ ಜಾನಪದಿಯ ಅಂಶಗಳು ವಿಭಿನ್ನವಾಗಿ ಹರಡಿವೆ. ಮೌಖಿಕ ಆಕಾರಗಳು ಸಂಸ್ಕೃತಿಯನ್ನು ಉಳಿಸಿ ಬೆಳಿಸಿಕೊಂಡು ಬಂದಿರುವ ಸಂಪ್ರದಾಯ, ಆಚಾರಣೆ, ನಂಬಿಕೆಗಳ ಮೂಲಕ ಹೇಗೆ ಪ್ರತಿನಿಧಿಸುತ್ತವೆ ಎಂಬುವುದನ್ನು ಅಧ್ಯಯನದಲ್ಲಿ ಕಟ್ಟಿಕೊಡಲು ಮೌಖಿಕ ಆಕಾರಗಳು ಚರಿತ್ರೆಯನ್ನು ನಿರ್ಮಿಸಲು ಹೇಗೆ ನೆರವಾಗಬಲ್ಲವು ಎಂಬುವುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ರಾಜ್ಯದ ಅತ್ಯವಶ್ಯಕವಾದ ಸಪ್ತಂಗಗಳಲ್ಲಿ ದುರ್ಗವೊ ಒಂದು ಎಂದು ರಾಜನೀತಿ ಹೇಳುತ್ತದೆ. ಭದ್ರವಾದ ಕೋಟೆಯಿಲ್ಲದ ರಾಜನನ್ನು ಬಿರುಗಾಳಿಗೆ ಸಿಕ್ಕದ ಮೋಡಕ್ಕೆ ಸಮಾನವೆನ್ನಲಾಗಿದೆ. ಕೋಟೆಯಿಲ್ಲದ ರಾಜನನ್ನು ವಿಷರಹಿತವಾದ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಹಿಂದೆ ರಕ್ಷಣೆ ಪಡೆದು, ವೈರಿ ಪಡೆಯ ನೂರಾರು ಜನರೊಂದಿಗೆ ಹೋರಾಡಬಹುದು. ಮತ್ತು ನೂರಾರು ಬಿಲ್ಲುಗಾರನು ಸಾವಿರಾರು ವೈರಿಗಳೊಂದಿಗೆ ಹೋರಾಡಬಹುದು ಎಂದಿರುವನು.

ಬೆಟ್ಟದಪುರ ಪಿರಿಯಾಪಟ್ಟಣ ತಾಲ್ಲೂಕಿಗೆ ಸೇರಿದ ಹೋಬಳಿ ಪ್ರದೇಶವಾಗಿದ್ದು ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ಹದಿನಾರು ಕಿ.ಮೀ.ಗಳ ಅಂತರದಲ್ಲಿದೆ. ಈ ಪ್ರದೇಶವು ಐತಿಹಾಸಿಕವಾಗಿ ಬಹಳ ಮಹತ್ವದ್ದಾಗಿದೆ. ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿದ್ದು, ಇತಿಹಾಸ ಯುಗದಲ್ಲಿ ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಬಹುದಾದ ಬೆಟ್ಟದಪುರ ಪ್ರದೇಶವು, ಶಾಸನಗಳಿಂದ ಚೋಳ, ಚಂಗಾಳ್ವ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಒಡೆಯ ಮನೆತನದ ಆಳ್ವಿಕೆಗೆ ಒಳಪಟ್ಟಿತೆಂದು ಕಂಡುಬಂದಿದ್ದು ಚಂಗಾಳ್ವ ಮನೆತನ ಪ್ರಮುಖ ಧಾರ್ಮಿಕ ಪವಿತ್ರ ಕ್ಷೇತ್ರವಾಗಿತ್ತು. ಗುಜರಾತಿನ ದ್ವಾರಕೆಯಿಂದ ಬಂದಂಥಹ ಅರಸನಾದ ವಿಕ್ರಮರಾಯ ಪ್ರಾರಂಭದಲ್ಲಿ ನಂಜರಾಯ ಪಟ್ಟಣದಲ್ಲಿ ನೆಲೆಸಿದನು. ನಂತರ ತನ್ನ ಮಂತ್ರಿಯಾದ ಮಂಗರಸನೊಂದಿಗೆ ಪ್ರಾಚೀನವಾದ ಅಂಜನಗಿರಿ ಬೆಟ್ಟವಾದ ಬೆಟ್ಟದಪುರ ಬೆಟ್ಟಕ್ಕೆ ಭೇಟಿ ನೀಡಿದ್ದನು. ಪ್ರಾರಂಭದಲ್ಲಿ ಇಲ್ಲಿಯ ಸ್ಥಳೀಯ ಜನತೆಯಾದ ಬೇಡ ಸಮುದಾಯದೊಂದಿಗೆ ಯುದ್ಧ ಮಾಡಬೇಕಾಯಿತು. ಅಂತಿಮವಾಗಿ ವಿಜೇಯನಾದ ವಿಕ್ರಮರಾಯ ಇಲ್ಲಿಯೇ ಅದರ ನೆನಪಿಗಾಗಿ ಒಂದು ಪುರವನ್ನು ಸ್ಥಾಪಿಸಿದನು. ತನ್ನ ಹೆಸರಿನಿಂದಲೇ ಹತ್ತನೆ ಶತಮಾನದಲ್ಲಿ ವಿಕ್ರಮಪುರವೆಂದು ಕರೆದನು. ಇತ ಜೈನ ಧರ್ಮಿಯಾದವನಾಗಿದ್ದು ಜನತೆಯನ್ನು ಇಲ್ಲಿಗೆ ಕರೆತಂದು ಕೋಟೆಯನ್ನು ನಿರ್ಮಿಸಿದನು.

ಇಲ್ಲಿಯವರೆಗೆ ಕಾಡುಪ್ರದೇಶವಾಗಿದ್ದ ಅಂಜನಗಿರಿ, ಪುರ, ಪಟ್ಟಣವಾಗಿ ಪರಿವರ್ತನೆಗೆ ನಾಂದಿಯಾಯಿತು. ಒಟ್ಟಿನಲ್ಲಿ ಇಂದಿನ ಬೆಟ್ಟದಪುರದ ಸ್ಥಾಪಕನಾಗಿ ವಿಕ್ರಮರಾಯ ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದ್ದು, ಜೈನಧರ್ಮದ ನೆಲೆಯಾಗಿತ್ತೆಂದು ಪುರಾತತ್ವ ಮತ್ತು ಇತಿಹಾಸದಿಂದ ಕಂಡುಬಂದಿದೆ.

ಕೋಟೆ ಅಥವಾ ರಕ್ಷಾವರಣ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆಗೆ ಸಂಸ್ಕೃತದಲ್ಲಿ ದುರ್ಗ ಎಂದು ಅರ್ಥವಿದೆ. ಕೋಟೆಗೆ ಪುರ, ಪ್ರಾಕಾರ, ಕಿಲ್ಲೆ, ಎಂಬ ಅನ್ವರ್ಥಗಳಿವೆ. ಸೈನಿಕರುಗಳಿಂದ ಆವರಿಸಲ್ಪಟ್ಟ ಅಥವಾ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎಂದೆನಿಸಿಕೊಳ್ಳುತ್ತದೆ. ಪ್ರಾಚೀನ ಗ್ರಂಥ ಋಗ್ವೇದದಲ್ಲಿ ಪುರಗಳ ಉಲ್ಲೇಖ, ಪಾಂಡವರ ಇಂದ್ರ ಪ್ರಸ್ಥನಗಳಿಂದ ಕೋಟೆಯ ಪ್ರಾಚೀನತೆಯನ್ನು ತಿಳಿಸುತ್ತದೆ. ಮಾನವನು ನಾಗರೀಕತೆಯ ಪ್ರಗತಿ ಪಥದಲ್ಲಿ ನಡೆದಂತೆ ಅನೇಕ ಸಮುದಾಯಗಳು ಉದಯಿಸಿದವು. ಇಂತಹ ಹಲವು ಕಿರುಸಮುದಾಯಗಳು ಒಂದೆಡೆ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಶಕ್ತಿಯ ಸಮಾಜಗಳು ನಿರ್ಮಾಣಗೊಂಡವು. ರಾಜ್ಯಗಳ ಸಾಮ್ರಾಜ್ಯಗಳ ಉದಯ ಪೂರ್ವದಲ್ಲಿ ಸಮುದಾಯದಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲಕಾರಣ ಮನುಷ್ಯ ಸಮಾಜ ಜೀವಿತ ಪ್ರಜ್ಞೆ, ಈ ಕಾರಣದಿಂದಾಗಿ ತನ್ನ ಸುತ್ತ ಮುತ್ತಲಿನ ಪರಿಸರದ ಅಭದ್ರತೆ ಬಗ್ಗೆ ಯೋಚಿಸಿದ. ಅಂತೆಯೇ ನೆಲೆ ನಿಂತಿದ್ದ ಊರಿನ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿದೆ. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದ್ದಾರೆ. ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ರಕ್ಷಣಾ ವಾಸ್ತು ಮಹತ್ತರ ಪಾತ್ರವಹಿಸಿದೆ. ಅಲ್ಲದೆ ಬೆಟ್ಟದಪುರ ಕೋಟೆಯು ಬೆಟ್ಟದಪುರ ಜನತೆಯ ರಕ್ಷಣೆಗೆ ಇರುವಂತದ್ದು. ಜೆ.ಟಿ. ದಾಂಟೆ ಪ್ರಕಾರ ಪ್ರಾಚೀನ ಕಾಲದ ಈ ಕೋಟೆಗಳು ರಾಜಧಾನಿ ರಕ್ಷಣೆಯ ಸಲುವಾಗಿ ಇರುವಂತಹವುದಾಗಿದೆ.

ವಿಕ್ರಮರಾಯನು ಪಟ್ಟಣವನ್ನು ಸ್ಥಾಪಿಸಿ ಆರ್ಥಿಕವಾಗಿ ಏಳುಸಾವಿರ ಪಗೋಡಗಳಷ್ಟು ಆದಾಯ ತರುವಂತಹ ಒಂದು ಭೂಪ್ರದೇಶವನ್ನು ವಶಪಡಿಸಿಕೊಂಡನು. ಇತನ ನಂತರ ಇತನ ಪುತ್ರನಾದ ಚಂಗಾಲರಾಯನು ಪಟ್ಟಾಭಿಷಿಕ್ತನಾದನು. ಇತನು ತನ್ನ ತಂದೆಗಿಂತ ಬಲಿಷ್ಟನಾಗಿದ್ದು ಪಟ್ಟಣವನ್ನು ವಿಸ್ತರಿಸಿ ಜೈನರ್ಧವನ್ನು ಪ್ರಚಾರ ಮಾಡಿ ಹನ್ನೆರಡುಸಾವಿರ ಪಗೋಡಗಳಷ್ಟು ಆದಾಯ ಬರುವಷ್ಟು ರಾಜ್ಯವಿಸ್ತರಿಸಿ ಕೋಟೆಯನ್ನು ನಿರ್ಮಿಸಿದನೆಂದು ಅರಿಯಬಹುದು. ಪ್ರಕೃತಿದತ್ತವಾದ ಬೆಟ್ಟಗುಡ್ಡಗಳಿಂದ ಸುತ್ತುವರೆದಿದ್ದ ಈ ಪಟ್ಟಣದಲ್ಲಿ ಬೆಟ್ಟದ

ತಳಭಾಗದಲ್ಲಿ ಕೋಟೆಯ ಅವಶೇಷಗಳು ಮಾತ್ರ ಕಂಡುಬಂದಿದ್ದು, ಶಾಸನದಲ್ಲಿ ಕೋಟೆಯ ಸುತ್ತುಗಳು ಅದರ ವ್ಯಾಪ್ತಿ, ಉದ್ದ ಅಗಲಗಳ ಬಗ್ಗೆ ಮಾಹಿತಿಗಳಿಲ್ಲ.

ಬೆಟ್ಟದಪುರ ಮತ್ತು ಅದಕ್ಕೆ ಹೊಂದಿಕೊಂಡಂತೆ ಬೆಟ್ಟದತುಂಗದಲ್ಲಿ ಚಂಗಲರಾಯನು ಕೋಟೆಯನ್ನು ನಿರ್ಮಿಸಿದನೆಂದು ಹೇಳುವರು. ಬೆಟ್ಟದ ಪುರ ಮತ್ತು ಬೆಟ್ಟದ ತುಂಗಗಳಲ್ಲಿ ಒಳಕೋಟೆ, ಹೊರಕೋಟೆಗಳಿದ್ದವೆಂದು ಮೌಖಿಕ ಆಧಾರಗಳು ತಿಳಿಸುತ್ತವೆ. ಬೆಟ್ಟದಪುರದಲ್ಲಿ ಪ್ರಮುಖವಾಗಿ ಎರಡು ಪ್ರವೇಶದ್ವಾರಗಳಿದ್ದವು. ಕೋಟೆಯ ಹೆಬ್ಬಾಗಿಲೆಂದು ಕರೆಯಲಾಗಿರುವ ಪ್ರವೇಶದ್ವಾರವು ಪೂರ್ವಾಭಿಮುಖವಾತಗಿರುವುದಾಗಿದೆ. ಪೂರ್ವಾಭಿಮುಖವಾಗಿರುವ ಪ್ರವೇಶದ್ವಾರದ ಹೆಬ್ಬಾಗಿಲು, ಕಲ್ಲಿನಿಂದ ನಿರ್ಮಿತವಾಗಿದ್ದು, ಬಲಭಾಗದಲ್ಲಿ ಗಣೇಶನ ಗುಡಿಯಿದೆ. ಕೋಟೆಯ ಒಳಭಾಗದಲ್ಲಿ ಜಿನಾಲಯ, ಮಂದಿರ ಮತ್ತು ಅರಮನೆಯನ್ನು ಒಳಗೊಂಡಿರುವುದು. ಆದರೆ ಇಂದು ಅರಮನೆಯ ಪ್ರದೇಶವು ಸಾಮಾನ್ಯ ಜನತೆಯ ವಸತಿಸ್ಥಳವಾಗಿದ್ದು ಯಾವುದೇ ರೀತಿಯ ಅವಶೇಷಗಳು ದೊರೆಯುವುದಿಲ್ಲ. ಒಳಕೋಟೆ ಮತ್ತು ಹೊರಕೋಟೆಯನ್ನು ಕೆತ್ತಿ ನಯಮಾಡಿದ ಮಧ್ಯಮ ಗಾತ್ರದ ಕಲ್ಲು, ಉಂಡೆಗಲ್ಲುಗಳಿಂದ ಕಟ್ಟಲ್ಪಟ್ಟಿದ್ದು ಕಲ್ಲುಗಳ ಮಧ್ಯದಲ್ಲಿ ಸ್ವಲ್ಪ ಸ್ಥಳವು ಇಲ್ಲದಂತೆ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಲಾಗಿದೆ. ಕಲ್ಲುಗಳ ಮಧ್ಯ ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸಿಲ್ಲ. ಸುಮಾರು ಮೂರು ಅಡಿ ಎತ್ತರವಿರುವ ಗೋಡೆಯ ಅವಶೇಷಗಳು ಇರುವುದಾಗಿದೆ.

ಒಳಕೋಟೆಯ ಮುಂಭಾಗದಲ್ಲಿ ಪೇಟೆಬೀದಿ, ಕೋಟೆ ಬೀದಿಯಿದ್ದು ಕಂಡುಬಂದಿದೆ. ಹೊರ ಕೋಟೆಯ ಆವರಣದಲ್ಲಿ ಪುಷ್ಕರಣಿಗಳು, ವೇಶ್ಯೆಯರ ಸ್ಥಾನಕೊಳವಿತ್ತೆಂದು ಇದೇ ರೀತಿಯಲ್ಲಿ ಬೆಟ್ಟತುಂಗದಲ್ಲಿಯು ಒಳಕೋಟೆ, ಹೊರಕೋಟೆ ಇತ್ತೆಂದು ಕಂಡುಬಂದಿದ್ದು, ಒಳಕೋಟೆಯಲ್ಲಿ ಇಂದು ಜಿನಾ ಬಸದಿಗಳು ಮಾತ್ರ ಇರುವುದಾಗಿದೆ. ಹೊರಕೋಟೆಯು ಇದ್ದ ಸ್ಥಳದಲ್ಲಿ ಇಂದು ಹಾರಂಗಿನಾಲೆಯ ನೀರು ಹರಿಯಲು ಕಾಲುವೆಗಳನ್ನು ತೆಗೆದಿರುವರು. ಇದರಿಂದ ಇಲ್ಲಿ ಕೋಟೆಯ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ.

ಅಧ್ಯಾಯ : ಆರು

ಮೂರ್ತಿಶಿಲ್ಪಗಳು

ಅಧ್ಯಾಯ : ಆರು

ಮೂರ್ತಿಶಿಲ್ಪಗಳು

ಭಾರತದಲ್ಲಿ ಪೂಜೆಗೊಳ್ಳುತ್ತಿರುವ ಮೂರ್ತಿಗಳಲ್ಲಿ ಮೂರ್ತ ಮತ್ತು ಅಮೂರ್ತ ರೂಪಗಳೆರಡೂ ಇವೆ. ಮೂರ್ತಬಿಂಬಗಳಿಗೆ ನಿರ್ದಿಷ್ಟವಾದ ರೂಪವಿದ್ದು, ಮನುಷ್ಯ ರೂಪವು, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅವಯವಗಳನ್ನು ಹೊಂದಿರುತ್ತದೆ. ಆದರೆ ಅಮೂರ್ತ ರೂಪಕ್ಕೆ ನಿರ್ದಿಷ್ಟ ರೂಪವಿರುವುದಿಲ್ಲ. ಹುಟ್ಟು ಬಂಡೆಯ ಆಕಾರವನ್ನನುರಿಸಿ ಒಂದು ಕಲ್ಪಿತ ರೂಪವನ್ನು ರಚಿಸುತ್ತಾರೆ. ಇಂತಹ ಮೂರ್ತಿಗಳನ್ನು ಒಡಮೂಡಿದ ಅಥವಾ ಉದ್ಭವ ಮೂರ್ತಿಗಳೆಂದು ಸಾಮಾನ್ಯವಾಗಿ ಭಾವಿಸಿ ಇವುಗಳ ಸುತ್ತಲೂ ಪೌರಾಣಿಕ ಕಥೆಯನ್ನು ಹೆಣೆಯಲಾಗಿರುತ್ತದೆ. ಅನೇಕ ಕ್ಷೇತ್ರಗಳಲ್ಲಿನ ಉದ್ಭವ ಲಿಂಗಗಳು, ಕೆಲವು ನರಸಿಂಹ ಕ್ಷೇತ್ರಗಳಲ್ಲಿನ ನರಸಿಂಹ ಮೂರ್ತಿಗಳು, ಗಣಪತಿ ವಿಗ್ರಹಗಳು, ಅನೇಕ ದೇವತೆಗಳ ಮೂರ್ತಿಗಳು ಮೂರ್ತಿ ಶಿಲ್ಪಗಳ ಗುಂಪಿಗೆ ಸೇರಲ್ಪಟ್ಟಿವೆ.[೧]

ಮೂರ್ತಿ ಎಂಬ ಪದವನ್ನು ಸಾಮಾನ್ಯವಾಗಿ ದೇವತಾ ವಿಗ್ರಹಗಳಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಆದರೆ 'ಶಿಲ್ಪ' ದೇವತೆಗಳ ವಿಗ್ರಹವನ್ನು ರೂಪಿಸುವ ಅಥವಾ ಪ್ರತಿಮೆ (ಪ್ರತಿರೂಪ) ಅಸ್ತಿತ್ವದಲ್ಲಿರುವುದಾಗಿದೆ. ಶಿಲ್ಪಗಳು ಜೀವಂತ ಇಲ್ಲವೆ ಜಡ ವಸ್ತುಗಳ ಬಾಹ್ಯ ಆಕೃತಿಯನ್ನು ಸೂಚಿಸುತ್ತವೆ.[೨] ಭಾರತದಲ್ಲಿ ಮೂರ್ತಿ ಶಿಲ್ಪವು ಹರಪ್ಪ ಸಂಸ್ಕೃತಿಯ ಉಗಮ ಕಾಲದಿಂದಲೂ ಕಾಣಬಹುದಾಗಿದೆ. ಈ ಅವಧಿಯಲ್ಲಿ ವಿವಿಧ ಮಾತೃ ವಿಗ್ರಹಗಳು, ಪಶುಪತಿ ಮೊದಲಾದ ದೇವರ ಮೂರ್ತಿಗಳ ಹಾಗೇ ವಿವಿಧ ಸ್ತ್ರೀಯರ ಮಣ್ಣಿನಿಂದ ಮಾಡಲ್ಪಟ್ಟ ವಿಗ್ರಹಗಳನ್ನು ಕಾಣುತ್ತೇವೆ.

ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ ಶಿಲ್ಪ ಶಬ್ದವು ವಿಭಿನ್ನ ಅರ್ಥಗಳನ್ನು ಹೊಂದಿದೆ. ಪಾಣಿನಿಯ (ಕ್ರಿ.ಪೂ.೫೦೦) ಅಷ್ಟಧ್ಯಾಯದಲ್ಲಿ ಶಿಲ್ಪವನ್ನು ಚಾರು (ಲಲಿತ) ಎಂತಲೂ, ಕೌಟಿಲ್ಯ (ಕ್ರಿ.ಪೂ. ೪೦೦)ನ ಅರ್ಥಶಾಸ್ತ್ರದಲ್ಲಿ ಧರ್ಮಸ್ಥಿತಿಯ ಎಂಬ ಹೆಸರಿನ ಅಧಿಕರಣದಲ್ಲಿ 'ಕಾರುಕ' (ಶಿಲ್ಪಿ) ಶಿಲ್ಪಿಗಳ ಹೆಸರನ್ನು ಮತ್ತು ಅವರ ಕಾರ್ಯಗಳನ್ನು ಸೂಚಿಸಲಾಗಿದೆ.[೩] ಬೆಟ್ಟದಪುರದ ಪರಿಸರವು ಪ್ರಾಚೀನ ಕಾಲದಿಂದಲೂ ಅಧ್ಯಾತ್ಮಿಕ ಮತ್ತು ದೈವಭಕ್ತಿಯನ್ನು ಜನತೆ ಒಳಗೊಂಡಿದೆ ಎಂಬುವುದಕ್ಕೆ ಇಲ್ಲಿ ದೊರೆತಿರುವ ಮೂರ್ತಿಶಿಲ್ಪಗಳು ಸಾಕ್ಷಿಯಾಗಿವೆ. ಜೈನ, ಶೈವ ಮತ್ತು ವೈಷ್ಣವ ಪಂಥಗಳಿಗೆ ಸೇರಿದ ವಿವಿಧ ಮೂರ್ತಿ ಶಿಲ್ಪಗಳು ಕಂಡುಬಂದಿದ್ದು ಇವುಗಳನ್ನು ಶಿಲೆ, ತಾಮ್ರ ಮತ್ತು ಕಂಚಿನಿಂದ ಕೆತ್ತಲಾಗಿದೆ.

ಶಿವಲಿಂಗ:

ಗಂಗರ ಕಾಲದಲ್ಲಿ ನಿರ್ಮಿತವಾದ ಪ್ರಮುಖ ದೇವಾಲಯಗಳಲ್ಲಿ ಸಿಡ್ಲು ಮಲ್ಲಿಕಾರ್ಜುನ ದೇವಾಲಯ ಒಂದು. ಇದು ಬೆಟ್ಟದ ತುದಿಯಲ್ಲಿದ್ದು ಇದರ ಗರ್ಭಗೃಹದಲ್ಲಿ ಶಿವಲಿಂಗವಿದೆ. ಪೀಠದ ಮೇಲೆ ಎರಡೂವರೆ ಅಡಿ ಎತ್ತರದ ಕಪ್ಪು ಶಿಲೆಯಿಂದ ರಚನೆಗೊಂಡಿರುವ ಲಿಂಗವನ್ನು ಅನ್ನದಾನಿ ಮಲ್ಲಿಕಾರ್ಜುನ, ಸಿಡಿಲು ಮಲ್ಲಿಕಾರ್ಜುನ, ಭೂತನಾಥ, ವಿಜಯಾದ್ವಿನಾಥ, ವಿಸರ್ಪಣೇಶ ಎಂಬ ಹೆಸರಿನಿಂದ ಕರೆಯುತ್ತಿರುವರು. ಶಿವಲಿಂಗಕ್ಕೆ ಅಭಿಷೇಕ ಮಾಡುವ ವೇಳೆಯಲ್ಲಿ ಮೀಸೆ, ಕಣ್ಣು, ಮೂಗು ಗೋಚರವಾಗುವುದೆಂದು ಅರಿಯಲಾಗಿದೆ. ಶಿವಲಿಂಗಕ್ಕೆ ಎದುರಾಗಿ ಅಂತರಾಳದಲ್ಲಿ ಎರಡು ಅಡಿ ಎತ್ತರ ಇರುವ ಕಪ್ಪು ಶಿಲೆಯಿಂದ ಕಡೆದ ನಂದಿಯ ವಿಗ್ರಹವಿರುವುದು.

ರಾಜಭಕ್ತ:

ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಮೂರ್ತಿಯು ಶಿಲ್ಪಗಳಲ್ಲಿ ಅತ್ಯಂತ ಸುಂದರವಾಗಿರುವ ಮೂರ್ತಿ ಇದಾಗಿದೆ. ಇದು ರಾಜನ ಶಿಲ್ಪವಾಗಿರುವುದು. ಗರ್ಭಗೃಹಕ್ಕೆ ನೇರವಾಗಿ ನವರಂಗಮಂಟಪದ ಎದುರಿಗೆ ಎಡಭಾಗದ ಮೂಲೆಯಲ್ಲಿರುವುದಾಗಿದೆ. ಈ ಮೂರ್ತಿಯು ಪೀಠದ ಮೇಲೆ ನಿಂತು ರಾಜಭಕ್ತಿಯಿಂದ ದೇವರಿಗೆ ತನ್ನ ಎರಡು ಕೈಗಳನ್ನು ಜೋಡಿಸಿ, ಸ್ವಲ್ಪ ಪ್ರಮಾಣದಲ್ಲಿ ತಲೆ ಭಾಗಿಸಿ ನಮಸ್ಕರಿಸುತ್ತಿರುವ ರೀತಿಯಲ್ಲಿದೆ. ಬೆಲೆಬಾಳುವ ರತ್ನಗಳನ್ನು, ರುದ್ರಾಕ್ಷಿ ಮಾಲೆಯನ್ನು ಕಿವಿಯೋಲೆಯನ್ನು ಮತ್ತು ಸರವನ್ನು ಹೊಂದಿದ್ದಾನೆ. ಈತನು ಯಜ್ಞೋಪವೀತವನ್ನು ಹೊಂದಿದ್ದು, ಉಪವೀತನದ ಮಾದರಿಯಲ್ಲೇ ಒಂದು ಸರವನ್ನು ಧರಿಸಿರುವನು. ಮುಖವು ಕ್ಷೌರ ಮಾಡಿಕೊಂಡಿದ್ದು, ಗೃಹಸ್ಥನಂತೆ ಧೋತಿಯನ್ನು ಧರಿಸಿದ್ದಾನೆ ಮತ್ತು ಒಂದು ಶಾಲನ್ನು ಕೂಡಾ ಹೊಂದಿದ್ದಾನೆ. ಇತನ ಹುಬ್ಬು ದೀರ್ಘವಾಗಿದ್ದು ಕೂದಲು ಸುರಳಿಯಾಕಾರದಲ್ಲಿದೆ. ಮೂಗು ಉದ್ದವಾಗಿದ್ದು ತುಟಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಆಭರಣ ಅಲಂಕೃತವಾದ ಕಿರೀಟ ಮುಕುಟವನ್ನು ಇತ ಧರಿಸಿರುವನು. ಅಲ್ಲದೇ ಮಕರ ಕುಂಡಲ, ಕಂಠಾಭರಣ ಕೇಯೂರ ಅಥವಾ ತೋಳು ಬಂದಿಯನ್ನು ಧರಿಸಿದ್ದು ಕೈಕಡಗ, ಕೈಯಾರ ಎಲ್ಲಾ ಬೇರಳುಗಳಿಗೆ ಉಂಗುರವನ್ನು ಧರಿಸಿರುವನು. ಉದರಬಂಧ, ನಡುಬಂಧ, ಅಲಂಕೃತ ಇಳಿಬಟ್ಟೆಯನ್ನು ತೊಟ್ಟಿರುವನು. ಭಾವ ತುಂಬಿದ ಮುಖವನ್ನು ಒಳಗೊಂಡಿದ್ದು ಮೀಸೆಯನ್ನು ಹೊಂದಿರುವನು. ಭಕ್ತನ ಬಲ ಮತ್ತು ಎಡಭುಜದ ಸಮೀಪ, ಸೂರ್ಯ, ಚಂದ್ರರ ಉಬ್ಬು ಕೆತ್ತನೆಯಿರುವುದು. ರಾಜನು ಕಾಲ್ಗಡಗವನ್ನು ಧರಿಸಿದ್ದಲ್ಲದೆ, ಮಂಡಿಬಂಧಿಯನ್ನು ಧರಿಸಿರುವನು. ಭಕ್ತನು ಎರಡು ಬದಿಗಳಿಗೆ ಸಿಂಹವು ನಿಂತಿರುವ ಶೈಲಿಯಲ್ಲಿ ಕೆತ್ತನೆಯನ್ನು ಒಳಗೊಂಡಿದ್ದಲ್ಲದೆ ಪುಷ್ಪಲಂಕಾರದ ಚಿತ್ರವನ್ನು ಹೊಂದಿರುವುದಾಗಿದೆ. ರಾಜಭಕ್ತನು ಪ್ರವೇಶದ್ವಾರದಲ್ಲಿ ನಿಂತಂತೆ ಇದ್ದು, ಬಾಗಿಲುವಾಡವು ಕಲಾತ್ಮಕ ಕೆತ್ತನೆಯನ್ನು ಒಳಗೊಂಡಿರುವುದುಲ್ಲದೆ ಮೇಲ್ಭಾಗವು

ಕಮಾನಾಕಾರದಲ್ಲಿದೆ. ಪೀಠದ ಮೇಲೆ ಯಾವುದೇ ರೀತಿಯ ಅಕ್ಷರಗಳ ಕೆತ್ತನೆ ಇರುವುದಿಲ್ಲ. ಒಟ್ಟಿನಲ್ಲಿ ರಾಜಭಕ್ತನು ಸದೃಢವಾದ ಮೈಕಟ್ಟನ್ನು ಹೊಂದಿದ್ದಾರೆ. ಇದು ನಾಲ್ಕು ಅಡಿ ಉದ್ದವಿದ್ದು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದಂತಹ ಕುಡುಕೂರಿನ ಪಾಳೆಯಗಾರನ ಪ್ರತಿಮೆಯಾಗಿದೆ.

ಭ್ರಮರಾಂಭಿಕೆ ವಿಗ್ರಹ:

ಮೂಲವಿಗ್ರಹವಾದ ಅನ್ನದಾನಿ ಮಲ್ಲಿಕಾರ್ಜುನ ಗರ್ಭಗೃಹದ ಪಶ್ಚಿಮ ದಿಕ್ಕಿಗೆ ಇರುವುದು, ಈ ಗರ್ಭಗೃಹ ಅಥವಾ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿದ ಹಲವು ವರ್ಷಗಳ ನಂತರ ಈ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿರುವರು. ಈ ದೇವತೆಯನ್ನು ಶಿವನ ಪತ್ನಿಯಾದ ಪಾರ್ವತಿ, ಗಿರಿಜೆ ಎಂಬ ಹೆಸರಿನಿಂದ ಸ್ಥಳೀಯರು ಕರೆಯುವರು. ನಾಲ್ಕು ಅಡಿ ಎತ್ತರವಾಗಿದ್ದು ಪೀಠದ ಮೇಲೆ ನಿಂತಿರುವುದಾಗಿದೆ. ಪೀಠದ ತಳಭಾಗದಲ್ಲಿ ಚಕ್ರಕಾರದ ಚಿತ್ರವಿರುವುದು. ದೇವಿಯು ನಾಲ್ಕು ಕೈಗಳನ್ನು ಒಳಗೊಂಡಿದ್ದು, ಮುಂದಿನ ಎರಡು ಕೈಗಳು ಅಭಯ ಹಸ್ತ ಮತ್ತು ದಾನಮುದ್ರೆಯನ್ನು ಮತ್ತೆ ಹಿಂದಿನೆರಡು ಕೈಗಳು ಪದ್ಮವನ್ನು ಹೊಂದಿದೆ.

ತಾಂಡವೇಶ್ವರ:

ಈ ವಿಗ್ರಹವು ಭ್ರಮರಂಭ ಗರ್ಭಗೃಹದ ಮುಂದೆ ಇರುವುದು ಎರಡೂವರೆ ಅಡಿ ಪೀಠದ ಮೇಲ್ಭಾಗದಲ್ಲಿ ಕಂಚಿನಿಂದ ಕಡೆದಿರುವರು. ಪೀಠ ಮುಂದೆ ಪುಷ್ಪಕಾರದ ಚಿತ್ರದ ಕೆತ್ತನೆಯಿರುವುದಾಗಿದೆ. ತಾಂಡವೇಶ್ವರನು ತನ್ನ ಎಡಗಾಲನ್ನು ಮಡಿಸಿಕೊಂಡು ಬಲಗಾಲನ್ನು ಕೆಳಗೆ ಇಳಿಬಿಟ್ಟಿರುವನು. ಅಲಂಕಾರಿಕ ಕಿರೀಟ ಮುಖಟವನ್ನು ಹೊಂದಿದ್ದು ಕಂಠಾಭರಣವನ್ನು ಧರಿಸಿರುವನು. ಉದರಬಂಧ ಮತ್ತು ನಡುಬಂಧವನ್ನು ಸಹ ಧರಿಸಿರುವರು. ಕಾಲು ಮತ್ತು ಕೈ ಕಡಗಗಳನ್ನು ತೊಟ್ಟಿರುವರು ಅಲ್ಲದೆ ಬಲಭಾಗದ ಕೈಯಲ್ಲಿ ಕೂಡ ಹಿಡಿದಿದ್ದು ಎಡಗೈಯನ್ನು ಅಭಯ ಹಸ್ತ ತೋರಿಸುತ್ತಿರುವುದಾಗಿದೆ. ವಿಗ್ರಹದ ಹಿಂದೆ ಬಾಗಿದ ಕಮಾನು ಹೊಂದಿದ್ದು ಅಲಂಕರವಾಗಿದೆ. ಇದು ಕಳಲೆ ನಂಜರಾಜನ ಕಾಣಿಕೆಯಾಗಿದೆ.

ಏಣಿಹನುಮಂತನ ವಿಗ್ರಹ:

ದೊಡ್ಡಬೆಟ್ಟದ ಪಶ್ಚಿಮಕ್ಕಿರುವ ಚಿರಿದಾದ ಬೆಟ್ಟದ ಮೇಲೆ ಏಣಿಹನುಮಂತನ ವಿಗ್ರಹವಿರುವುದು. ಇದು ಬೃಹತ್ ದೊಡ್ಡ ಬಂಡೆಯಾಗಿದ್ದು ಕಪ್ಪು ಶಿಲೆಯಾಗಿದೆ. ಈ ವಿಗ್ರಹವು ಉತ್ತರ ದಿಕ್ಕಿಗೆ ಮುಖಮಾಡಿರುವುದು. ಮೂರ್ತಿಯ ಹದಿನೈದು ಅಡಿ ಉದ್ದವಾಗಿದ್ದು, ಐದು ಅಡಿ ಅಗಲವಿರುವುದಾಗಿದೆ. ಮೂರ್ತಿಯು ವೀರವೇಷದಿಂದ ನಿಂತಿದ್ದು, ತನ್ನ ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿರುವನು ಅಲ್ಲದೇ ಬಲಗೈಯನ್ನು ಶಿರದ ನೇರಕ್ಕೆ ಎತ್ತಿದ್ದು ಐದು ಬೆರಳುಗಳು

ಕಾಣುತ್ತಿರುವುದಾಗಿದೆ. ಎರಡು ಕೈಗಳಿಗೂ ಕೃಡಗವನು ಧರಿಸಿರುವನು. ಮೂರ್ತಿಯ ಮಂಕಿಯಾಕರದಲ್ಲಿದ್ದು ಕೊರಳಿಗೆ ಅಲಂಕೃತವಾದ ಸರವನ್ನು ಹೊಂದಿದ್ದಾನೆ. ಅಲ್ಲದೇ ಸೊಂಟ ಬಂಧಿಯನ್ನು ಸಹ ಧರಿಸಿರುವನು. ಇಳಿ ಬಟ್ಟೆಯನ್ನು ಹೊಂದಿದ್ದು ಕಾಲಿಗೆ ಕಾಲ್ಗಡವನ್ನು ಧರಿಸಿರುವಂತೆ ಶಿಲ್ಪಿ ಕೆತ್ತಿರುವನು.

ಎಡಗೈಯಲ್ಲಿ ಗದೆಯನ್ನು ಹಿಡಿದುಕೊಂಡಿದ್ದು, ಅದು ಭುಜದ ಮೇಲಿದೆ. ಆಂಜನೇಯ ವಿಗ್ರಹದ ಬಲಭುಜದ ಮೇಲ್ಭಾಗದಲ್ಲಿ ಲಕ್ಷ್ಮಣನು ಇಂದ್ರಜೀತನೊಂದಿಗೆ ಆಕಾಶದಲ್ಲಿ ಹಾರುತ್ತಾ ಬಿಲ್ಲನ್ನು ಹಿಡಿದುಕೊಂಡು ಬಾಣವನ್ನು ಬಿಡುತ್ತಿರುವ ಅಥವಾ ಹೋರಾಡುತ್ತಿರುವ ಯುದ್ಧದ ದೃಶ್ಯವನ್ನು ಕೊರೆಯಲಾಗಿದೆ. ತಳಭಾಗದಲ್ಲಿ ಹನುಮಂತನಂತಿರುವ ಇನ್ನೊಂದು ಶಿಲ್ಪವಿದ್ದು ಇದನ್ನು ಮಕರ ಧ್ವಜವೆಂದು ಕರೆಯಲಾಗಿದೆ. ಇಲ್ಲಿಯೇ ಸಮುದ್ರದಾಕಾರದ ರಚನೆಯಿದ್ದು, ಮತ್ಸ್ಯ, ಆಮೆಯ ಉಬ್ಬು ಶಿಲ್ಪವಿರುವುದಾಗಿದೆ. ಈ ವಿಗ್ರಹದಲ್ಲಿ ಎರಡು ಗೂಡುಗಳನ್ನು ಕೊರೆದಿರುವುದು. ಒಂದು ವೃತ್ತಾಕಾರದ ಸಣ್ಣ ಸ್ಥಂಭವಿದ್ದು ಇದರ ಮೇಲೆ ಬಳ್ಳಿಯಾಕಾರದ ಹೂವಿನ ಕೆತ್ತನೆಯಿರುವುದು. ಹನುಮಂತನು ಸಮುದ್ರದ ಮೇಲೆ ವೀರಾವೇಷದಿಂದ ನಿಂತಿರುವ ದೃಶ್ಯವನ್ನು ಕಾಣಬಹುದು. ಇದರಿಂದ ವೀರಹನುಮಂತನೆಂದು, ಪುರೋಹಿತ ಕಾರ್ಯವನ್ನು ಏಣಿ ಹಾಕಿಕೊಂಡು ಮಾಡಬೇಕಾಗಿರುವುದರಿಂದ ಏಣಿ ಹನುಮಂತನೆಂದು ಸಹ ಕರೆಯುವರು.

ಈ ವಿಗ್ರಹದ ಮೇಲೆ ಶಿಲ್ಪಿಯು

ಲಕ್ಷ್ಮಣದೇವರು.

ವೀರ ಹನುಮಂತ ದೇವರು,

ಹನುಮಂತದೇವರು,

ಮಕರಧ್ವಜ ತುರುಮ

ಮಕರ ಎಂದು ಕೊರೆದಿರುವನು.

ಗೋಪಾಲಕೃಷ್ಣ ಮೂರ್ತಿ ಶಿಲ್ಪ:

ಏಣಿ ಹನುಮಂತ ದೇವಾಲಯದಲ್ಲಿ ಉತ್ತರ ದಿಕ್ಕಿಗೆ ಗೋಪಾಲಕೃಷ್ಣ ಮೂರ್ತಿ ಶಿಲ್ಪವಿರುವುದು. ಕಪ್ಪು ಶಿಲೆಯಾಗಿದ್ದು, ನಾಲ್ಕು ಅಡಿ ಎತ್ತರವಿರುವುದಾಗಿದೆ. ಇತನನ್ನು ವೇಣುಗೋಪಾಲನೆಂದು ಕರೆಯುವರು. ತ್ರಿಭಂಗಿಯಲ್ಲಿ ನಿಂತು ಕೊರಳನ್ನು ನುಡಿಸುತ್ತಿರುವನು. ಇತನ ಶಿರದಲ್ಲಿ ಕೇಶವನ್ನು ಎಡಭಾಗದಲ್ಲಿ ಮುಡಿಗಟ್ಟು ದಪ್ಪದಾದ ತುರುಬು ಇದೆ. ಇದರಿಂದ ಶಿರದಲ್ಲಿ ಕಿರೀಟ ಮುಕುಟವಿಲ್ಲ. ಗೋಪಾಲನ ಮುಖ ಅಂಡಾಕಾರವಾಗಿದ್ದು, ಅರೆಮುಚ್ಚಿದ ಕಣ್ಣುಗಳು ಗಾನದಲ್ಲಿ ತನ್ಮಯವಾಗಿರುವುದನ್ನು ಬಿಂಬಿಸಿದೆ. ಎರಡು ಕೈಗಳಿಂದ ಕೊರಳನ್ನು

ಹಿಡಿದಿರುವ ಗೋಪಾಲನಿಗೆ ಕೊರಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ಕೈತೋಳಿನಲ್ಲಿ ಭುಜಕೀರ್ತಿ, ತೋಳ್ಬಂದಿಯೂ ಕೈಗಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ನಾಲ್ಕು ಕೈಗಳಿದ್ದು ಇನ್ನುಳಿದ ಬಲ ಕೈಯಲ್ಲಿ ಗಂಟೆಯನ್ನು ಎಡಕೈಯಲ್ಲಿ ದಂಡವನ್ನು ಹಿಡಿದಿರುವುದಾಗಿದೆ. ತೊಡೆಯು ದಪ್ಪವಾಗಿದ್ದು ಬಲ ಮತ್ತು ಎಡಭಾಗದಲ್ಲಿ ಗೂವುಗಳಿರುವುದನ್ನು ಕಾಣಬಹುದಾಗಿದೆ. ಮತ್ತು ಶಿರದ ಎಡಭಾಗದಲ್ಲಿ ಚಂದ್ರ, ಬಲಭಾಗದಲ್ಲಿ ಸೂರ್ಯನ ಉಬ್ಬಿಸ ಚಿತ್ರವಿರುವುದು.

ಭೈರವನ ಮೂರ್ತಿ ಶಿಲ್ಪ:

ಆಂಜುನೇಯ ದೇವಾಲಯದ ಉತ್ತರಕ್ಕೆ ಮೆಟ್ಟಿಲುಗಳ ಎಡಭಾಗದಲ್ಲಿ ಭೈರವನ ಮೂರ್ತಿ ಇರುವುದು. ಇದು ಏಕಶಿಲೆಯಾಗಿರುವುದು. ಮೂರ್ತಿಯ ಶಿಲ್ಪ ಬೆತ್ತಲೆಯಾಗಿ ನಾಲ್ಕು ಕೈಗಳನ್ನು ಹೊಂದಿರುವುದಾಗಿದೆ. ಬಲಭಾಗದ ಒಂದು ಕೈಯಲ್ಲಿ ಡಮರುಗವನ್ನು, ಮತ್ತೊಂದರಲ್ಲಿ ಅಭಯ ಹಸ್ತವಿರುವಿದು. ಎಡಗೈಯಲ್ಲಿ ತ್ರಿಶೂಲವನ್ನು ಮತ್ತೊಂದರಲ್ಲಿ ಹಿಡಿದಿರುವುದಾಗಿದೆ. ಇತನ ಕಿವಿಯ ಉದ್ದವಾಗಿದ್ದು ಯಜ್ಞೋಪವಿತವನ್ನು ಧರಿಸಿರುವರು. ಅಲ್ಲದೇ ಇವರ ಎರಡು ಪಾದವು ಬಲಭಾಗದ ಕಡೆಗೆ ಇರುವುದು.

ವೀರಭದ್ರನ ಮೂರ್ತಿ:

ವೀರಭದ್ರ ಮೂರ್ತಿಶಿಲ್ಪವು ಸಿಡ್ಲುಮಲ್ಲಿಕಾರ್ಜುನ ದೇವಾಲಯದ ನವರಂಗ ಮಂಟಪದಲ್ಲಿರುವುದು. ಪೂರ್ವದಿಕ್ಕಿನಲ್ಲಿರುವ ಪಶ್ಚಿಮಾಭಿಮುಖವಾಗಿದೆ. ಈ ಮೂರ್ತಿಯು ಮೂರು ಅಡಿ ಎತ್ತರವಾಗಿದೆ. ಶಿಲ್ಪವು ಹಿತ್ತಾಳೆಯದಾಗಿದೆ. ವೀರಾವೇಶದಿಂದ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಶಿರದಲ್ಲಿ ಅಲಂಕೃತವಾದ ಕಿರೀಟಮಕುಟ, ಉದ್ದನೆಯ ಮೀಸೆಯನ್ನು ಸುಂದರವಾದ ಕಂಠಾಭರಣ, ಉದರಬಂಧಿ ಮತ್ತು ನಡುಬಂಧಿಯನ್ನು ಧರಿಸಿರುವರು. ನೆರಿಗೆಯಾಕಾರದ ಇಳಿಬಟ್ಟೆಯನ್ನು ತೊಟ್ಟು ಪಾದರಕ್ಷೆಯನ್ನು ಧರಿಸಿರುವ ವೀರಭದ್ರ ಬಲಗೈಯಲ್ಲಿ ಉದ್ದನೆಯ ತ್ರಿಶೂಲ, ಕಠಾರಿಯನ್ನು ಮತ್ತು ಎಡಗೈಯನ್ನು ಕೇಟದ ಮೇಲೆ ಇಟ್ಟಿರುವರು. ಮತ್ತೊಂದು ಕೈಯಲ್ಲಿ ಡಮರುಗವನ್ನು, ಅದರ ಮೇಲಿನ ಭಾಗದಲ್ಲಿ ರುಂಡವನ್ನು ಒಳಗೊಂಡಿರುವುದಾಗಿದೆ. ರುಂಡಗಳನ್ನು ಸೆರಮಾಲೆಯನ್ನಾಗಿ ಮಾಡಿಕೊಂಡು ಖಡ್ಗವನ್ನು ತನ್ನ ಮುಂದೇ ಸೊಂಟಕ್ಕೆ ಸಿಲುಕಿಸಿಕೊಂಡಿರುವರು. ವೀರಭದ್ರನ ಪೀಠದ ತಳಭಾಗದಲ್ಲಿ ನಂದಿಯ ಶಿಲ್ಪವಿರುವುದು.

ಜಡೆ ವೀರಭದ್ರ ವಿಗ್ರಹ:

ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಸಮೀಪದಲ್ಲಿರುವ ಪಶ್ಚಿಮಕ್ಕಿರುವ ವೀರಭದ್ರ ದೇವಾಲಯದಲ್ಲಿ ಈ ವಿಗ್ರಹವಿದೆ. ಬೆಟ್ಟದಲ್ಲಿರುವ ದೊಡ್ಡ ವಿಗ್ರಹಗಳಲ್ಲಿ ಇದು ಒಂದಾಗಿದೆ. ಮೂರ್ತಿಶಿಲ್ಪವು ಪೂರ್ವಾಭಿಮುಖವಾಗಿರುವುದು. ಇದನ್ನು ಪಂಚಲೋಹದಿಂದ ಕೆತ್ತಿದ್ದು ಏಳು

ಅಡಿ ಎತ್ತರವಾಗಿದೆ. ವೀರಭದ್ರನು ಎರಡು ಅಡಿ ಎತ್ತರದ ಪೀಠದ ಮೇಲೆ ನಿಂತಿರುವನು. ವೀರಾವೇಷದಿಂದ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿರುವನು. ಬಲಭಾಗದ ಕೈಯಲ್ಲಿ ಕಟರಿ, ಮತ್ತೊಂದರಲ್ಲಿ ಬಾಣವನ್ನು ಹಿಡಿದು, ಎಡಗೈ ಒಂದರಲ್ಲಿ ಕೇಟವನ್ನು, ಮತ್ತೊಂದರಲ್ಲಿ ಬಾಣವನ್ನು ಹಿಡಿದು ನಿಂತಿರುವನು. ವೀರಭದ್ರನ ಶಿರದಲ್ಲಿ ಬೆಲೆಬಾಳುವ ಕಿರೀಟ ಮುಕುಟ, ಹಣೆಯಲ್ಲಿ ಶಿವಲಿಂಗ ಹೊಂದಿದ್ದು, ವೀರಾವೇಷದ ಮುಖದ ಭಾವನೆಯನ್ನು ಹೊಂದಿರುವನು. ಉದ್ದನೆಯ ಮೀಸೆಯಿದ್ದು ಸೂಕ್ಷ್ಮ ಕೆತ್ತನೆಯ ಕಂಠಾಭರಣ, ಯಜ್ಞೋಪವೀತೆ, ಉದರಬಂಧಿ ಮತ್ತು ನಡುಬಂಧಿಯನ್ನು ಧರಿಸಿರುವನು. ಇತನ ಸೊಂಟವು ಅತ್ಯಂತ ಸಣ್ಣದಾಗಿದ್ದು ಮಹಿಳೆಯ ಆಕೃತಿಯನ್ನು ಹೊಂದಿರುವುದಾಗಿದೆ. ಕಿವಿಯು ಚಿಕ್ಕದಾಗಿದ್ದು ದೊಡ್ಡದಾದ ಓಲೆಯನ್ನು ಧರಿಸಿರುವನು.

ಇವರ ನಡವು ವಿಸ್ತರವಾಗಿದ್ದು ಮೂರು ಇಂಚು ಎತ್ತರವಾದ ಪಾದರಕ್ಷೆಯನ್ನು ಧರಿಸಿರುವರು ಮತ್ತು ಕಾಲ್ಗಡವನ್ನು ಹಾಕಿ ರುಂಡಗಳನ್ನೇ ತನ್ನ ಹಾರವನ್ನಾಗಿ ಮಾಡಿಕೊಂಡು ಧರಿಸಿರುವನು. ಬೆರಳುಗಳು ಬಲಿಷ್ಠವಾಗಿದ್ದು ಉತ್ತಮವಾದ ಉಂಗುರವನ್ನು ಹಾಕಿಕೊಂಡಿರುವರು. ತನ್ನ ಶಿರದ ಸಮೀಪ ಸೂರ್ಯ, ಚಂದ್ರರ ಕೆತ್ತನೆಯಾಗಿರುವುದಾಗಿದೆ. ಅಲ್ಲದೇ ಮಕರಕುಂಡಲ ಹೊಂದಿದ್ದು ಉದ್ದವಾದ ಉಬ್ಬನ್ನು ಹೊಂದಿರುವರು. ವೀರಭದ್ರನ ಬಲಭಾಗದಲ್ಲಿ ಟಗರುಮುಖದ ಮನುಷ್ಯಕಾರದ ವ್ಯಕ್ತಿಯು ಭಕ್ತಿಯಿಂದ ಕೈಮುಗಿಯುತ್ತಿರುವ ಶಿಲ್ಪವಿರುವುದು. ತಾಮ್ರದ ಪೀಠವು ಹೂವಿನಕಾರದ ಅಲಂಕಾರವನ್ನು ಒಳಗೊಂಡಿರುವುದು. ಇದರ ತಳಭಾಗದಲ್ಲಿ ಮಲಗಿರುವ ಮಹಿಳೆಯ ಶಿಲ್ಪವಿರುವುದು.

ಈ ಶಿಲ್ಪವನ್ನು ಜಡೇವೀರಭದ್ರ ಎಂದು ಕರೆಯುವರು. ವೀರಭದ್ರನ ಹಿಂದಿನ ಭಾಗದಲ್ಲಿ ಮಹಿಳೆಯ ಆಕಾರವನ್ನು ಹೊಂದಿರುವುದಾಗಿದೆ. ಜಡೇಯನ್ನು ಉದ್ದವಾಗಿ ಬಿಟ್ಟು ಮಕರ ಕುಂಡಲ ಕೇಯೂರ, ಉದರಬಂಧ, ನಡುಬಂಧವನ್ನು ಧರಿಸಿರುವರು. ಮತ್ತು ಉದ್ದನೆಯ ಬಟ್ಟೆಯನ್ನು ಧರಿಸಿದ್ದು ಬೆಲೆ ಬಾಳುವ ಆಭರಣಗಳನ್ನು ಧರಿಸಿರುವರು. ಕಾಲ್ಗಡಗ, ಕೈಗಡಗವನ್ನು ಧರಿಸಿ ಪಾದರಕ್ಷೆಯ ಮೇಲೆ ನಿಂತಿರುವರು. ಜಡೇ ವೀರಭದ್ರನ ಭಾವಚಿತ್ರ ತೆಗೆಯಲು ತುಂಬ ಕಷ್ಟಕರವಾಗಿರುವುದಾಗಿದೆ.

ವೀರಭದ್ರನ ವಿಗ್ರಹದ ಮುಂದಿನ ಭಾಗದಲ್ಲಿ ಮಹಿಳೆಯೊಬ್ಬಳ ವಿಗ್ರಹವಿರುವುದು. ಈ ವಿಗ್ರಹವು ಮೂರು ಅಡಿ ಉದ್ದವಾಗಿ ಶಿಲೆಯಿಂದ ರಚನೆಗೊಂಡಿದೆ. ಶಿವಲಿಂಗಕಾರದ ಪೀಠದ ಮೇಲೆ ನಿಂತಿರುವುದಾಗಿದೆ. ಪೀಠವು ಒಂದೂವರೆ ಅಡಿ ಎತ್ತರವಾಗಿದೆ. ಇದರ ಮೇಲೆ ವೀರಾವೇಷ ಭಾವದ ರೀತಿಯಲ್ಲಿ ನಿಂತಿದ್ದು ಎರಡು ಕೈಗಳನ್ನು ಹೊಂದಿರುವರು. ಬಲಗೈಯಲ್ಲಿ ಕಟಾರಿಯನ್ನು ಎಡ ಕೈಯಲ್ಲಿ ಕೇಟವನ್ನು ಹಿಡಿದಿರುವುದಾಗಿದೆ. ಅಲ್ಲದೇ ತೋಳುಬಂದಿ,

ಎದೆಪಟ್ಟಿಕೆ, ಉದರಬಂಧಿ, ಸೊಂಟಬಂಧಿಯನ್ನು ಧರಿಸಿರುವರು. ಅಲಂಕೃತವಾದ ಸರಮಾಲೆಯನ್ನು ಹೊಂದಿದ್ದು ಅಲಂಕೃತವಾದ ನೆರಿಗೆಯಾಕಾರದ ಬಟ್ಟೆಯನ್ನು ಹಾಕಿದ್ದು ಕಾಲ್ಗಡಗವು ಇರುವುದಾಗಿದೆ. ಪೀಠದಲ್ಲಿ ಪುಷ್ಪಲಂಕಾರದ ಚಿತ್ರವನ್ನು ಒಳಗೊಂಡಿರುವುದಾಗಿದೆ. ಒಟ್ಟಿನಲ್ಲಿ ವೀರಾವೇಷದ ಮಹಿಳೆಯ ಲಕ್ಷಣವನ್ನು ಒಳಗೊಂಡಿರುವುದಾಗಿದೆ.

ಆದಿನಾಥ ತೀರ್ಥಂಕರ:

ಈ ವಿಗ್ರಹವು ಭುವನಹಳ್ಳಿ ಬಸದಿಯ ಗರ್ಭಗೃಹದಲ್ಲಿರುವುದು. ಜೈನ ಸಂಪ್ರದಾಯದ ಪ್ರಕಾರ ಒಟ್ಟು ಇಪ್ಪತ್ನಾಲ್ಕು ತೀರ್ಥಂಕರರಿದ್ದಾರೆ. ಅವರಲ್ಲಿ ಮೊದಲಿಗನು ಆದಿನಾಥ ಅಥವಾ ವೃಷಭನಾಥ. ಪೀಠದ ಮೇಲ್ಭಾಗದಲ್ಲಿ ಪದ್ಮಪೀಠದ ಮೇಲೆ ತ್ಯಾಗಿಯಾಗಿ ನಿಂತಿರುವನು. ಪಂಚಲೋಹದಿಂದ ಮಾಡಲ್ಪಟ್ಟ ಈ ವಿಗ್ರಹವು ಮೂರು ಅಡಿ ಎತ್ತರವಾಗಿರುವುದು. ಶಿಲ್ಪವು ಪೂರ್ವಾಭಿಮುಖವಾಗಿದ್ದು ಕಪ್ಪು ಬಣ್ಣವನ್ನು ಹೊಂದಿರುವುದು. ಶಿರದ ಮೇಲಿನ ಭಾಗದಲ್ಲಿ ಮುಕ್ಕೊಡೆಯನ್ನು ಹೊಂದಿದ್ದು ಭುಜದ ಮೇಲಿನ ಎರಡು ಭಾಗದಲ್ಲಿ ಬಿಸಣಿಕೆಯು ಇರುವುದು. ಏಕಾಂಗಿಯಾಗಿ ನಿಂತ ಆದಿನಾಥನ ಸುತ್ತ ಇಪ್ಪತ್ಮೂರು ಜೈನ ತೀರ್ಥಂಕರರ ಕೆತ್ತನೆಯಿರುವುದು. ಆದಿನಾಥನ ಎಡ ಮತ್ತು ಬಲಭಾಗದಲ್ಲಿ ಗೋಮುಖ, ಚಕ್ರೇಶ್ವರಿಯ ಯಕ್ಷ-ಯಕ್ಷಿಯರ ಕೆತ್ತನೆಯಿರುವುದಾಗಿದೆ. ಪೀಠದಲ್ಲಿ ಆದಿನಾಥನ ವಾಹನವಾದ ವೃಷಭ ಇರುವುದು. ಇಲ್ಲಿಯ ಇಲ್ಲಿಯ ಮೂಲ ತೀರ್ಥಂಕರರ ವಿಗ್ರಹ ಸ್ಥಳಾಂತರಗೊಂಡಿದೆ.

ಶಾಂತಿನಾಥ ಮೂರ್ತಿ ಶಿಲ್ಪ:

ಕೂಣಸೂರು ಗ್ರಾಮದ ಶಾಂತಿನಾಥ ಬಸದಿಯಲ್ಲಿ ಮೂಲ ವಿಗ್ರಹವಾಗಿದೆ. ಜೈನ ಸಂಪ್ರದಾಯದ ಪ್ರಕಾರ ೨೪ ತೀರ್ಥಂಕರಗಳಲ್ಲಿ ಶಾಂತಿನಾಥನು ೧೬ನೇ ತೀರ್ಥಂಕರನಾಗಿದ್ದಾನೆ. ಖಡ್ಗಸನದಲ್ಲಿದ್ದು ನಾಲ್ಕೂವರೆ ಅಡಿ ಎತ್ತರವಾಗಿದೆ. ಕಪ್ಪು ಶಿಲೆಯಿಂದ ಕೂಡಿದ್ದು ಎಡ ಮತ್ತು ಬಲಭಾಗದಲ್ಲಿ ಗರುಡ, ಮಹಾಮಾನಸಿಯರೆಂಬ ಯಕ್ಷ-ಯಕ್ಷಿಯರ ಶಿಲ್ಪವಿರುವುದು, ಪೀಠದ ತಳಭಾಗದಲ್ಲಿ ಎರಳೆಯ (ಜಿಂಕೆ) ಚಿತ್ರವಿದೆ ಪೀಠವು ಶಿವಲಿಂಗಕಾರಾದಲ್ಲಿದೆ. ಶಾಂತಿನಾಥನು ಉದ್ದವಾದ ಕಿವಿಯನ್ನು ಹೊಂದಿದ್ದು ಶಿರದ ಮೇಲಿನ ಭಾಗದಲ್ಲಿ ಮುಕ್ಕೂಡೆ ಇದೆ ಮತ್ತು ಶಿರದ ಕೇಶವು ಗುಂಗುರು ಆಕಾರವನ್ನು ಹೊಂದಿದೆ.

ಮಹಾವೀರನ ಶಿಲ್ಪ:

ಶಿಲ್ಪವು ಬೆಟ್ಟದ ಪಶ್ಚಿಮಕ್ಕಿರುವ ಜೋಗನ ಹಳ್ಳಿಯಲ್ಲಿದೆ. ಪ್ರಾಥಮಿಕ ಶಾಲೆ ಸಮೀಪದ ರಸ್ತೆ ಬದಿಯಲ್ಲಿರುವುದು. ಶಿಲೆಯ ಮೇಲ್ಭಾಗದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಚಿತ್ರವಿದೆ. ಬಲಭಾಗದಲ್ಲಿ ಭಕ್ತನು ಮಹಾವೀರನಿಗೆ ನಮಿಸುತ್ತಿರುವ ಮತ್ತು ಎಡಭಾಗದಲ್ಲಿ ಬಿಸಣಿಕೆಯನ್ನು

ಹಿಡಿದು ಸೇವಕನು ಗಾಳಿ ಬೀಸುತ್ತಿರುವುದಾಗಿದೆ. ಶಿರದ ಎಡಭಾಗದಲ್ಲಿ ಚಂದ್ರ ಮತ್ತು ಬಲಭಾಗದಲ್ಲಿ ಸೂರ್ಯನ ಉಬ್ಬು ಶಿಲ್ಪವಿದೆ. ಈ ಶಿಲ್ಪವು ೨.೫ x ೨.೫ ಉದ್ದ ಮತ್ತು ಅಗಲವಿದೆ.

ದಿಂಡಲಗಟ್ಟೆ ಬಸವ :

ರಾಯಗೋಪುರದಿಂದ ಬೆಟ್ಟದ ತುದಿಯವರೆಗೆ ಮೆಟ್ಟಿಲುಗಳನ್ನು ಹತ್ತುವಾಗ ಮಂಟಪದ ಎರಡು ಬದಿಗಳಲ್ಲಿ ನಂದಿ ವಿಗ್ರಹಗಳು ಕಂಡುಬಂದಿವೆ. ಪ್ರತಿಯೊಂದು ಮಂಟಪದಲ್ಲಿ ಇರುವ ಬಸವನ ಮೂರ್ತಿಗಳು ಮತ್ತೊಂದು ಬಸವನ ಮೂರ್ತಿಗೆ ಭಿನ್ನವಾಗಿರುವುದಾಗಿದೆ. ಈ ಬಸವನ ಮೂರ್ತಿಗಳನ್ನು ಶಿಲೆಯಿಂದ ಕೆತ್ತಲಾಗಿದೆ. ಇಂಥಹ ಬಸವನ ಮೂರ್ತಿಗಳನ್ನು ಎರಡು ಕಡೆಯು ಸಮತಟ್ಟಾದ ಚೌಕಕಾರದ ಎರಡೂವರೆಯಿಂದ ಮೂರು ಅಡಿ ಎತ್ತರ ಪೀಠ ಸ್ಥಂಬದ ಮೇಲೆ ಸ್ಥಾಪಿಸಲಾಗಿದೆ. ಒಂದು ಪೀಠವು ನಾಲ್ಕು ಸ್ಥಂಬಗಳನ್ನು ಒಳಗೊಂಡಿದ್ದು ಮತ್ತೊಂದು ಪೀಠದಲ್ಲಿ ನಾಲ್ಕು ಸ್ಥಂಬಗಳು ಇದ್ದು ಒಟ್ಟು ಎಂಟು ಸ್ಥಂಬಗಳು ಇರುವುದು. ಸ್ಥಂಬವು ಭೋದಿಗೆಯನ್ನು ಒಳಗೊಂಡಿದ್ದು ಕಪೋತವನ್ನು ಹೊಂದಿದೆ. ಇದು ಒಟ್ಟು ಎಂಟು ಸ್ಥಂಬಗಳು ಇರುವುದು. ಸ್ಥಂಬವು ಭೋದಿಗೆಯನ್ನು ಒಳಗೊಂಡಿದ್ದು ಕಪೋತವಿರುವುದು. ಇದರ ಮೇಲೆ ಗಾರೆಯ ಶಿಲ್ಪವನ್ನು ಒಳಗೊಂಡಿದ್ದು ಅವಶೇಷಗಳು ಇಂದು ಇಲ್ಲವಾಗಿವೆ.

ಭಕ್ತರ ಆಕಳುಗಳು ಒಂದು ವೇಳೆ ಕಳೆದುಹೋದರೆ, ಆ ಆಕಳುಗಳು ಮತ್ತೆ ಮನೆಗೆ ವಾಪಸ್ಸು ಬರಲು ಹರಕೆಯನ್ನು ಮಾಡಿಕೊಳ್ಳುವರು. ಆಕಳುಗಳು ಬಂದಂತಹ ಸಮಯದಲ್ಲಿ ಆ ಬಸವನಿಗೆ ಹಾಲು, ಮೊಸರುಗಳನ್ನು ನೀಡುವರು. ಇಂಥ ನಂದಿಯನ್ನು ಮಂಟಪಗಳೆರಡು ಬದಿಯಲ್ಲಿ ಸ್ಥಾಪಿಸಿದ್ದಾರೆ. ಇವುಗಳಿಗೆ ದಿಂಡಲಗಟ್ಟೆ-ಬಸವನೆಂದು ಹೆಸರು. ಈ ಮಂಟಪದಲ್ಲಿ ಬಾಗಿಲು ಹಾಳಾಗಿದ್ದು ಇದರ ಹಿಂಭಾಗದಲ್ಲಿ ತೋರಣಗಂಭವಿದೆ.

ಮಾಧವನಿಂಗನ ಕಲ್ಲು:

ಬೆಟ್ಟದ ತಳದಿಂದ ಮೆಟ್ಟಿಲುಗಳ ಮುಖಾಂತರ ತೆರಳುವಾಗ ದಿಂಡಲಗಟ್ಟೆ ಬಸವ ಮಂಟಪ ಕಾಣುವುದು. ಇದರ ದಕ್ಷಿಣ ದಿಕ್ಕಿಗೆ ಎರಡು ದೊಡ್ಡ ಕಲ್ಲುಗಳು ಇವೆ. ಇವನ್ನು ಮಾಧವನಿಂಗನ ಕಲ್ಲು ಅಥವಾ ನಡವನಿಗನ ಬಂಡೆ ಎಂಥಲೂ ಸಹ ಕರೆಯುವರು. ಇದಕ್ಕೊಂದು ಐತಿಹ್ಯವಿದೆ. ಅಂದರೆ ಹೊಸ ದಂಪತಿಯೊಂದು ಈ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವರು. ಈ ವೇಳೆಯಲ್ಲಿ ಜೋರಾಗಿ ಮಳೆ ಬರುವುದು. ಆಗ ಈ ಕಲ್ಲಿನಲ್ಲಿ ಆಶ್ರಯವನ್ನು ಪಡೆಯುವರು. ಆದರೆ ಆ ದಂಪತಿಗಳು ಮರಳಿ ಬರುವುದಿಲ್ಲ. ಹಾಗಾಗಿ ಭಗವಾನ್ ಶಿವನೇ ಬಂದು ಇಲ್ಲಿ ನೆಲಸಿರುವರೆಂದು ಹೇಳಲಾಗುತ್ತದೆ. ಕಥೆಯು ಹೇಗೆ ಇರಲಿ, ಇಲ್ಲಿ ಒಂದು ಬಾರಿ ಹೇಳಿದ ಮಾತು ಸ್ಪಷ್ಟವಾಗಿ ಪ್ರತಿಧ್ವನಿಸಲ್ಪಡುತ್ತದೆ.

ಅಡಿಟಿಪ್ಪಣಿಗಳು

೧. ಡಾ. ದೇವರಕೊಂಡರೆಡ್ಡಿ, ೧೯೯೩, ಗಂಗರ ಶಿಲ್ಪಕಲೆ, ಬೆಂಗಳೂರು, ಪುಟ. ೧.

೨. ಡಾ. ಶಿವರಾಮ ಕಾರಂತ, ೧೯೭೫, ಭಾರತೀಯ ಶಿಲ್ಪ, ಬೆಂಗಳೂರು, ಪುಟ ೧.

೩. ಮರಿಶಾಮಾಚಾರ್, ೨೦೦೦, ಭಾರತೀಯ ಶಿಲ್ಪಕಲೆ, ಬೆಂಗಳೂರು, ಪುಟ. ೫.

ಅಧ್ಯಾಯ : ಏಳು

ಕೆರೆಕಟ್ಟೆಗಳು

ಅಧ್ಯಾಯ : ಏಳು

ಕೆರೆಕಟ್ಟೆಗಳು

ಪ್ರಪಂಚದಲ್ಲಿ ಕೃಷಿಯು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದ ಒಂದು ವೃತ್ತಿಯಾಗಿದೆ. ಕೃಷಿಯ ಉಗಮ ಮತ್ತು ವಿಕಾಸವು ಬಹು ಪ್ರಾಚೀನ. ಮಾನವನು ತನ್ನ ಪೂರ್ವಜರಾದ ಮಂಗನಿಂದ ಭೌತಿಕವಾಗಿ ಹಾಗೂ ಮಾನಸಿಕವಾಗಿ ವಿಕಾಸ ಹೊಂದಲು ಸರಿಸುಮಾರು ಇಪ್ಪತ್ತು ಲಕ್ಷ ವರ್ಷಗಳು ಬೇಕಾದವು. ಅವನು ಕೈಗಳನ್ನು ಸ್ವತಂತ್ರವಾಗಿ ಬಳಸಿಕೊಂಡು ವಿವಿಧ ನಮೂನೆಯ ಕಲ್ಲಿನ ಆಯುಧಗಳನ್ನು ತಯಾರಿಸಿ, ಅವುಗಳನ್ನು ಬಳಸಿ ಪ್ರಾಣಿಗಳನ್ನು ಬೇಟೆಯಾಡಲು ಪ್ರಾರಂಭಿಸಿದ. ಈ ಶಿಲಾಯುಧಗಳ ಗಾತ್ರ, ರಚನೆ, ವಿನ್ಯಾಸ ಮತ್ತು ಉಪಯುಕ್ತತೆಯನ್ನು ಗಮನದಲ್ಲಿರಿಸಿಕೊಂಡು ಪುರಾತತ್ವಜ್ಞರು, ಆದಿ, ಮಧ್ಯ, ಅಂತ್ಯ ಹಾಗೂ ಸೂಕ್ಷ್ಮಶಿಲಾಯುಧಗಳೆಂದು ವರ್ಗೀಕರಿಸುತ್ತಾರೆ.[೧] ಆದಿಮಾನವನಂತೆ ಜಗತ್ತಿನ ಆದಿ ಪ್ರಾಣಿ ಸಮೂಹ ಮತ್ತು ಪಕ್ಷಿ ಸಂಕುಲ, ಇತರೆ ಯಾವುದೇ ಜೀವಿ ಸಮೂಹಗಳು ಸಹ ನೀರಾವರಿ ಸೌಲಭ್ಯದ ದೊರೆಯುವಲ್ಲಿಯೇ ವಿಕಾಸಹೊಂದಿ ಇಂದಿನ ವ್ಯವಸ್ಥೆಯನ್ನು ತಲುಪಿದೆ ಎಂದರೆ ತಪ್ಪಾಗಲಾರದು.

ಆದಿ ಮಾನವನ ಈ ಎಲ್ಲಾ ಚಟುವಟಿಕೆಗಳು ಕೆರೆ, ನದಿ ಹಾಗೂ ತೊರೆಗಳ ಸಮೀಪದಲ್ಲಿಯೇ ಕೇಂದ್ರಿಕೃತವಾಗಿತ್ತು. ಸರಿಸುಮಾರು ೭೦೦೦ ವರ್ಷಗಳ ಪೂರ್ವದಲ್ಲಿ ಮಾನವನು ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಸ್ಥಳದಲ್ಲಿ ಸ್ಥಿರ ಜೀವನ ನಡೆಸಲು ಪ್ರಾರಂಭಿಸಿದ. ಈ ಕಾಲಘಟ್ಟವನ್ನು ಪ್ರಾಕ್ತನತಜ್ಞರು ನವಶಿಲಾಯುಗದ ಕ್ರಾಂತಿ ಎಂದು ಕರೆದಿದ್ದಾರೆ. ಇದು ಮಾನವನ ಜೀವನದ ಮೇಲೆ ಅತ್ಯಂತ ಪರಿಣಾಮ ಬೀರಿತು. ಅಂದರೆ ೧.ಮಾನವನು ಒಂದೆಡೆಯಲ್ಲಿ ನಿರಂತರವಾಗಿ ವಾಸಿಸಲು ಪ್ರಾರಂಭಿಸಿದ್ದು. ೨. ತನ್ನ ಆಯುಧಗಳಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಿಕೊಂಡಿದ್ದು. ೩. ಒಂದು ಕಡೆ ನೆಲೆ ನಿಂತು ಕೃಷಿ ಜೀವನವನ್ನು ಪ್ರಾರಂಭಿಸಿದ್ದು.[೨] ಈ ಬೆಳವಣಿಗೆಗಳು ಮಾನವನ ವಿಕಾಸದ ಹಂತಗಳಲ್ಲಿ ಅತ್ಯಂತ ಪ್ರಗತಿದಾಯಕವಾದ ಕಾಲವಾಗಿದೆ. ಅವನ ಆಹಾರಪದ್ಧತಿ, ಆಲೋಚನೆಗಳು ಮುಂತಾದ ವಿಷಯಗಳ ಮೇಲೆ ಪರಿಜ್ಞಾನವನ್ನು ಹೊಂದಿದ್ದ ಕಾಲ ಹಾಗೂ ಆದಿಮಾನವನಿಂದ ನಾಗರಿಕತೆಯೆಡೆಗೆ ಸಾಗುವ ಹಂತವಾಗಿ ಕಂಡುಬಂದಿದೆ. ನೂತನ ಶಿಲಾಯುಗದ ಮಾನವನು ಮಳೆಯ ನೀರಿನ ಉಪಯೋಗವನ್ನು ಮೊದಲಿಗೆ ಅರಿತನು. ಭೂಮಿಯ ಮೇಲೆ ಪ್ರಾಣಿಗಳ ತುಳಿತಕ್ಕೆ ಗುರಿಯಾದ ತಗ್ಗುಗಳಲ್ಲಿ ನೀರು ನಿಲ್ಲುವುದನ್ನು ಕಂಡ ಮಾನವನು, ಮಳೆ ಇಲ್ಲದ ಸಮಯದಲ್ಲಿ ಆ ನೀರನ್ನು ಉಪಯೋಗಿಸತೊಡಗಿದ. ಮಾನವನ ನಾಗರಿಕತೆಯು ನೀರಿನಿಂದಲೇ

ಆರಂಭಗೊಂಡಿತು ಎಂದರೆ ತಪ್ಪಾಗಲಾರದು. ನೀರಾವರಿ ಮೊದಲು ಆಗಿ ನಂತರ ನಾಗರಿಕತೆ ಆರಂಭವಾಯಿತು ಎಂದರೆ ಅತಿಶಯೋಕ್ತಿಯಾಗಲಾರದು. ಹೀಗೆ ತಗ್ಗು ಪ್ರದೇಶಗಳಲ್ಲಿ ನಿಂತ ನೀರಿನಿಂದ ವ್ಯವಸಾಯ ಹಾಗೂ ತರಕಾರಿಗಳನ್ನು ಬೆಳೆಯಲು ಮಾನವ ಯೋಚಿಸಿದ. ನೀರು ನಿಂತ ಪ್ರದೇಶಗಳಲ್ಲಿ ಸಮೃದ್ಧಿಯಾಗಿ ಬೆಳೆದ ಹುಲ್ಲಿನಿಂದ ಈ ಅಂಶವನ್ನು ಅರಿತನು. ಈ ವಿಧವಾಗಿ ನೂತನ ಶಿಲಾಯುಗದ ಮಾನವ, ವ್ಯವಸಾಯಕ್ಕೆ ನೀರಾವರಿ ವಿಧಾನವನ್ನು ಅಳವಡಿಸಿಕೊಂಡದ್ದು ಒಂದು ಮಹಾ ಆವಿಷ್ಕಾರವೆಂದೇ ಭಾವಿಸಬಹುದು. ಈ ವಿಧಾನದಿಂದ ಆಹಾರ ಉತ್ಪಾದನೆ ಆರಂಭವಾಯಿತು.[೩] ಮಳೆಯ ನೀರು ಸಂಗ್ರಹವಾಗುತ್ತಿದ್ದ ತಗ್ಗಾದ ಪ್ರದೇಶದಲ್ಲಿ ಸಣ್ಣ ಕಟ್ಟೆಗಳನ್ನು ನಿರ್ಮಿಸಿ, ಅದರ ಸಮೀಪದಲ್ಲಿಯೇ ವ್ಯವಸಾಯವನ್ನು ಪ್ರಾರಂಭಿಸಿದ. ಇದು ನಿಸರ್ಗವು ಮಾನವನಿಗೆ ಕಲಿಸಿದ ಮೊದಲ ಪಾಠ. ಆದಿಶಿಲಾಯುಗ ಮತ್ತು ನವಶಿಲಾಯುಗಗಳ ಕಾಲಘಟ್ಟಗಳಲ್ಲಿ ಜನಸಂತತಿಯು ಕ್ರಮೇಣವಾಗಿ ಹೆಚ್ಚಾಳಗೊಳ್ಳುತ್ತಿದ್ದ ಪರಿಣಾಮವಾಗಿ ಹೆಚ್ಚಿನ ಆಹಾರ ಉತ್ಪಾದಿಸಬೇಕಾಯಿತು. ಇದರಿಂದಾಗಿ ಹೆಚ್ಚುವರಿ ಪ್ರದೇಶಗಳನ್ನು ವ್ಯವಸಾಯಕ್ಕೆ ಒಳಪಡಿಸಿ, ಕೃತಕ ಸಂಗ್ರಹಕಗಳಾದ ಕೆರೆಗಳಿಂದ ನೀರನ್ನು ಪೂರೈಸಿಕೊಳ್ಳುತ್ತಿದ್ದರು. ಪ್ರಸ್ತುತ ದೊರಕಿರುವ ಪ್ರಾಕ್ತಾನ ಆಧಾರಗಳಿಂದ ಕೆರೆ ನೀರಾವರಿ ಪದ್ಧತಿಯು ಈಜಿಪ್ಟ್ ದೇಶದಲ್ಲಿ ಮೊದಲ ಬಾರಿಗೆ ಬಳಕೆಗೆ ತಂದರು ಎಂದು ತಿಳಿದುಬಂದಿದೆ. ಭಾರತದಲ್ಲಿಯೂ ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿಕ ಜೀವನವನ್ನು ಸುಮಾರು ಆರು ಸಾವಿರ ವರ್ಷಗಳ ಹಿಂದೆ ಪ್ರಾರಂಭವಾಯಿತೆಂದು ತಿಳಿದುಬಂದಿದೆ. ಸಿಂಧೂಕೊಳ್ಳದ ಸಂಸ್ಕೃತಿಯ ಜನರು ಉತ್ತಮ ಮಟ್ಟದ ನೀರಾವರಿ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರು. ರಾಜಸ್ತಾನದ ಗಂಗಾನಗರ್ ಜಿಲ್ಲೆಯ ಕಾಲಿಬಂಗಾನ್‌ನಲ್ಲಿ ಉಳುಮೆ ಮಾಡಿರುವ ಜಮೀನು ಉತ್ಖನನದಲ್ಲಿ ದೊರಕಿದೆ. ದಕ್ಷಿಣ ಭಾರತದಲ್ಲಿ, ಮುಖ್ಯವಾಗಿ ತಮಿಳುನಾಡಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಾಸಿಸುತ್ತಿದ್ದು, ಅವರ ವಾಸಸ್ಥಳಗಳ ಸಮೀಪವಿರುವ ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗಳಾಗುತ್ತಿದ್ದವು. ಆ ನೀರನ್ನು ಕೃಷಿ ಮಾಡಲು ಉಪಯೋಗಿಸುತ್ತಿದ್ದರೆಂದು ಅಭಿಪ್ರಾಯ ಪಡಲಾಗಿದೆ. ಆದ್ದರಿಂದ ದಕ್ಷಿಣ ಭಾರತದಲ್ಲಿ ಕೆರೆ ನೀರಾವರಿ ಪದ್ಧತಿಯನ್ನು ಪೂರ್ಣ ಪ್ರಮಾಣದಲ್ಲಿ ಬೃಹತ್ ಶಿಲಾಯುಗದ ಜನರು ಪ್ರಾರಂಭಿಸಿದರೆಂದು ಹೇಳಬಹುದು. ದಕ್ಷಿಣ ಭಾರತದ ಹಲವಾರು ನೆಲೆಗಳಲ್ಲಿ ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರೆಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಆದಿ ಇತಿಹಾಸ ಕಾಲದ ನೆಲೆಗಳಾದ ಶೃಂಗವೇರ್‌ಪುರ್, ಬೆಸನಗರ, ಕುಮ್ರಹಾರ, ಉಜ್ಜಯಿನಿ, ಮಥುರ ಮುಂತಾದ ಸ್ಥಳಗಳಲ್ಲಿ ವ್ಯವಸಾಯಕ್ಕೆ ನೀರನ್ನು ಸಂಗ್ರಹಿಸಿ ಬಳಸಿಕೊಳ್ಳುತ್ತಿದ್ದರು ಎಂದು ತಿಳಿದುಬಂದಿದೆ.[೪]

ಮಹಾಭಾರತದ ಅನುಶಾಸನಿಕ ಪರ್ವತವು ಮಹಾರಾಜನಾದಂತಹವನು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವು ಒಂದು ಎಂದು ತಿಳಿಸುತ್ತದೆ. ಇದರಲ್ಲಿ

ನಾರದನು, ಧರ್ಮರಾಜನಿಗೆ ಎಚ್ಚರಿಕೆಯನ್ನು ನೀಡುತ್ತಾ ಮಳೆಯನ್ನೇ ನಂಬಿಕೊಂಡು ಬೇಸಾಯಕ್ಕೆ ತೊಡಗಬಾರದೆಂತಲೂ ಹಾಗೂ ಕೆರೆ ಮತ್ತು ಸರೋವರಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗಬೇಕು ಎನ್ನುತ್ತಾನೆ.[೫] ಇದರಿಂದ ಪ್ರಾಚೀನ ಭಾರತದಲ್ಲಿ ಹವಾಮಾನವು ಒಂದೇ ರೀತಿಯಾಗಿರದೆ ವಿಭಿನ್ನವಾಗಿತ್ತು ಎಂದು ತಿಳಿದುಬರುತ್ತದೆ. ಇದರಿಂದ ಬೇಸಾಯವನ್ನು ಮಾಡುವುದಕ್ಕೆ ರೈತರಿಗೆ ಅಥವಾ ಸಾರ್ವಜನಿಕರಿಗೆ ರಾಜರುಗಳು, ಸಂಪತನ್ನು ಉಳ್ಳವರು ಕೆರೆ–ಕಟ್ಟೆಗಳನ್ನು ಕಟ್ಟಿಸುತ್ತಿದ್ದರು. ಇದರಿಂದ ನಮಗೆ ತಿಳಿದುಬರುವುದೇನೆಂದರೆ ಪ್ರಾಚೀನ ಕಾಲದಲ್ಲಿಯೇ ಕೆರೆಗಳ ನಿರ್ಮಾಣ ಮಾಡುತ್ತಿದ್ದರೆಂದು ದಾಖಲೆಗಳಿಂದ ದೃಢಪಡುತ್ತದೆ.

ಮೌರ್ಯರು ಕರ್ನಾಟಕದ ಉತ್ತರ ಮತ್ತು ಮಧ್ಯಭಾಗಗಳನ್ನು ಆಳಿದರು. ಆ ಪ್ರದೇಶದಲ್ಲಿ ಅವರ ಉತ್ತಾರಾಧಿಕಾರಿಗಳಾದ ಶಾತವಾಹನರು ಮೌರ್ಯರಿಂದಲೇ ಕೆರೆ ಕಾಲುವೆ ನಿರ್ಮಾಣದ ಕಲೆಯನ್ನು ಬಲ್ಲವರಾಗಿದ್ದಾರೆ.[೬] ಇವರ ಉತ್ತರಾಧಿಕಾರಿಯಾದ ಕದಂಬರ ಕಾಲದಲ್ಲಿ ಕೆರೆಗಳನ್ನು ತಟಾಕಗಳೆಂದು ಕರೆಯುತ್ತಿದ್ದರು. ವೈಜಯಂತಿಪುರ, ತಾಳಗುಂದ (ಸ್ಥಾನ ಕುಂದೂರು), ಹಲಸಿ, ಚಂದ್ರವಳ್ಳಿ, ಚಂದಾವರ, ಗೋವಕಪುರ, ನೂರಿಲಿ ಮೊದಲಾದ ಕಡೆ ದೊಡ್ಡ ಕೆರೆಗಳನ್ನು ನಿರ್ಮಿಸಿದರು. ಚಂದ್ರವಳ್ಳಿಯ ಶಾಸನದಲ್ಲಿ ಅಲ್ಲಿನ ತಟಾಕವನ್ನು ದುರಸ್ತಿಪಡಿಸಿದ ಉಲ್ಲೇಖವಿದೆ. ತುಂಗ, ಭದ್ರ, ವರದ, ಕಾಳಿ, ಗಂಗಾವಳಿ ಮೊದಲಾದ ನದಿಗಳಿಗೆ ಸೂಕ್ತವಾದ ಸ್ಥಳಗಳಲ್ಲಿ ಒಡ್ಡುಗಳನ್ನು ನಿರ್ಮಿಸಿ ಕೃಷಿಗೆ ನೀರಾವರಿ ಸೌಲಭ್ಯ ಒದಗಿಸಲಾಯಿತು. ಆ ಒಡ್ಡುಗಳಿಂದ ಕಾಲುವೆಗಳನ್ನು ನಿರ್ಮಿಸಿ ಕೆರೆಗಳಿಗೆ ನೀರನ್ನು ಹರಿಸಿಕೊಳ್ಳಲಾಗುತ್ತಿದ್ದಿತು. ಕ್ರಿ.ಶ. ೧೦೫೨ರ ನೂರಿಲಿ ಶಾಸನದ ಪ್ರಕಾರ ಈ ನೀರಾವರಿ ಸೌಲಭ್ಯಗಳಿಗಾಗಿ ಕಾಲುವೆಗಳು ಮತ್ತು ಕೆರೆಗಳನ್ನು ದುರಸ್ತಿಯಲ್ಲಿಟ್ಟುಕೊಳ್ಳಲು ಮನೆ ಕಂದಾಯದಿಂದ ಬಂದ ವರಮಾನವನ್ನು ಬಳಸಿಕೊಳ್ಳುತ್ತಿದ್ದರೆಂದು ಕಂಡುಬಂದಿದೆ.[೭]

ಚೋಳರು ಸ್ಥಳೀಯ ಆಡಳಿತಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಅಧಿಕಾರವನ್ನು ವಿಕೇಂದ್ರಿಕರಿಸಿದ್ದರು. ಸಭೆ, ಮಹಾಸಭೆ ಎಂಬ ಸಮಿತಿಗಳನ್ನು ಅಥವಾ ವಾರಿಯಂಗಳನ್ನು ಗ್ರಾಮಗಳನ್ನು ರಚಿಸುತ್ತಿದ್ದರು. ಆ ಸಮಿತಿಯವರು ಉಪಸಮಿತಿಯನ್ನು ರಚಿಸಿ ಎಲ್ಲಾ ಕಾರ್ಯಭಾರಗಳನ್ನು ನಿರ್ವಹಿಸುತ್ತಿದ್ದರು. ಅಂತಹ ಹಲವು ಉಪಸಮಿತಿಗಳಲ್ಲಿ 'ಏರಿವಾರಿಯಂ' ಒಂದಾಗಿದೆ. ತಮಿಳಿನಲ್ಲಿ 'ಏರಿ' ಎಂದರೆ ಕೆರೆ ಎಂದು ಅರ್ಥ, ಈ ಸಲುಪಸಮಿತಿಯು ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದರೊಂದಿಗೆ ಅವುಗಳಿಗೆ ಸಂಬಂಧಿಸಿದ ತೆರಿಗೆಗಳನ್ನು ಸಹ ಸಂಗ್ರಹಿಸುತ್ತಿದ್ದರು ಎಂದು ಶಾಸನಗಳಿಂದ ತಿಳಿದು ಬಂದಿದೆ. ತಮಿಳು ನಾಡಿನ ಚೆಂಗಲ್‌ಪೇಟೆ ಜಿಲ್ಲೆಯಲ್ಲಿರುವ ಉತ್ತರ ಮೇರೂರು ಗ್ರಾಮದ ಸಮೀಪದಲ್ಲಿರುವ ವೈರಮೇಘ ತಟಾಕವು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ. ಈ ಕೆರೆಯು ಪಲ್ಲವರ ಕಾಲದಲ್ಲಿಯೇ ಕಟ್ಟಾಲಾಗಿದ್ದು, ಈ ಕೆರೆಯ ಉಸ್ತುವಾರಿಗೆ 'ಏರಿವಾರಿಯಂ' ಎಂಬ ಸಮಿತಿಯನ್ನು ರಚಿಸಲಾಗುತ್ತೆಂದು ಉತ್ತರ ಮೇರೂರಿನ ಚೋಳರ ಶಾಸನ ಹೇಳುತ್ತದೆ.[೮]

ಕೆರೆಗಳನ್ನು ಕಟ್ಟಿಸುವುದು ಪ್ರಜಾಹಿತಾತ್ಮಕ ಕಾರ್ಯವೆಂದು ಪರಿಗಣಿಸಿ ಈ ಕಾರ್ಯವನ್ನು ಮಾಡಿದವನಿಗೆ ಇಹದಲ್ಲಿ ಮತ್ತು ಪರಲೋಕದಲ್ಲಿ ಸದ್ಗತಿಯು ದೊರೆಯುವುದೆಂದು ಪ್ರಾಚೀನ ಭಾರತದ ಜನರಲ್ಲಿ ಇದ್ದ ನಂಬಿಕೆಯೇ ಮತ್ತೊಂದು ಕಾರಣವಾಗಿದೆ. ಕೆರೆ ಕಟ್ಟುವುದು ಹಲವು ಪುಣ್ಯ ಕೆಲಸಗಳಲ್ಲಿ ಒಂದು ಎಂದು ಅಂದಿನ ಜನಸಾಮಾನ್ಯರ ನಂಬಿಕೆಯಾಗಿತ್ತು. ಇದರಿಂದ ಬಾವಿಯನ್ನು ಕೊಳಗಳನ್ನು ಬಳಸುವ ಮುನ್ನ ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅಧಿದೇವತೆಯಾದ ವರುಣನನ್ನು ಮತ್ತು ಇತರ ದೇವತೆಗಳನ್ನು ಸ್ತುತಿಸಿದ ನಂತರದಲ್ಲಿಯೇ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು ಎಂದು ಗ್ರಂಥವು ತಿಳಿಸುತ್ತದೆ.[೯] ಇದಕ್ಕೆ ಅನುಗುಣವಾಗಿ ಕರ್ನಾಟಕದ ಹಲವು ಅರಸರುಗಳು ಕೆರೆ-ಕಟ್ಟೆಗಳನ್ನು ನಿರ್ಮಿಸುವುದಕ್ಕೆ ಮತ್ತು ರಕ್ಷಣೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವರು. ಇದಲ್ಲದೆ ವಿಜಯನಗರ ಸಾಮ್ರಾಜ್ಯದ ಎರಡು ಶಾಸನಗಳಿಂದ ಭಾರತದಲ್ಲಿ ಮುಖ್ಯವಾಗಿ ಮಧ್ಯಕಾಲೀನ ಭಾರತದಲ್ಲಿ ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿತ್ತೆಂದು ಕಂಡುಬರುತ್ತದೆ.[೧೦]

ಮಳೆಯ ನೀರು ಒಂದೆಡೆ ಸಂಗ್ರಹಿಸಿ ಆ ನೀರನ್ನೇ ನೀರಾವರಿ ಉದ್ದೇಶಕ್ಕೆ ಉಪಯೋಗಿಸುತ್ತಿರುವುದಕ್ಕೆ ಕೆರೆಗಳು ಎಂದು ಕರೆಯುತ್ತೇವೆ. ಇಂತಹ ಕೆರೆಗಳು ರಾಜ್ಯ ಸರಕಾರದ ಒಡೆತನದಲ್ಲಿವೆ. ಅವುಗಳು ಹರಿಯಾಣ, ಪಂಜಾಬ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ, ಕರ್ನಾಟಕ ಮತ್ತು ಬಿಹಾರ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತೇವೆ. ಕೆರೆಗಳಿಂದ ೩.೧ ದಶಲಕ್ಷ ಹೆಕ್ಟೇರು ಭೂಮಿ ನೀರಾವರಿ ಸೌಲಭ್ಯವನ್ನು ಪಡೆದಿದ್ದು, ಇದರಲ್ಲಿ ಅಧಿಕವಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಈ ಸೌಲಭ್ಯವನ್ನು ಪಡೆದಿವೆ.[೧೧] ಬ್ರಿಟಿಷರು ೧೭೯೯ರಲ್ಲಿ ಭೌಗೋಳಿಕ ಹಾಗು ಅಂಕಿ ಅಂಶಗಳ ಸಮೀಕ್ಷೆಯನ್ನು ಆರಂಭವಾಗಿ ೧೮೦೦ರಲ್ಲಿ ಮುಗಿಯಿತು. ಅದರ ವಿವರಗಳನ್ನು ಸಂಗ್ರಹಿಸಿದವರು ಕರ್ನಲ್ ಮೆಕಂಜಿ ಈ ಸಮೀಕ್ಷೆಯಿಂದ ೧೪೮೦೩ಕ್ಕೂ ಹೆಚ್ಚು ಕರೆಗಳೂ, ೮೫೬೩ ಕುಂಟೆಗಳೂ ಇದ್ದವೆಂದು ತಿಳಿಸಿದ್ದಾರೆ. ೧೮೪೭ರಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದ ಕರ್ನಲ್ ಗ್ರೀನ್ ೨೦೦೦೦ಕ್ಕೂ ಹೆಚ್ಚು ಕೆರೆಗಳಿದ್ದವು. ಎಂದು ವರದಿಯಲ್ಲಿ ತಿಳಿಸಿದ್ದಾನೆ. ೧೮೫೩-೫೪ರ ವರದಿಯ ಪ್ರಕಾರ ಮೈಸೂರು ಪ್ರಾಂತ್ಯದಲ್ಲಿ ಮುನಿಸಿಪಲ್ ಅಥವಾ ನೀರಾವರಿಗಲ್ಲದ ಹಾಗೂ ನೀರಾವರಿಯ ಕೆರೆಗಳು ೨೬೪೫೦ ಇದ್ದು ಅವುಗಳಲ್ಲಿ ೪೧೦೬ ದೊಡ್ಡ ಕೆರೆಗಳು, ೧೩,೭೩೭ ಸಣ್ಣ ಹಾಗೂ ೮೬೭೯ ನೀರಾವರಿಗೆ ಯೋಗ್ಯವಲ್ಲದ ಕೆರಗಳು, ಅಂದರೆ ಒಂದು ಚದರ ಮೈಲಿಗೆ ಒಂದು ಕೆರೆ ಇದ್ದವು. ಅಲ್ಲದೇ ೨೭೨೯೯ ಚದರ ಮೈಲಿ ಪ್ರದೇಶದ ಮೈಸೂರು ಪ್ರಾಂತ್ಯದಲ್ಲಿ ಸುಮಾರು ಶೇ.೬೦ರಷ್ಟು ಕೆರೆಗಳಿಂದ ಆವೃತ್ತವಾಗಿತ್ತು. ೧೮೭೧ ವರದಿಯಂತೆ ೩೬,೨೬೫ ಕೆರೆಗಳಿದ್ದವು ಎಂದು ಕಂಡುಬಂದಿದೆ.[೧೨]

ಮೆಕೆಂಜಿಯವರ ವರದಿಯಂತೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣವು ೫೦ ದೊಡ್ಡ ಕೆರೆಗಳು, ೬೮೮ ಕಟ್ಟೆಗಳು, ಉತ್ತಮವಲ್ಲದ ಮೂರು ಅಣೆಕಟ್ಟೆಗಳು ಇದ್ದವು. ಪಿರಿಯಾಪಟ್ಟಣ ತಾಲ್ಲೂಕಿನ ಒಂದು ಗ್ರಾಮ ಮತ್ತು ಹೋಬಳಿಯಾಗಿರುವ ಬೆಟ್ಟದಪುರದಲ್ಲಿ ೮೪ ದೊಡ್ಡ ಕರೆಗೆಳು, ೧೬೪ ಕಟ್ಟೆಗಳು, ಮತ್ತು ಯೋಗ್ಯವಲ್ಲದ ನಾಲ್ಕು ಅಣೆಕಟ್ಟುಗಳು ಇದ್ದವೆಂದು ತಿಳಿದುಬಂದಿದೆ.[೧೩] ಇದರಿಂದ ಈ ಪ್ರದೇಶವು ನದಿಯ ನೀರಿಗಿಂತ ಮಳೆಯ ನೀರನ್ನು ಅವಲಂಭಿಸಿದ್ದು ಅಂದಿನ ಜನರು ಕೆರೆ-ಕಟ್ಟೆಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ ಎಂದು ತಿಳಿಯಬಹುದು. ಬೆಟ್ಟಗುಡ್ಡಗಳಿಂದ ಬಂದಂತಹ ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಉಪಯೋಗಿಸಿರುವುದು ಕಂಡುಬಂದಿದೆ.

ವಿಶಾಲವಾಗಿ ವಿಸ್ತರಿಸಿಕೊಳ್ಳುತ್ತಿರುವ ಬೆಟ್ಟದಪುರವು ಇಂದು ಗ್ರಾಮ ಮತ್ತು ಹೋಬಳಿಯಾಗಿದ್ದು ವ್ಯಾಪಾರ ಕೇಂದ್ರವಾಗಿದೆ. ಆಳ್ವಿಕೆಯನ್ನು ಮಾಡಿದ ಅರಸರುಗಳು, ಪೂರ್ವಿಕರು ಹಲವು ಕೆರೆ ಕಟ್ಟೆಗಳನ್ನು ಜನರಿಗೆ ಜಾನುವಾರುಗಳಿಗೆ, ತೋಟಗಳಿಗಾಗಿ ನಿರ್ಮಿಸಿದ್ದರು. ಇವುಗಳನ್ನು ಅಮೂಲ್ಯವಾದ ಆಸ್ತಿಯಂತೆ ಕಾಪಾಡಿಕೊಂಡು ತಮ್ಮ ಉತ್ತರಾಧಿಕಾರಿಗಳಿಗೆ ಬಿಟ್ಟು ಹೋದರು. ಇಂಥ ಜಲಸಂಪನ್ಮೂಲಗಳು ಊರಿನ ಸೌಂದರ್ಯವನ್ನು ಹೆಚ್ಚಿಸಿದವು. ಆದರೆ ಈಗಾಗಲೇ ಬಹುಪಾಲು ಕೆರೆ ಮತ್ತು ಕೊಳಗಳು ಅಥವಾ ಪುಷ್ಕರಣಿಗಳು, ಬಾವಿಗಳು ಹೇಳಲು ಹೆಸರಿಲ್ಲದಂತಾಗಿವೆ. ನಗರದಲ್ಲಿ ಅಂತರ್ಜಲ ಕುಸಿಯುತ್ತಿರುವ ಅಪಾಯವಿದ್ದರೂ ಪಟ್ಟಣದ ಜನತೆ ಎಚ್ಚೆತುಕೊಂಡಿಲ್ಲ. ಕ್ರಿ.ಶ. ಹದಿನಾರು ಮತ್ತು ಹದಿನೇಳನೇ ಶತಮಾನದಲ್ಲಿ ಆಳ್ವಿಕೆಯನ್ನು ಮಾಡಿದ ಚಂಗಾಳ್ವರು ಕೆರೆ, ಕಟ್ಟೆ ಮತ್ತು ಬಾವಿಯನ್ನು ಕಟ್ಟಿಸಿ ಮುಂದಿನ ಪೀಳಿಗೆಗೆ ಬಿಟ್ಟು ಹೋಗಿದ್ದಾರೆ. ಆದರೆ ಇಂದು ಆ ಕೆರೆ, ಪುಷ್ಕರಣಿಗಳು ಅವಸಾನದತ್ತ ಸಾಗುತ್ತಿವೆ.

ಹದಿನಾರನೇ ಶತಮಾನದಲ್ಲಿ ಜೀವಿಸಿದ್ದ ಕವಿಯಾದ ದೇವಪ್ಪನು ತನ್ನ ಕೃತಿಯಾದ ರಾಮವಿಜಯದಲ್ಲಿ ಪಿರಿಯಾಪಟ್ಟಣ ಮತ್ತು ಬೆಟ್ಟದಪುರದ ಗದ್ದೆಪ್ರದೇಶದ ಹೊಲಗಳನ್ನು ನೀರಾವರಿಯನ್ನಾಗಿಸಿರುವ ಪದ್ಧತಿಯನ್ನು ವಿವರಿಸಿರುವನು. ತನ್ನ ಗ್ರಂಥದಲ್ಲಿ ನೀರಾವರಿಯ ಆಕಾರಗಳನ್ನು ಉಲ್ಲೇಖಿಸಿದ್ದಾನೆ. ಅವುಗಳಂದರೆ ಹೊಳೆ, ಕೆರೆ, ಬಾವಿ, ಕೊಳ್ಳ, ನೀರಿನ ಗುಳಿ, ನೀರಿನ ಹೊಂಡ, ಕಾಲುವೆ, ಹೂವಿನ ಕೊಳ ಮತ್ತು ಸರೋವರ.[೧೪] ಈ ಕಾವ್ಯದ ಪ್ರಕಾರ ನೀರು ತುಂಜಿದ ಗದ್ದೆಗಳು, ಗದ್ದೆಯಲ್ಲಿ ಬೆಳೆದು ನಿಂತ ಭತ್ತದ ತೆನೆಗಳು, ತೆನೆಗಳನ್ನು ತಿನ್ನಲು ಬಂದ ಪಕ್ಷಿಗಳನ್ನು ಓಡಿಸಲು ಗದ್ದೆಯೊಳಗೆ ಅಟ್ಟಣೆಗಳನ್ನು ಹಾಕುತ್ತಿದ್ದರು. ಹಾಗೂ ಗೊಲ್ಲರ ಹೆಂಗಸರು ಕವಣೆಯ ಸಹಾಯದಿಂದ ತೆನೆಯನ್ನು ತಿನ್ನಲು ಬಂದ ಪಕ್ಷಿಗಳನ್ನು ಓಡಿಸುತ್ತಿದ್ದರೆಂದು ತಿಳಿಯಲಾಗಿದೆ. ಚಂಗಾಳ್ವರ ದಳವಾಯಿಯಾಗಿದ್ದ ಬೊಮ್ಮರಸ ಹಾಗೂ ಚಂಗಾಳ್ವರ ಆಸ್ಥಾನದಲ್ಲಿ ವಿದ್ವಾಂಸನಾಗಿದ್ದ ದೇವಚಂದ್ರಯ್ಯ ಎಂಬ ಅಣ್ಣ ತಮ್ಮಂದಿರು ಪಿರಿಯಾಪಟ್ಟಣ ವಲಯದ ಕೆರೆ

ನೀರಾವರಿಗೆ ಅಪಾರ ಪ್ರೋತ್ಸಾಹ ನೀಡಿದ್ದರು. ಇದರ ಹಿನ್ನಲೆಯಲ್ಲಿ ಬೆಟ್ಟದಪುರ ಪರಿಸರದಲ್ಲಿ ನೀರಾವರಿಯ ಮೂಲಗಳಿದ್ದವೆಂದು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.[೧೫]

ಕೆರೆಯ ಹೆಸರು	ಕಟ್ಟಿಸಿದವರು	ಸ್ಥಳ	ಕಾಲ	ಆಕರ ಶಾಸನ
೧. ದೇವರ ಕೆರೆ	ಹಿರಿಹತಿಯ ನಾಯಕ ಚಿಕ್ಕಹಲಯನಾಯಕ	ಕೊರ್ಗಲ್ಲು	೧೩೩೯	ಕೊರ್ಗಲ್ಲು ಶಾಸನ ಸಂಖ್ಯೆ ೨೯ (ಎ.ಕ.ಸಂ.೪)
೨. ವೀರಾಂಬುಧಿ	ವೀರದೇವರು	ಸನ್ಯಾಸಿಪುರ	೧೫೬೮	ಸನ್ಯಾಸಿಪುರ ಶಾಸನ ಸಂಖ್ಯೆ ೧೪ (ಎ.ಕ.ಸಂ.೪)
೩. ಸಿಂಗಾರ ತೋಟದ ಕೆರೆ	ಒಡೆಯರು	ಚಿಕ್ಕಪುರ	೧೬ನೇ ಶತಮಾನ	ಬೆಟ್ಟದಪುರ ಶಾಸನ ಸಂಖ್ಯೆ: ೬೦ (ಎ.ಕ.ಸಂ.೪)
೪. ಗಳಗನ ಕೆರೆ		ಗಳಗನಕೆರೆ	೧೬ನೇ ಶತಮಾನ	ಗಳಗನಕೆರೆ ಶಾಸನ ಶಾಸನ ಸಂಖ್ಯೆ: ೧೪ (ಎ.ಕ.ಸಂ.೪)
೫. ವೀರಾಂಬುಧಿ	ಪಿರಿಒಡೆಯ	ಬೆಟ್ಟದಪುರ	೧೫೮೬	ಬೆಟ್ಟದಪುರ ಶಾಸನ ಸಂಖ್ಯೆ: ೭೨ (ಎ.ಕ.ಸಂ.೪)

ಬೆಟ್ಟದಪುರದ ಸಂಸ್ಥಾಪಕನಾದ ವಿಕ್ರಮರಾಯನು ಹತ್ತನೇ ಶತಮಾನದಲ್ಲಿ ಬೆಟ್ಟದಪುರ ಸುತ್ತಮುತ್ತಲಿನ ಪ್ರದೇಶಗಳಿಂದ ಬಂದು ನೆಲೆಸುವಂತೆ ಜನತೆಗೆ ಕರೆ ನೀಡಿದನು. ಅದಕ್ಕನುಗುಣವಾಗಿ ಜನತೆಯ ಹಿತದೃಷ್ಟಿಯಿಂದ ಕಾಶೀರ ಸಮುದ್ರ, ಮತ್ತು ದ್ವಾರಸಮುದ್ರಗಳೆಂಬ ಕೆರೆಯನ್ನು ನಿರ್ಮಿಸಿದನು.[೧೬] ಹದಿನೇಳನೇ ಶತಮಾನದಲ್ಲಿ ಕೆರೆಯಲ್ಲದೇ ಬೆಟ್ಟದಪುರದಲ್ಲಿದ್ದ ನಂಜಪ್ಪಯ್ಯನು ಒಂದು ಬಾವಿಯನ್ನು ಕಟ್ಟಿಸಿದ.[೧೭] ಇದರಲ್ಲಿ ಪ್ರಸ್ತುತ ಇಪ್ಪತ್ತು ತೆರೆದ ಬಾವಿಗಳು, ಐದು ದೊಡ್ಡ ಕೆರೆಗಳು, ಮತ್ತು ಐವತ್ತು ಸಣ್ಣ ಕೆರೆಗಳು ಬೆಟ್ಟದಪುರ ಪರಿಸರದಲ್ಲಿ ಕಂಡುಬಂದಿವೆ.[೧೮] ಇದಲ್ಲದೆ ಸಿಂಗಾರ ತೋಟದ ದಕ್ಷಿಣಕ್ಕೆ ಆಪುಗೊಂಡನಹಳ್ಳಿ ಕೆರೆಯಿದೆ.[೧೯]

ತೆಪ್ಪದ ಕೊಳ:

ತೆಪ್ಪದ ಕೊಳವು ಬೆಟ್ಟದಪುರದಲ್ಲಿರುವ ಒಂದು ಪ್ರಾಚೀನ ಕೊಳವಾಗಿದ್ದು, ಪೇಟೆ ಬೀದಿಗೆ ಪೂರ್ವಾಭಿಮುಖವಾಗಿದೆ. ಹಿಂದಿನಿಂದಲೂ ದೇವರ ಉತ್ಸವ ಮೂರ್ತಿಯನ್ನು ಇಟ್ಟು ತೆಪ್ಪದಲ್ಲಿ

ಪುರೋಹಿತ ಕಾರ್ಯಗಳನ್ನು ನಡೆಸುತ್ತಿದ್ದರು. ಆದ್ದರಿಂದ ಈ ಕೊಳವನ್ನು ತೆಪ್ಪದ ಕೊಳವೆಂದು ಕರೆಯಲಾಗಿದೆ. ಮೂರು ದಿಕ್ಕಿನಿಂದಲೂ ಎತ್ತರವಾದ ಎರಿ ಇದೆ. ಇದರ ಎರಿಯು ಹತ್ತರಿಂದ ಹದಿನೈದು ಅಡಿ ಎತ್ತರವಾಗಿದೆ. ಇದಕ್ಕೆ ಒಂದು ತೊಬನ್ನು ಕಟ್ಟಲಾಗಿದೆ. ಕೆರೆ ಎರಿಯಿಂದ ಸುಮಾರು ಹತ್ತು ಅಡಿ ದೂರದಲ್ಲಿದೆ. ತೂಬಿನಿಂದ ತೋಟಗಳಿಗೆ ನೀರನ್ನು ಹಾಯಿಸುವರು. ಈ ನೀರನ್ನು ಜಾನುವಾರುಗಳು ಕುಡಿಯುವುದಕ್ಕೆ, ಬಟ್ಟೆಯನ್ನು ತೊಳೆಯಲು ಉಪಯೋಗಿಸುವರು. ಇಂದು ಇಲ್ಲಿಯ ನೀರು ಕಲುಶಿತಗೊಂಡಿದೆ. ತೆಪ್ಪದ ಸಮೀಪದಲ್ಲಿ ಒಂದು ಮಂಟಪ ಇದೆ. ಈ ಮಂಟಪವು ಚೌಕಕಾರವಾಗಿದ್ದು, ವೃತ್ತಕಾರ ಸ್ಥಂಬದ ಮೇಲೆ ನಂದಿಯ ವಿಗ್ರಹವಿತ್ತು. ಆದರೆ ಇಂದು ಆ ಮೂರ್ತಿಯು ಕೆಳಗೆ ಬಿದ್ದಿದೆ. ಈ ಮಂಟಪವನ್ನು ಇಟ್ಟಿಗೆಯಿಂದ ಕಟ್ಟಲಾಗಿದೆ. ಭುವನೇಶ್ವರಿಯಿದ್ದು, ಪುಷ್ಪಾಲಂಕಾರದ ಆಕಾರವನ್ನು ಹೊಂದಿದೆ. ಈ ಮಂಟಪವು ಅವನತಿಯ ಹಾದಿಯಲ್ಲಿದ್ದು, ಸಮೀಪದಲ್ಲಿಯೇ ಒಂದು ಶಿಲೆಯಿಂದ ಕೊರೆಯಲ್ಪಟ್ಟ ಶಾಸನವಿದೆ. ಇದು ಎರಡು ಎಕರೆ ಪ್ರದೇಶವನ್ನು ಒಳಗೊಂಡಿದೆ.

ಕೋಟೆ ಕೊಳ:

ಬೆಟ್ಟದಪುರದಲ್ಲಿರುವ ಮತ್ತೊಂದು ಪ್ರಾಚೀನ ಕೊಳ ಇದಾಗಿದೆ. ಹೊರಕೋಟೆಯ ಸಮೀಪದಲ್ಲಿದೆ. ಪೇಟೆ ಬೀದಿಗೆ ಪೂರ್ವಾಭಿಮುಖವಾಗಿದೆ. ಈ ಕೆರೆಯ ಎರಿಯು ಆರು ರಿಂದ ಎಂಟು ಅಡಿ ಅಗಲವಾಗಿದೆ. ಇದು ೮೦ x ೫೦ ಅಡಿ ಉದ್ದ, ಅಗಲವಿರುವುದಾಗಿದೆ. ಹದಿನೈದು ಅಡಿ ಎತ್ತರವಿದೆ. ಇಲ್ಲಿಯ ಕೊಳದ ಸುತ್ತಲು ಅಡ್ಡಗೋಡೆಯನ್ನು ಗಟ್ಟಿಯಾದ ಕಲ್ಲುಗಳಿಂದ ಮತ್ತು ಮಣ್ಣಿನಿಂದ ಕಟ್ಟಿರುವರು. ಇಲ್ಲಿಯ ನೀರು ಉಪಯೋಗಿಸಲು ಯೋಗ್ಯಕರವಾಗಿಲ್ಲ. ಇದಕ್ಕೆ ತೊಬನ್ನು ಜೋಡಿಸಿರುವುದಿಲ್ಲ. ಇಲ್ಲಿಯ ನೀರು ಅಂತರ್ಜಲವಾಗಿದೆ. ಈಗ ಕೊಳದ ತುಂಬಾ ಹೂಳು ತುಂಬಿ ಗಿಡ–ಪೊದೆಗಳು ಬೆಳೆದು ಇದರ ದಂಡೆ ಆಕಾರವನ್ನು ಕಳೆದುಕೊಂಡಿದೆ. ಕೆರೆಯ ಸುತ್ತಲೂ ಮನೆ ಮತ್ತು ನಿವೇಶನಗಳು ಒತ್ತುವರಿಯಾಗಿದೆ.

ನಂದಿಮಂಟಪದ ಕೊಳ:

ಈ ಕೊಳವು ಗ್ರಾಮದ ರಥಬೀದಿಯ ಕೊನೆಯಲ್ಲಿದ್ದು ರಥಬೀದಿಗೆ ಪೂರ್ವಾಭಿಮುಖವಾಗಿರುವುದು. ಕೊಳಕ್ಕೆ ಇಳಿಯಲು ಒಂದು ಕಡೆ ವಿಶಾಲವಾದ ಹೆಬ್ಬಿಗೆಗಳನ್ನು ಒಳಗೊಂಡಿದೆ. ಅಂದರೆ ಪಶ್ಚಿಮ ದಿಕ್ಕಿನಲ್ಲಿದ್ದು ಕೊಳವು ಚೌಕಕಾರವಾಗಿದೆ. ಇದಕ್ಕೆ ನೀರಿನ ಮೂಲ ಭೂಮಿಯ ಅಂತರ್ಜಲ, ಆದರೆ ಈ ಪುಷ್ಕರಣಿ ಅಥವಾ ಕೊಳದ ನೀರನ್ನು ಗ್ರಾಮಸ್ಥರು ಉಪಯೋಗಿಸುತ್ತಿಲ್ಲ. ಕೊಳವು ಲಿಂಗಾಯುತರ ಸ್ಮಶಾನದ ಸಮೀಪದಲ್ಲಿದೆ. ಸ್ಮಶಾನದ ವಿಶಾಲವಾದ ಎರಡು ಎಕರೆ ಪ್ರದೇಶದಷ್ಟು ಭೂಮಿಯನ್ನು ಆವರಿಸಿಕೊಂಡಿದೆ. ಕೊಳದ ಸಮೀಪದಲ್ಲಿಯೇ ಒಂದು ನಂದಿ ಮಂಟಪ, ಮಂಟಪದ ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿದೆ.

ಇದರ ಮೇಲೆ ಗೋಪುರವನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, ಗೋಪುರವು ದ್ರಾವಿಡ ಶೈಲಿಯ ಲಕ್ಷಣಗಳನ್ನು ಹೊಂದಿದೆ. ಒಳಭಾಗದಲ್ಲಿ ನಂದಿಸ್ಥಂಬವಿದ್ದು ಮುರಿದು ಬಿದ್ದಿದೆ. ಈ ನಂದಿಮಂಟಪವು ದಕ್ಷಿಣಾಭಿಮುಖವಾಗಿದೆ. ಕೊಳವು ಸಮತಟ್ಟಾದ ಪ್ರದೇಶದಲ್ಲಿರುವುದು. ಇದು ೪೦ x ೨೦ ಅಡಿ ಉದ್ದ ಅಗಲವಿರುವುದಾಗಿದೆ.

ಕಲ್ಯಾಣಿ ಕೊಳ:

ದೊಡ್ಡ ಬೆಟ್ಟದ ತಳಭಾಗದಲ್ಲಿರುವ ಪಶ್ಚಿಮ ದಿಕ್ಕಿಗೆ ಇರುವುದಾಗಿದೆ. ಭೌಗೋಳಿಕ ಪರಿಸರ ಮತ್ತು ಜಲಾಯನ ಪ್ರದೇಶವನ್ನು ಗಮನಿಸಿ ಬೆಟ್ಟಗಳ, ಒಂದು ಬೃಹತ್ ಪ್ರಮಾಣದ ಕೆರೆ ಮತ್ತು ಎರಿಯನ್ನು ಕಟ್ಟಿರುವುದು ಕಂಡುಬಂದಿದೆ. ಈ ಕೊಳಕ್ಕೆ ಮೂಲ ಮಳೆಗಾಲದಲ್ಲಿ ಬೆಟ್ಟದ ಮೇಲಿನಿಂದ ನೀರು ಹರಿದು ಬಂದು ಸೇರುವುದಾಗಿದೆ. ವೃತ್ತಾಕಾರವಾಗಿದ್ದು ಎತ್ತರವಾಗಿದೆ. ಮತ್ತು ಸುಮಾರು ಎರಡೂವರೆ ಎಕರೆ ಪ್ರದೇಶವನ್ನು ಆವರಿಸಿಕೊಂಡಿದೆ. ಈ ಪ್ರದೇಶವು ಬೆಟ್ಟಗುಡ್ಡಗಳಿಂದ, ಹೆಚ್ಚಾಗಿ ಬಂಡೆಯ ತಳಭಾಗದಲ್ಲಿ ಆವರಿಸಲ್ಪಟ್ಟಿರುವುದು. ಇಲ್ಲಿಯ ನೀರು ಹೊರಹೋಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನೀರು ಕೊಳಚೆಯಾಗಿರುವುದು ಇದರ ಸಮೀಪದಲ್ಲಿಯೇ ಒಂದು ನಂದಿ ಸ್ಥಂಬವಿದೆ.

ಸೂಳೆ ಕೊಳ:

ಸೂಳೆ ಕೊಳವು ದೊಡ್ಡದಾಗಿದ್ದು ರಾಯಗೋಪುರದ ಸಮೀಪದಲ್ಲಿದೆ. ಬೆಟ್ಟಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿದ್ದು ಇದು ಒಂದರಿಂದ ಎರಡೂವರೆ ಅಡಿ ಅಗಲ ಉದ್ದದ ಕಲ್ಲಿನಿಂದ ಗೋಡೆಯನ್ನು ಕಟ್ಟಿರುವರು. ಸುಮಾರು ಇಪ್ಪತ್ತು ಅಡಿ ಆಳವಿರುವುದ್ದು ೪೦ x ೨೫ ಅಡಿ ಉದ್ದ ಅಗಲವನ್ನು ಹೊಂದಿದೆ. ಈ ಕೊಳಕ್ಕೆ ಇಳಿಯಲು ಉತ್ತಮ ಕಲ್ಲಿನಿಂದ ಮಾಡಲ್ಪಟ್ಟ ಹೆಬ್ಬಿಗೆ ಇರುವುದು. ಕೊಳಕ್ಕೆ ಅಂತರ್ಜಲ ನೀರಿನ ವ್ಯವಸ್ಥೆ ಇರುವುದಿಲ್ಲ. ಕೊಳವು ಯಾವಾಗಲೂ ಬರಿದಾಗಿರುತ್ತದೆ. ಒಂದು ಐತಿಹ್ಯದ ಪ್ರಕಾರ ಮಹಿಳೆಗೆ ಮಕ್ಕಳ ಸಂತತಿಯಾಗಿರಲಿಲ್ಲ. ಆ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ದೇವರಲ್ಲಿ ಹರಕೆಯನ್ನು ಕಟ್ಟಿಕೊ ಎಂದು ತಿಳಸಿದನು. ಅದರಂತೆ ಆಕೆ ದೇವರಿಗೆ ಹರಕೆಯನ್ನು ಹೊತ್ತು ಈ ಕೊಳವನ್ನು ನಿರ್ಮಿಸಿದಳು. ಆದರೂ ಆ ಮಹಿಳೆಗೆ ಮಕ್ಕಳು ಆಗಲೇ ಇಲ್ಲ ಎಂಬುದು ಇಲ್ಲಿನ ಜನರ ನಂಬಿಕೆ. ಆದ್ದರಿಂದ ಈ ಕೊಳವನ್ನು ಬಂಜೆಕೊಳವೆಂದು ಕರೆಯುವರು.

ನಾಗರ ಕೊಳ:

ಹತ್ತು ಅಡಿ ಆಳವಿರುವ ನಾಗರಕೊಳವು ಪ್ರಾಚೀನ ಕೊಳಗಳಲ್ಲಿ ಒಂದು. ಇದು ಮಲ್ಲಿಕಾರ್ಜುನ ಬೆಟ್ಟದ ಮಧ್ಯ ತಪ್ಪಲಿನಲ್ಲಿ ಕಂಡುಬಂದಿದೆ. ಬೆಟ್ಟಹತ್ತುವ ಹೆಬ್ಬಿಗೆಯ ಎಡಭಾಗದಲ್ಲಿದ್ದು ಮತ್ತು ಸಂಕ್ರಾಂತಿ ಮಂಟಪದಿಂದ ಎರಡನೂರು ಮೀಟರ ದೂರದಲ್ಲಿದೆ. ಈ ಕೊಳವು ವೃತ್ತ

ಮತ್ತು ಚೌಕಕಾರವಾಗಿದ್ದು ದಕ್ಷಿಣ ದಿಕ್ಕಿನಲ್ಲಿ ಹೆಬ್ಬಿಗೆಯನ್ನು ಹೊಂದಿದೆ. ಕೊಳವನ್ನು ಉತ್ತರಭಾಗದಲ್ಲಿ ಹೆಬ್ಬಿಗೆಯ ಆಕಾರದಲ್ಲಿ ಕಟ್ಟಲಾಗಿದೆ. ಕೊಳವನ್ನು ಕಟ್ಟಲು ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಈ ಕೊಳದಲ್ಲಿ ನಾಗದೇವತೆಯ ಶಿಲ್ಪ ಮೂರ್ತಿ ಇರುವುದರಿಂದ ಈ ಕೊಳವನ್ನು ನಾಗರಕೊಳವೆಂದು ಸ್ಥಳೀಯ ಜನತೆ ಕರೆಯುವರು. ಪ್ರಸ್ತುತ ಇದರಲ್ಲಿ ನೀರು ಇಲ್ಲದಾಗಿದೆ. ಕೊಳದ ತುಂಬಾ ಹೂಳು ತುಂಬಿ ಗಿಡ ಪೊದೆಗಳು ಬೆಳೆದಿರುವುದಾಗಿವೆ. ಇದರಿಂದ ಈ ಕೊಳವು ಗುರುತಿಸಲಾಗದಷ್ಟು ಆಕಾರವನ್ನು ಕಳೆದುಕೊಳ್ಳುತ್ತಲ್ಲಿದೆ.

ನಾರದ ತೀರ್ಥ:

ನಾರದ ತೀರ್ಥವು ನಡವನಿಗನ ಬಂಡೆಯ ಸಮೀಪದಲ್ಲಿದೆ. ಇದೊಂದು ಚಿಕ್ಕ ತೀರ್ಥ ಅಥವಾ ದೊಣೆಯಾಗಿದೆ. ಇದನ್ನು ವ್ಯಾಸತೀರ್ಥವೆಂಥಲೂ ಕರೆಯುವರು. ಸ್ಥಳಪುರಾಣದ ಪ್ರಕಾರ ನಾರದನು ಈ ಸ್ಥಳದಲ್ಲಿ ನೆಲೆಸಿ ವೀಣಾಜ್ಞಾನವನ್ನು ಪಡೆಯಬೇಕೆಂಬ ಬಯಕೆ ಅವನಲ್ಲಿತ್ತು. ಇಲ್ಲಿ ತಪಸ್ಸನ್ನು ಆಚರಿಸಿ ಬೆಟ್ಟದ ಮೇಲಿರುವ ಅನ್ನದಾನಿ ಮಲ್ಲಿಕಾರ್ಜುನ ದೇವನಿಂದ ವೀಣೆಯನ್ನು ವರವಾಗಿ ಪಡೆದನೆಂದು ಹೇಳಲಾಗಿದೆ. ಆ ಕಾರಣದಿಂದಾಗಿ ಈ ದೇವರನ್ನು ವೀಣಾರ್ಪಣೇಶ್ವರನೆಂದು ಕರೆಯಲಾಗಿದೆ. ಇದರ ಬಲಬಧಿಗೆ ತಕ್ಷಕ ತೀರ್ಥವು ಕಂಡುಬರುತ್ತದೆ.

ಬಾಲಗಂಗಾ ತೀರ್ಥ:

ಬೆಟ್ಟದ ಮೇಲ್ಭಾಗದ ಸಮೀಪದಲ್ಲಿರುವುದು. ವೀರಭದ್ರ ದೇವಾಲಯದ ಎಡಭಾಗಕ್ಕಿರುವ ಎರಡು ದೊಡ್ಡ ಬಂಡೆಯ ಸಂಧಿಯಲ್ಲಿದೆ. ಇದು ಅಂತರ್ಜಲದ ಮೂಲವನ್ನು ಹೊಂದಿರುವುದು. ಇದರಿಂದ ಕಾಡಿನಲ್ಲಿರುವ ಪ್ರಾಣಿ–ಪಕ್ಷಿಗಳಿಗೆ ಉಪಯೋಗವಾಗಿದೆ. ಇಲ್ಲಿ ಗಿಡ–ಗಂಟೆಗಳು ಬೆಳೆದು ನಿಂತಿರುವುದು.

ಅಭಿಷೇಕ ಕೊಳ:

ಸಿಡಿಲು ಮಲ್ಲಿಕಾರ್ಜುನ ದೇವಾಲಯದಿಂದ ಎರಡನೂರು ಮೀಟರ್ ದೂರದಲ್ಲಿ ವಾಯುವ್ಯ ದಿಕ್ಕಿಗೆ ಇರುವುದು. ಈ ಕೊಳವು ದೊಡ್ಡ ದೊಣೆಯಕಾರದ ರೀತಿಯಲ್ಲಿದೆ. ಇಲ್ಲಿಯ ನೀರು ಯಾವಾಗಲೂ ಇರುವುದು. ಈ ನೀರಿನ ಬಣ್ಣವು ಹಸಿರಾಗಿದ್ದು ಇದನ್ನೇ ದೇವರ ಅಭಿಷೇಕಕ್ಕೆ ಮತ್ತು ಕುಡಿಯಲ್ಲಿಕ್ಕೆ ಉಪಯೋಗಿಸುವರು. ಆದ್ದರಿಂದ ಇದನ್ನು ಅಭಿಷೇಕ ಕೊಳವೆಂತಲೂ ಹಾಗೂ ಶಚಿತೀರ್ಥವೆಂದು ಸಹ ಕರೆಯುವರು.

ಅಕ್ಕತಂಗಿಯರ ದೊಣೆ:

ದೊಣೆಯು ಉತ್ತರ ದಿಕ್ಕಿನಲ್ಲಿದ್ದು, ಮೂಡಲಗವಿಯ ಸಮೀಪದಲ್ಲಿದೆ. ಇದು ಕಲ್ಲುಬಂಡೆಯ

ಪಕ್ಕದಲ್ಲಿದ್ದು ಇಲ್ಲಿಯ ನೀರು ಕುಡಿಯಲಿಕ್ಕೆ ಯೋಗ್ಯವಾಗಿದೆ. ಇದು ಅಂತರ್ಜಲವನ್ನು ಹೊಂದಿದೆ. ದೋಣಿಯಾಕಾರದಲ್ಲಿದ್ದು ಒಂದು ದೋಣೆಯು ಆಕಾರದಲ್ಲಿ ದೊಡ್ಡದಾಗಿದ್ದು ಇನ್ನೊಂದು ಚಿಕ್ಕದಾಗಿರುವುದಾಗಿದೆ.

ಸಂತೆ ಕೊಳ:

ಬೆಟ್ಟದಪುರ ಗ್ರಾಮದಲ್ಲಿದ್ದು, ಕೃಷ್ಣರಾಜನಗರಕ್ಕೆ ಹೋಗುವ ಮಾರ್ಗದಲ್ಲಿದೆ. ಈ ಕೊಳವು ಕಲ್ಲುಬಂಡೆಯನ್ನು ಒಳಗೊಂಡಂತೆ ವಿಶಾಲವಾಗಿರುವುದು. ಇದಕ್ಕೆ ಅಂತರ್ಜಲ ಮತ್ತು ಮಳೆಯ ನೀರು ಮುಖ್ಯವಾಗಿರುವುದು. ಇಲ್ಲಿಯ ನೀರನ್ನು ಗ್ರಾಮದ ಜನತೆ ಬಟ್ಟೆಯನ್ನು ತೊಳೆಯುವುದಕ್ಕೆ ಜಾನುವಾರುಗಳಿಗೆ ಉಪಯೋಗಿಸುವರು. ಇದರ ಸಮೀಪ ಪ್ರತಿ ಭಾನುವಾರ ಸಂತೆ ನಡೆಯುವುದು.

ತಾವರೆ ಕೆರೆ:

ತಾವರೆಕೆರೆಯು ಬೆಟ್ಟದಪುರ ಗ್ರಾಮದ ಪಶ್ಚಿಮಕ್ಕೆ ಇದ್ದು ಕುಶಾಲನಗರಕ್ಕೆ ಹೋಗುವ ಮಾರ್ಗದಲ್ಲಿದೆ. ಈ ಕೆರೆಯು ನಾಲ್ಕು ಎಕರೆ ಪ್ರದೇಶವನ್ನು ಆವರಿಸಿಕೊಂಡಿದೆ. ಬೆಟ್ಟದಪುರ ಮತ್ತು ಕುಶಾಲನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯೇ ಏರಿಯಾಗಿರುವುದಾಗಿದೆ. ಈ ಕೆರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾವರೆ ಗಿಡಗಳು ಮತ್ತು ಹೂಳು ಇರುವುದು. ಇದಕ್ಕೆ ನೀರಿನ ಮೂಲ ಅಂತರ್ಜಲ ಮತ್ತು ಮಳೆಗಾಲದಲ್ಲಿ ಮಳೆಯ ನೀರು ಹರಿದು ಬಂದು ಸೇರುತ್ತದೆ. ಏರಿಯ ಬಲಗಡೆ ತೆಂಗಿನ, ಬಾಳೆಯ ತೋಟವಿರುವುದು. ಗ್ರಾಮಸ್ಥರು ಈ ನೀರನ್ನು ವ್ಯವಸ್ಯಾಯಕ್ಕೆ, ಜಾನುವಾರುಗಳಿಗೆ, ಹಾಗೂ ಗೃಹೋಪಯೋಗಿ ಕಾರ್ಯಕ್ಕೆ ನೀರನ್ನು ಉಪಯೋಗಿಸುವರು. ಬೆಟ್ಟದಪುರದಲ್ಲಿಯೇ ಅತ್ಯಂತ ದೊಡ್ಡ ಕೆರೆಯಾಗಿದ್ದು ಮೂಲತಃ ಪ್ರಾಚೀನ ಕಾಲದ ಕೆರೆಯಾಗಿದೆ. ಸ್ವಾತಂತ್ರ್ಯ ನಂತರ ಅಥವಾ ಸ್ಥಳೀಯ ಸರ್ಕಾರಗಳು ಇದರ ಪ್ರಗತಿಗೆ ಕಾರಣವಾಗಿವೆ ಎಂದು ಹೇಳಲಾಗಿದೆ.

ಕೆರೆ ಕಟ್ಟುವಲ್ಲಿ ಪ್ರಾಚೀನ ಕಾಲದ ಜನರ ತಂತ್ರಜ್ಞಾನ ಮತ್ತು ಕೌಶಲ್ಯತೆಯನ್ನು ಅಧ್ಯಯನಕ್ಕೆ ಒಳಪಡಿಸುವುದು ಬಹಳ ಮುಖ್ಯ. ಅಂದು ಅವರಿಗೆ ಇದ್ದ ತಂತ್ರಜ್ಞಾನವನ್ನು ಬಳಸಿ ಉತ್ತಮ ರಚನೆಗಳನ್ನು ಮಾಡಿದ್ದಾರೆ. ಅವುಗಳು ಇಂದಿಗೂ ಬಳಕೆಯಾಗುತ್ತಿರುವುದು ಗಮನಾರ್ಹ. ಒಟ್ಟಿನಲ್ಲಿ ಬೆಟ್ಟದಪುರ ಪರಿಸರವನ್ನು ಕೆರೆಗಳ ತವರೂರು ಎಂದು ಕರೆಯಬಹುದು.

ಅಡಿಟಿಪ್ಪಣಿಗಳು

೧. ರಮೇಶ್ ನಾಯಕ, (ಸಂ)., ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಹಂಪಿ, ಪುಟ ೧೨೪.

೨. ಅದೇ

೩. ಕೊಟ್ರಯ್ಯ.ಸಿ.ಟಿ.ಎಂ., ೨೦೦೧, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಹಂಪಿ, ಪುಟ. ೨.

೪. ರಮೇಶ್ ನಾಯಕ, "ಪೂರ್ವೋಕ್ತ", ಪುಟ. ೧೨೫.

೫. ಅದೇ ಪುಟ. ೮.

೬. ನೀಲತ್ತಹಳ್ಳಿ ಕಸ್ತೂರಿ (ಅನು), ೨೦೦೦, ಕರ್ನಾಟಕದಲ್ಲಿ ಕೆರೆ ನೀರಾವರಿ, ಹಂಪಿ, ಪುಟ. ೨೭.

೭. ಫಾಲಕ್ಷ, ೨೦೦೬, ಸಮಗ್ರ ಕರ್ನಾಟಕ ಇತಿಹಾಸಗಳ ಸಂಸ್ಕೃತಿ, ತಿಪಟೂರು, ಪುಟ.೬೧.

೮. ಡಾ. ಸಿ.ಎಸ್.ವಾಸುದೇವನ್, ೨೦೦೧, ಹಂಪಿ ಪರಿಸರದ ಕೆರೆಗಳು, ಹಂಪಿ, ಪುಟ.೧೫.

೯. ಅದೇ ಪುಟ. ೨೭

೧೦. ಅದೇ ಪುಟ ೧.

೧೧. ಡಾ. ಚಿನ್ನಸ್ವಾಮಿ ಸೋಸಲೆ.ಎನ್., ೨೦೦೪, ನಮ್ಮ ಗ್ರಾಮಗಳು ಅಂದು ಇಂದು, ಹಂಪಿ, ಪುಟ ೫೭.

೧೨. ನೀಲತ್ತಹಳ್ಳಿ, 'ಪೂರ್ವೋಕ್ತ', ಪುಟ ೬೮.

೧೩. ಅದೇ 'ಪೂರ್ವೋಕ್ತ', ಪುಟ ೧೯೮.

೧೪. ಡಾ. ರಾಜಶೇಖರ್.ಪಿ.ಕೆ., ೨೦೦೧, ಶಿವಸಂಪದ, ಮೈಸೂರು, ಪುಟ ೪೪೩.

೧೫. ಅದೇ ಪುಟ ೪೪೩.

೧೬. ಎಮ್.ಎ.ಆರ್., ೧೯೨೪, ಪುಟ. ೧೪.

೧೭. ಎಫಿಗ್ರಾಫಿಯಾ ಕರ್ನಾಟಕ, ಪುಟ. ೪.

೧೮. ಸಿಗಾಂಚಾರ್ ನಾಡ ಕಛೇರಿ, ಬೆಟ್ಟದಪುರ.

೧೯. ಎ.ಕ., ಸಂಪುಟ–೪, ಶಾಸನ ಸಂಖ್ಯೆ – ೬೦.

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇತಿಹಾಸ ಕಾಲದಿಂದ ಮಾತ್ರವಲ್ಲದೆ ಇತಿಹಾಸ ಪೂರ್ವಕಾಲದಿಂದಲೂ ಮಾನವ ಸಂಸ್ಕೃತಿಯ ಆಕಾರಗಳನ್ನು ನೀಡುತ್ತ ಬಂದಿದೆ. ಚರಿತ್ರೆಯ ಕಾಲದಿಂದ ಹಲವಾರು ಸಾಮ್ರಾಜ್ಯಗಳು, ಸಾಮಾಂತ ರಾಜಮನೆತನಗಳೂ ಆಳ್ವಿಕೆಯನ್ನು ಮಾಡಿವೆ. ಇದಕ್ಕೆ ಅನುಗುಣವಾಗಿ ಇತಿಹಾಸ ಮತ್ತು ಪುರಾತತ್ವ ಅವಶೇಷಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಾಹಿತಿಯನ್ನು ನೀಡುವಲ್ಲಿ ಸಫಲವಾಗಿವೆ. ಹಿಂದಿನಿಂದಲೂ ಕರ್ನಾಟಕವು ಸರ್ವಧರ್ಮಗಳ ಸಮನ್ವಯ ಸಾಧಿಸಿದ ಭೂಮಿಯಾಗಿದೆ.

ಕನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರು. ಮೈಸೂರು ಜಿಲ್ಲೆಯು ಮೌರ್ಯ ಕಾಲದಿಂದ ಇತಿಹಾಸವನ್ನು ಹೊಂದಿದೆ. ಮೈಸೂರು ಪ್ರಾಂತ್ಯವೂ ಬ್ರಿಟೀಷರ ಕಾಲದಿಂದ ಆಧುನೀಕೋತ್ತರ ಸುಳಿಗೆ ಒಳಗಾಯಿತು. ಇಂಥಹ ಮೈಸೂರು ಪ್ರಾಂತ್ಯಕ್ಕೆ ಸೇರಿದ ಗ್ರಾಮ ಬೆಟ್ಟದಪುರ. ಇಂದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿಗೆ ಸೇರಿದ ಬೆಟ್ಟದಪುರವಾಗಿದೆ. ಕ್ರಿ.ಶ. ಹತ್ತನೇ ಶತಮಾನದಲ್ಲಿ ವಿಕ್ರಮರಾಯನು ವಿಕ್ರಮ ಪಟ್ಟಣವನ್ನು ಸ್ಥಾಪಿಸಿಕೊಂಡು ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನ ಮಗನಾದ ಚಂಗಾಲರಾನ ಕಾಲದಲ್ಲಿ ವಿಸ್ತೃತ ರೂಪವನ್ನು ಹೊಂದಿತು. ಇವರು ಚಂಗಾಳ್ವ ಮನೆತನದವರಾಗಿದ್ದು ಜೈನ ಧರ್ಮದ ಅವಲಂಬಿಗಳಾಗಿದ್ದರು. ಇವರು ಅಂತಿಮ ಆಳ್ವಿಕೆಯ ಕಾಲದವರೆಗೂ ಸಾಮಂತರಾಗಿದ್ದುಕೊಂಡು ಆಳ್ವಿಕೆಯನ್ನು ಮಾಡಿ ಹಲವು ಜನೋಪಕಾರಿ ಕಾರ್ಯಗಳನ್ನು ಮಾಡಿರುವರು.

ಬೆಟ್ಟದಪುರವನ್ನು ಇಂದು ದೇವಾಲಯ ಅವಶೇಷಗಳ ಸಂಕೀರ್ಣವೆಂದು ಕರೆದರೆ ತಪ್ಪಾಗಲಾರದು. ಇಂಥಹ ಐತಿಹಾಸಿಕತೆಯನ್ನು ಹೊಂದಿರುವ ಗ್ರಾಮವನ್ನು ಚರಿತ್ರೆಯ ಪುಟಗಳಲ್ಲಿ ದಾಖಲಿಸುವ ಪ್ರಮುಖ ಉದ್ದೇಶ ಸಂಶೋಧನೆಯ ಗುರಿಯಾಗಿರುವುದಾಗಿದೆ. ಬೆಟ್ಟ ಮತ್ತು ಗ್ರಾಮದ ಸುತ್ತ ದೇವಾಲಯ, ಗುಡಿಗಳು, ಮಂಟಪಗಳು, ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಪುರಾತತ್ವ ಸ್ಮಾರಕಗಳಾಗಿವೆ. ಇಂದಿಗೂ ಇತಿಹಾಸದ ಘತವೈಭವವನ್ನು ಮೆಲಕು ಹಾಕುತ್ತ ನಿಂತ ಪಾಳು ಬಿದ್ದ ಹೆಸರಿಲ್ಲದ ಹಲವು ದೇಗುಲಗಳಿವೆ.

ಬೆಟ್ಟದಪುರ ಪರಿಸರದ ಇತಿಹಾಸ ವೈಭವದ ಸಂಸ್ಕೃತಿಯನ್ನು ತಿಳಿಸುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಪ್ರಮುಖವಾದ ಆಕಾರಗಳಾಗಿವೆ. ಇವುಗಳ ಕಲಾಶೈಲಿಯನ್ನು ಹಾಗೂ

ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಇದಲ್ಲದೆ ಧಾರ್ಮಿಕವಾಗಿ ಮತ್ತು ಸಾಮಾಜಿಕ ಕಾರ್ಯಗಳಿಗೆ ಅಂದಿನ ರಾಜರು ಬಾವಿ, ಕೆರೆ, ತೋಟಗಳನ್ನು ನಿರ್ಮಿಸಿರುವುದನ್ನು ಶಾಸನಗಳ ಮೂಲಕ ಅರಿಯಬಹುದು. ಬೆಟ್ಟದ ಮೇಲಿನ ಭಾಗದಲ್ಲಿ ಕೋಳಗಳು ಮತ್ತು ಗುಹಾದೇವಾಲಯಗಳಿರುವವು. ಗುಹಾದೇವಾಲಯಗಳ ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ಅತ್ಯಂತ ಕಷ್ಟದಾಯಕವಾದರೂ ಪ್ರಸ್ತುತ ಪ್ರಬಂಧದಲ್ಲಿ ಮೊದಲ ಬಾರಿಗೆ ಹಲವು ಪ್ರಮುಖ ಅಂಶಗಳನ್ನು ವಿವರಿಸಲಾಗಿದೆ.

ದೇವಾಲಯಗಳ ವಾಸ್ತುಶಿಲ್ಪ ಇತರೆ ವಾಸ್ತುಶಿಲ್ಪಕ್ಕೆ ಭಿನ್ನವಾದರೂ, ಗಂಗ, ಹೊಯ್ಸಳ ಮತ್ತು ವಿಜಯನಗರ ಶೈಲಿಯ ಮಿಶ್ರಣದಿಂದ ಕೂಡಿರುವುದಾಗಿದೆ. ಇಲ್ಲಿಯ ಬಹುತೇಕ ದೇವಾಲಯಗಳು ದ್ರಾವೀಡ ಶೈಲಿಯ ಲಕ್ಷಣಗಳನ್ನು ಹೊಂದಿವೆ. ದೇವಾಲಯಗಳಿಗಿಂತ ವಸತಿಗಳು ಇಂದು ಉತ್ತಮ ಸ್ಥಿತಿಯಲ್ಲಿವೆ. ಆದರೆ ದೇವಾಲಯ ಮತ್ತು ವಸತಿ ಗರ್ಭಗೃಹಗಳಲ್ಲಿ ಮೂಲ ವಿಗ್ರಹಗಳು ಇರುವುದಿಲ್ಲ. ದೇವರ ಮೂರ್ತಿಶಿಲ್ಪಗಳು ಶಿಲೆ ಮತ್ತು ಕಂಚಿನಿಂದ ಮಾಡಲ್ಪಟ್ಟಿವೆ. ಇಲ್ಲಿಯ ದೇವಾಲಯಗಳು, ಮೂರ್ತಿ ಶಿಲ್ಪಗಳು ಯಾವುದೇ ಇತರೆ ಧರ್ಮದವರ ಹೀನಾಯ ಕೃತ್ಯಕ್ಕೆ ಒಳಗಾಗದೆ ತನ್ನ ಅವನತಿಯ ಹಾದಿಯಲ್ಲಿವೆ ಎಂದರೆ ತಪ್ಪಾಗುವುದಿಲ್ಲ. ವಿಕ್ರಮರಾಯ ಮತ್ತು ಚಂಗಾಲರಾಯನು ರಕ್ಷಣೆಯ ದೃಷ್ಟಿಯಿಂದ ಕೋಟೆಯನ್ನು ಕಟ್ಟಿಸಿದ್ದರು. ಆದರೆ ಇಂದು ಕೋಟೆಯ ಕುರುಹುಗಳನ್ನು ಬಿಟ್ಟರೆ ಯಾವುದೇ ರೀತಿಯ ಪುರಾತತ್ವ ಸ್ಮಾರಕಗಳು ಕಂಡುಬರುವುದಿಲ್ಲ.

ದೇವಾಲಯಗಳು, ಶಾಸನಗಳು, ಕೋಟೆಗಳಂತೆ ಇಲ್ಲಿ ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಕೆರೆ, ಬಾವಿಗಳು ಲಭ್ಯವಾಗಿವೆ. ಇವುಗಳು ವೀರ ಪರಂಪರೆ ಮತ್ತು ಜನಕಲ್ಯಾಣದ ದ್ಯೋತಕಗಳಾಗಿವೆ. ಇದಲ್ಲದೇ ಅಪರೂಪದ ರಣರಂಗದ ಚಿತ್ರವನ್ನು ಅದಕ್ಕೆ ಪೂರಕವಾದ ಸಾಧನ ಸಾಮಗ್ರಿಗಳ ವಿವರಗಳನ್ನು ಒದಗಿಸುತ್ತವೆ. ಬೆಟ್ಟದಪುರ ನಾಟಕ, ಬಯಲಾಟ, ಜಾನಪದ, ಬೀದಿನಾಟಕ, ಸಾಹಿತ್ಯ ಮುಂತಾದವುಗಳಿಗೆ ಪ್ರಮುಖ ಸ್ಥಳವಾಗಿದೆ. ಹಾಗೆಯೇ ಗ್ರಾಮದಲ್ಲಿ ಪುರಾತನ ಕಾಲದ ಪುಷ್ಕರಣಿಗಳನ್ನು ಕಾಣಬಹುದಾಗಿದೆ. ಪ್ರಾಗ್ಯೈತಿಹಾಸಿಕಕ್ಕೆ ಸಂಬಂಧಿಸಿದ ಭೌಗೋಳಿಕ ಲಕ್ಷಣಗಳು ಹಾಗೂ ಬೃಹತ್ ಶಿಲೆಯ ನೆಲೆ ಇರುವುದಾಗಿದೆ. ಆಯಾ ಕಾಲಗಳಲ್ಲಿ ಆಳ್ವಿಕೆ ಮಾಡಿದ ಅರಸರು ದಾನ-ದತ್ತಿಗಳನ್ನು ಕೊಡುವುದರ ಮೂಲಕ ಹಲವು ಗುಡಿ ಮಂಟಪಗಳನ್ನು ನಿರ್ಮಿಸುವುದರ ಮೂಲಕ ಬೆಟ್ಟದಪುರ ಪರಿಸರದ ಸಾಂಸ್ಕೃತಿಕ ವೈಭವವನ್ನು ಹೇಗೆ ಹೆಚ್ಚಿಸಿದರೆಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

ಪ್ರಬಂಧದ ಪ್ರಮುಖ ಸಾರವೆಂದರೆ ಬೆಟ್ಟದಪುರದ ಪ್ರಾಚೀನ ಘತವೈಭವದ ಬದುಕಿನ ಮೇಲೆ ಬೆಳಕು ಚೆಲ್ಲುವುದಾಗಿದೆ. ಪ್ರಸ್ತುತ ಅಧ್ಯಯನದ ಇತಿಮಿತಿಗಳಲ್ಲಿ ಆಕಾರಗಳನ್ನು ಸಂಗ್ರಹಿಸಿ

ವಿಷಯವನ್ನು ವಿಶ್ಲೇಷಿಸಿ, ಸಂಯೋಜಿಸಿಕೊಂಡು, ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನದ ಹಿನ್ನೆಲೆಯಲ್ಲಿ ಈ ದೇವಾಲಯಗಳೊಂದಿಗೆ ಕಂಡುಬರುವ ವಿವಿಧ ಸಾಂಸ್ಕೃತಿಕ ಅಂಶಗಳಾದ ವಿವಿಧ ಜಾತ್ರಾ ವಿಶೇಷತೆ, ಧಾರ್ಮಿಕ ಪಂಥ ಮುಂತಾದ ಹತ್ತು ಹಲವು ವಿಚಾರಗಳನ್ನು ಕ್ಷೇತ್ರಕಾರ್ಯ ಮಾಡಿ ಅಧ್ಯಯನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವಿವರಿಸಲಾಗಿದೆ. ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಪಡೆದ ಬೆಟ್ಟದಪುರ ದೇವಾಲಯ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ.

ಬೆಟ್ಟದಪುರ ಪರಿಸರದಲ್ಲಿರುವ ದೇವಾಲಯಗಳು, ಶಾಸನಗಳು ಮತ್ತು ಸ್ಮಾರಕಗಳನ್ನು ರಕ್ಷಿಸುವ ಹೊಣೆ ಪುರಾತತ್ವ ಇಲಾಖೆ ಮತ್ತು ಗ್ರಾಮಸ್ಥರದ್ದಾಗಿದೆ. ಅಲ್ಲಿ ಪಾಳು ಬಿದ್ದಿರುವ ಸ್ಮಾರಕಗಳನ್ನು ಮತ್ತೆ ಜೀರ್ಣೋದ್ಧಾರ ಮಾಡಿ ಸಾಂಸ್ಕೃತಿಕ ಕಾರ್ಯಗಳಿಗೆ ಮತ್ತೆ ಚಾಲನೆ ನೀಡಬಹುದು. ನಶಿಸುತ್ತಿರುವ ಅವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಉಳಿಸಬಹುದು.

ಸಂಶೋಧನೆ ಎಂಬುದು ನಿಂತ ನೀರಲ್ಲ. ನಿರಂತರವಾಗಿ ಬದಲಾವಣೆಗೊಳ್ಳುವುದಾಗಿದೆ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರವು ಸಾಗರದಷ್ಟು ವಿಸ್ತಾರವಾದುದು. ಇಲ್ಲಿ ಮೊಗದಷ್ಟು ಮುಗಿಯುವುದಿಲ್ಲ. ಎಲ್ಲಾ ದಾಖಲೆಗಳು ಮತ್ತು ಪುರಾತತ್ವ ಆಕಾರಗಳನ್ನು ಒಂದೆಡೆ ಕಲೆಹಾಕಿ ಅಧ್ಯಯನ ಮಾಡಿದ್ದೇವೆಂದು ಹೇಳಿಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಪ್ರತಿ ದಿನವೂ ಹೊಸ ಹೊಸ ಶಾಸನ ಶಿಲ್ಪಗಳು ಬೆಳಕಿಗೆ ಬರುತ್ತಲೇ ಇವೆ. ಇದಕ್ಕೆ ಕಾರಣ ನಿರಂತರವಾಗಿ ಬದಲಾವಣೆಗೊಳಗಾಗುವ ಪ್ರಕೃತಿ, ಭೂಮಿಯಲ್ಲೊ, ಬಾವಿಗಳಲ್ಲೊ, ಹೋತುಹೋಗಿರುವ ಶಾಸನಗಳು ಅನೇಕ ಕಾರಣಗಳಿಂದ ಬೆಳಕು ಕಾಣುತ್ತಲೆ ಇರುತ್ತವೆ.

ಅನುಬಂಧಗಳು

ಅನುಬಂಧಗಳು

ಆಂಗ್ಲಭಾಷೆ ಗ್ರಂಥಗಳು:

1. Suryanath. U. Kamath(Editor)., 1982, Karnataka State Gazetteer, Bangalore. Government of Karnataka Publication.
2. Suryanath. U. Kamath (Editor)., 1983-93, Karnataka State Gazetteer, Decennial Supplement, Bangalore.
3. Hayavadana Rao. C., 1984, Mysore Gazetteer, Delhi, B.R. Publishing Corporation.
4. Mysore Archaeological Annual Reports - Mysore State, Mysore.
5. Suryanath. U. Kamath(Editor)., 1988, Mysore District Gazetteer, Bangalore, Government of Karnataka Publication.
6. B.L. Rice., 2004, Mysore District Gazetteer, Bangalore.

ಕನ್ನಡ ಗ್ರಂಥಗಳು:

೧. ಅಪರ್ಣ. ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಪಾಟೀಲ.ಸಿ.ಎಸ್., ೨೦೦೦, ಕರ್ನಾಟಕದ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಕೃಷ್ಣಮೂರ್ತಿ.ಸಿ.ಎಸ್., ಭಾರತೀಯ ಶಾಸನಶಾಸ್ತ್ರ ಪರಿಚಯ, ಮೈಸೂರು, ಸಿ.ಪಿ.ಕೆ. ಸುರುಚಿ.

೪. ಕನ್ನಡ ನಿಘಂಟು, ೧೯೭೭, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೫. ಡಾ. ಚಿದಾನಂದಮೂರ್ತಿ. ಎಂ., ೧೯೭೯, ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೬. ಗುರುರಾಜ್‌ರಾವ್.ಬಿ.ಕೆ., ೧೯೭೦, ಕರ್ನಾಟಕ ಶಿಲಾಯುಗ ಸಂಸ್ಕೃತಿಗಳು, ಮೈಸೂರು.

೭. ಸುಂದರ.ಅ., ೧೯೭೨, ಪ್ರಾಚ್ಯವಸ್ತು ಸಂಶೋಧನೆ, ಧಾರವಾಡ.

೮. ಶ್ರೀಕಂಠಶಾಸ್ತ್ರೀ.ಎಸ್.,೧೯೬೦, ಪುರಾತತ್ವ ಶೋಧನೆ, ಮೈಸೂರು.

೯. ಡಾ. ದೇವರಕೊಂಡಾರೆಡ್ಡಿ, ೧೯೯೪, ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೧೦. ಡಾ. ಕೃಷ್ಣ.ಎಂ.ಹೆಚ್., ೧೯೫೩, ಕರ್ನಾಟಕದ ಪೂರ್ವ ಚರಿತ್ರೆ, ಧಾರವಾಡ, ಕನ್ನಡ ಸಂಶೋಧನೆ ಸಂಸ್ಥೆ.

೧೧. ಡಾ. ಮಹದೇವ. ಸಿ., ೨೦೦೧, ಕರ್ನಾಟಕ ಪುರಾತತ್ವ ಶೋಧ, ಶ್ರೀರಂಗಪಟ್ಟಣ, ಶ್ರೀಲಕ್ಷ್ಮೀ ಪ್ರಕಾಶನ.

೧೨. ಕನ್ನಡ ವಿಷಯ ವಿಶ್ವಕೋಶ, ೧೯೭೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರ.

೧೩. ಡಾ.ಕೃಷ್ಣರಾವ್.ಎಂ.ವಿ., ಕೇಶವ್ ಭಟ್.ಎಂ., ೧೯೭೦, ಕರ್ನಾಟಕ ಇತಿಹಾಸ ಸಂದರ್ಶನ, ಬೆಂಗಳೂರು, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ.

೧೪. ಪ್ರೊ. ಲಕ್ಷ್ಮಣ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಡಾ. ರಾಜಶೇಖರ್.ಪಿ.ಕೆ.(ಸಂ)., ೨೦೦೧, ಶಿವಸಂಪದ, ಮೈಸೂರು, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್.

೧೬. ಡಾ. ಗೋಪಾಲರಾವ್.ಹೆಚ್.ಎಸ್., ೨೦೦೦, ಚಂಗಾಳ್ವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್, ೨೦೦೧, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಡಾ. ಜ್ಞಾನಾನಂದ ಜಿ., ೨೦೦೨, ಶಿಲ್ಪಾದರ್ಶನ ಸಂಪುಟ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ರಮೇಶ ನಾಯಕ (ಸಂ)., ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳು ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಕೃಷ್ಣಯ್ಯ.ಡಿ.ಎನ್., ೧೯೬೫, ಕೊಡಗಿನ ಇತಿಹಾಸ, ಮೈಸೂರು, ಪ್ರಸಾರಾಂಗ, ಮಾನಸಗಂಗೋತ್ರಿ.

೨೧. ಡಾ. ಮಹದೇವ.ಸಿ. (ಸಂ)., ೨೦೦೬, ಹಂಪಿ ಅಂದು-ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಡಾ. ವಾಸುದೇವನ್.ಸಿ.ಎಸ್., ೨೦೦೧, ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ದೇಜಗೌ, ೧೯೯೦, ಸ್ಥಳನಾಮ ವ್ಯಾಸಂಗ, ಮೈಸೂರು ಸಹ್ಯಾದ್ರಿ ಪ್ರಕಾಶನ.

೨೪. ಮೂರ್ತಿ.ಕೆ.ಎಸ್.ಎನ್., ೧೯೯೮, ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ. ತುಮಕೂರು, ರಂಜಿತಾ ಪ್ರಕಾಶನ.

೨೫. ರಹಮತ್. ತರೀಕೆರೆ, ೨೦೦೬, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಕೊಟ್ರಯ್ಯ. ಸಿ.ಟಿ.ಎಮ್., ೨೦೦೭, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಮಹಂತೇಶ.ಎನ್.ಎಸ್., ೨೦೦೮, ಚಿತ್ರದುರ್ಗದ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಚಿತ್ರದರ್ಗು, ರೇಣುಕಾ ಪ್ರಕಾಶನ.

೨೮.ಡಾ. ವಾಸುದೇವ ಬಡಿಗೇರ (ಸಂ), ೨೦೦೮, ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಡಾ. ಮಹದೇವ.ಸಿ. (ಸಂ)., ೨೦೦೨, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಡಾ. ನರಸಿಂಹಮೂರ್ತಿ, ೧೯೮೩, ಕರ್ನಾಟಕದಲ್ಲಿ ಪುರಾತತ್ವ ಶೋಧನೆ, ಬೆಂಗಳೂರು, ಐಬಿಎಚ್. ಪ್ರಕಾಶನ.

೩೧. ಸೂರ್ಯನಾಥ್,ಯು.ಕಾಮತ್, (ಸಂ), ೧೯೯೨, ಕೊಡುಗು ಜಿಲ್ಲೆ, ಗ್ಯಾಸೆಟಿಯನ್, ಬೆಂಗಳೂರು, ಕರ್ನಾಟಕ ಗ್ಯಾಸೆಟಿಯ್,

೩೨. ಜೀರಹಳ್ಳಿ, ಶಂಕರೇಗೌಡ ಪರಮಶಿವಯ್ಯ, ೧೯೭೩, ಪಿರಿಯಾಪಟ್ಟಣದ ಕಾಳಗ, ಮೈಸೂರು, ಟಿ.ವಿ. ಮೂರಿಯಲ್.

೩೩. ಪ್ರೊ. ನರಸಿಂಗರಾವ್ (ಸಂ), ೨೦೦೪, ಪಿರಿಯಸಿರಿ, ದ್ವಾದಶಮೋತ್ಸವ ಸವಿನೆನಪಿನ ಸಂಚಿಕೆ, ಮೈಸೂರು, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ ಪಬಿಷರ್ಸ್.

೩೪. ಡಾ.ವಸು, ೨೦೦೪, ಮೌಖಿಕ ಇತಿಹಾಸ, ಬೆಂಗಳೂರು, ಅಂಕಿತ ಪುಸ್ತಕ ಪ್ರಕಾಶನ.

೩೫. ಪರಮಶಿವಯ್ಯ.ಜಿ.ಶಂ. ೧೯೭೬., ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಸಂಗಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೩೬. ಭಗವತಿ. ಎಸ್.ಎಸ್. ಮೇಲಿನಮನಿ. ಎಚ್.ಎಸ್., ೨೦೦೪, ಕನ್ನಡ ಶಾಸನಗಳ ಅಧ್ಯಯನ, ಗದಗ, ವಿದ್ಯಾನಿಧಿ ಪ್ರಕಾಶನ.

೩೭. ನೀಲತ್ತಹಳ್ಳಿ ಕಸ್ತೂರಿ (ಅನು), ೨೦೦೦, ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಡಾ. ಚಿನ್ನಸ್ವಾಮಿ ಸೋಸಲೆ, ೨೦೦೪, ನಮ್ಮ ಗ್ರಾಮಗಳು ಅಂದು–ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಪ್ರೊ.ಲಕ್ಷ್ಮಣ್ ತೆಲಗಾವಿ, ೨೦೦೩, ಸ್ಥಳೀಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಡಾ. ಮೋಹನ್‌ಕೃಷ್ಣ ರೈ. ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಡಾ.ಷೇಕ್ ಅಲಿ.ಬಿ.(ಸಂ)., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಡಾ. ಸದಾಶಿವ.ಕೆ., ೨೦೦೧, ಕರ್ನಾಟಕ ಸಂಕ್ಷಿಪ್ತ ಚರಿತ್ರೆ, ಮೈಸೂರು, ಚೇತನ್‌ಬುಕ್ ಹೌಸ್., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

೪೩. ಪ್ರೊ. ರಂಗಸ್ವಾಮಿ. ಎಸ್.ಎನ್. ೨೦೦೪, ಕರ್ನಾಟಕದ ಪ್ರೌಢ ಇತಿಹಾಸ, ಮೈಸೂರು.

೪೪. ಡಾ. ಶಿವರುದ್ರಸ್ವಾಮಿ ಎಸ್.ಎನ್., ೨೦೦೪, ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ತಿಪಟೂರು ಮತ್ತು ಮೈಸೂರು, ಪೌರಸ್ತ್ರ ಪ್ರಕಾಶನ.

೪೫. ಶಿವತಾರಕ್.ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಡಾ. ಚಿದಾನಂದಮೂರ್ತಿ, ೧೯೮೮೪, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೪೭. ಡಾ.ಚನ್ನಬಸಪ್ಪ.ಎಸ್.ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಸಂಪುಟ-೧ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೮. ಪ್ರೊ. ಬಾಲಸುಬ್ರಹ್ಮಣ್ಯ, ೨೦೦೪, ಕುರುಗೋಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೯. ಫಾಲಾಕ್ಷ, ೨೦೦೬, ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ತಿಪಟೂರು, ಶಶಿಪ್ರಕಾಶನ.

೫೦. ಡಾ. ದೇವರಕೊಂಡರೆಡ್ಡಿ, ೧೯೯೩, ಗಂಗರಶಿಲ್ಪಕಲೆ, ಬೆಂಗಳೂರು, ಕರ್ನಾಟಕ ಲಲಿತಕಲಾ, ಅಕಾಡೆಮಿ.

೫೧. ಡಾ. ಶಿವರಾಮ ಕಾರಂತ, ೧೯೭೫, ಭಾರತೀಯ ಶಿಲ್ಪ, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

೫೨. ಡಾ. ಮರಿಶಾಮಾಚಾರ್, ೨೦೦೦, ಭಾರತೀಯ ಶಿಲ್ಪಕಲೆ, ಬೆಂಗಳೂರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

೫೩. ಭಟ್‌ಸೂರಿ, ೧೯೯೬, ಗೇರುಸೊಪ್ಪೆಯ ಜೈನ್ ವಾಸ್ತು ಮತ್ತು ಮೂರ್ತಿಶಿಲ್ಪ, ಮೈಸೂರು, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

೫೪. ಸೂರ್ಯನಾಥ. ಯು. ಕಾಮತ್ (ಸಂ), ೧೯೮೬, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.

೫೫. ಎಫಿಗ್ರಾಫಿಯ ಕರ್ನಾಟಕ, ಸಂಪುಟ-೪, ೧೯೭೫, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

೫೬. ತಂಬಂಡ ವಿಜಯ್ ಪೂಣಚ್ಚ (ಸಂ), ೨೦೦೧, ಚರಿತ್ರೆ : ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಕ್ಷೇಪಗಳು:

ಎಂ.ಎ.ಆರ್. : ಮೈಸೂರು ಆರ್ಕಾಲಿಜಿಕಲ್ ರೀಪೋರ್ಟ್

ಎಂ.ಜಿ. : ಮೈಸೂರು ಗ್ಯಾಸೆಟಿಯರ್.


ಎ.ಕೆ. : ಎಪಿಗ್ರಾಫಿಯಾ ಕರ್ನಾಟಕ.

ಪಿ.ಪ. : ಪಿರಿಯಾಪಟ್ಟಣ.

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ಉದ್ಯೋಗ	ಸ್ಥಳ
೧.	ರವೀಂದ್ರಕುಮಾರ ಜೈನ	೩೮	ಅರ್ಚಕ	ಕೂಣಸೂರು.
೨.	ಜಗದೀಶ್.ಬಿ.ಜಿ.	೬೦	ನಿವೃತ್ತ ಶಿಕ್ಷಕರು	ಬೆಟ್ಟದಪುರ
೩.	ಮಂಜುಶರ್ಮ	೨೨	ಅರ್ಚಕ	ಬೆಟ್ಟದಪುರ
೪.	ಚೆಲುವಮ್ಮ	೭೦	ಗೃಹಿಣಿ	ದೊಡ್ಡಕಮರಹಳ್ಳಿ
೫.	ಶ್ರೀಕಂಠರಾಜ ಅರಸು	೬೬	ವ್ಯವಸಾಯ	ಭುವನಹಳ್ಳಿ
೬.	ಭೂತಯ್ಯ	೬೫	ಪುರೋಹಿತ	ಬೆಟ್ಟದಪುರ
೭.	ಅನಂತರಾಮಯ್ಯ	೬೦	ಅರ್ಚಕರು	ಬೆಟ್ಟದಪುರ
೮.	ಮಂಜುನಾಥ್.ಬಿ.ವಿ.	೪೫	ಶಿಕ್ಷಕರು	ಬೆಟ್ಟದಪುರ
೯.	ಮೋಹನ್. ಬಿ.ವಿ.	೪೦	ವ್ಯವಸಾಯ	ಬೆಟ್ಟದಪುರ
೧೦.	ಕೃಷ್ಣೆ ಅರಸು	೩೭	ವ್ಯವಸಾಯ	ಬೆಟ್ಟದಪುರ
೧೧.	ಸಿಗಾಂಚಾರ್	೪೩	ಗುಮಾಸ್ತರು	ಬೆಟ್ಟದಪುರ
೧೨.	ಭರತೇಶ್ ಕುಮಾರ್	೩೦	ಅರ್ಚಕರು	ಅನಿವಾಳು
೧೩.	ಚಿಕ್ಕದೇವರಾಜ್ ಅರಸು	೭೮	ನಿವೃತ್ತ ಶಾನುಬೋಗ	ಬೆಟ್ಟದತುಂಗ
೧೪.	ಸಿದ್ದಮಲ್ಲಿಕಾರ್ಜುನ	೪೦	ಮಠಾಧಿಕಾರಿ	ಬೆಟ್ಟದಪುರ
೧೫.	ಮಂಜುನಾಥ	೨೨	ವ್ಯಾಪರಸ್ಥ	ಬೆಟ್ಟದಪುರ
೧೬.	ಸಣ್ಣಜವರಯ್ಯ	೬೦	ವ್ಯವಸಾಯ	ಕೂತ್ತವಳ್ಳಿ.

ತಲನಕ್ಷೆ ಮತ್ತು ಛಾಯಾಚಿತ್ರಗಳು



SIDILU-MALLIKĀRJUNA TEMPLE
BETTADAPURA

2. (p. 32).






ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಬೆಟ್ಟದಮರ



ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ



ಯುಗಾಂತರ ಶಾಸನಶಿಲ್ಪ ಬೆಟ್ಟದಪುರ





ವೀರಭದ್ರ ದೇವಾಲಯ ಬೆಟ್ಟದಪುರ



ರಾಯಿಗೋಪುರ ಬೆಟ್ಟದಪುರ







ಸೂಳೆ ಕೊಳ ಬೆಟ್ಟದಪುರ



ಜೈನ ಬಸದಿ ಬೆಟ್ಟದತುಂಗ








ಶಾಂತಿನಾಥ ಬಸದಿ ಕೂಣಸೂರು.



ಈಶ್ವರ ದೇವಾಲಯ ದೊಡ್ಡನೆರ್ಲೆ







ಆದಿನಾಥ ತೀರ್ಥಂಕರ ಬಸದಿ ಭುವನಹಳ್ಳಿ



ಬೃಹತ್ ಶಿಲಾಯುಗದ ಸಮಾದಿ ಬೇಣಗಾಲು



